೪ ಶಾಸನ ರಚನಾ ಕಾರ್ಯಕಲಾಪಗಳು

೧೯೯೦ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ* ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿ)-೧೯೯೦ ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವವೆನೆಂದರೆ, ''೧೯೯೦ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿ).— ಮಾನ್ಯ ಅಧ್ಯಕ್ಷರೇ, ೧೯೯೦ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ.*

ಈಗ ಸಭೆಯು ಮುಂದುವರಿದು ೨ ಗಂಟೆ ೩೦ ನಿಮಿಷಕ್ಕೆ ಮತ್ತೆ ಸಮಾವೇಶವಾಗುತ್ತದೆ

(ಸದನವು ೧ ಗಂಟೆ ೨೨ ನಿಮಿಷಕ್ಕೆ ಮುಂದೂಡಲ್ಪಟ್ಟು ನಂತರ ೨ ಗಂಟೆ ೩೦ ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಸಭೆಯು ಪುನಃ ೨ ಘಂಟೆ ೫೦ ನಿಮಿಷಕ್ಕೆ ಸಮಾವೇಶಗೊಂಡಿತು.

(ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

೧೯೯೦-೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ವಿತ್ತೀಯ ಕಾರ್ಯಕಲಾಪಗಳು

(ಆಹಾರ. ನಾಗರೀಕ ಪೂರೈಕೆ, ಸಾರಿಗೆ, ಸಹಕಾರ ಇಲಾಖೆಗಳ ಬೇಡಿಕೆಗಳು)

ಉಪಾಧ್ಯಕ್ಷರು.— ಶ್ರೀಯುತ ಜಿ.ಎಸ್. ಆಚಾರ್‌ರವರು ಮಾತನಾಡಬೇಕು. ಈಗ ತಮಗೆಲ್ಲಾ ೧೫ ನಿಮಿಷ ಕಾಲಾವಕಾಶ ಕೊಡುವುದಕ್ಕೆ ಆಗುತ್ತದೆ. ಆದಷ್ಟು ಇವತ್ತು ಮುಗಿಸಬೇಕು. ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ೧೫ ನಿಮಿಷಕ್ಕೆ ತಾವು ಸೀಮಿತ ಮಾಡಿಕೊಳ್ಳಬೇಕು.

† ಶ್ರೀ ಜಿ.ಎಸ್. ಆಚಾರ್ (ಬೈಂದೂರು).— ಸನ್ಮಾನ್ಯ ಉಪಾಧ್ಯಕ್ಷರೇ ಸಹಕಾರ, ಆಹಾರ ಹಾಗೂ ಸಾರಿಗೆ ಖಾತೆಯ ಬೇಡಿಕೆಗಳನ್ನು ಸಮರ್ಥಿಸುತ್ತಾ, ಈ ಇಲಾಖೆಗಳಲ್ಲಿ ಆಗಬೇಕಾದ ಕೆಲವೊಂದು ಸುಧಾರಣೆಗಳನ್ನು ಕುರಿತು ನಾನು ತಮ್ಮ ಮೂಲಕ ಸರಕಾರದ ಗಮನವನ್ನು ಸೆಳೆಯಲಿಕ್ಕೆ ಬಯಸುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಆರ್ಥಿಕ, ಸಾಮಾಜಿಕ, ವ್ಯವಹಾರಿಕ ಅಭಿವೃದ್ಧಿಗಾಗಿ ಕೃಷಿ, ಚಿಕ್ಕ ಕೈಗಾರಿಕೆ, ತೋಟಗಾರಿಕೆ. ಮೀನುಗಾರಿಕೆ. ಹೈನುಗಾರಿಕೆ, ಕೋಳಿಸಾಕಾಣೆ ಮೊದಲಾದ ಯೋಜನೆಗಳ ಅನುಷ್ಠಾನಕ್ಕೆ ನಗರ ಪ್ರದೇಶದಲ್ಲಿ ಬ್ಯಾಂಕ್ ಸೌಲಭ್ಯ ಆರ್ಥಿಕ ನೆರವು, ಗ್ರಾಹಕರ ಚಟುವಟಿಕೆ ಮೊದಲಾದುವುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳಿಸಲಿಕ್ಕೆ ಇರುವಂತಹ ಒಂದು ವ್ಯವಸ್ಥೆ ಸಹಕಾರಿ ರಂಗ. ರಾಜ್ಯದಲ್ಲಿ ೩೦೫೧ ಕೋಟಿ ರೂಪಾಯಿ ದುಡಿಯುವ ಬಂಡವಾಳ ಹಾಗೂ ೪೨೦ ಕೋಟಿ ರೂಪಾಯಿ ಪಾಲು ಬಂಡವಾಳ ಇರುವ ವಿವಿಧ ರೀತಿಯ ವಿವಿಧ ಮಟ್ಟಗಳ ೨೬೬೨೯ ಸಹಕಾರ ಸಂಘಗಳ

* Annexure

ಮೂಲಕ ಈ ಸಹಕಾರ ವ್ಯವಸ್ಥೆ ಇವತ್ತು ಕಾರ್ಯಗತವಾಗುತ್ತಿದೆ. ಈ ರಂಗದಲ್ಲಿ ಶೇಕಡ ೩೦ರಷ್ಟು ಮಂದಿ ಸದಸ್ಯರಾಗಿದ್ದಾರೆ. ಸದಸ್ಯತ್ವವನ್ನು ಹೆಚ್ಚುಗೊಳಿಸುವುದಕ್ಕೆ ಇನೂ ಬಹಳಷ್ಟು ಅವಕಾಶ ಇದೆ, ಇದು ಆಗಬೇಕು. ಆದರೆ ನಮ್ಮ ದುರಾದೃಷ್ಟ; ಮಾತೆತ್ತಿದರೆ ಸಹಕಾರಿ ರಂಗದಲ್ಲಿ ಅವ್ಯವಹಾರ ನಡೆಯುತ್ತಿದೆ, ಹಗ್ಗಣಗಳು ತುಂಬಿಕೊಂಡಿದ್ದಾವೆ ಎನ್ನುವಂತಹ ಮಾತನ್ನು ಅನೇಕ ವರ್ಷಗಳಿಂದ ಕೇಳುತ್ತಿದ್ದೇವೆ. ಸಹಕಾರಿ ರಂಗದ ಗಂಧಗಾಳಿ ಇಲ್ಲದಿದ್ದವರು, ಸಹಕಾರಿ ರಂಗದಲ್ಲಿ ಮೂಲಭೂತವಾದ ಯಾವುದೇ ಅನುಭವ ಇಲ್ಲದಂಥ ಜನ ಸಹಕಾರಿ ರಂಗದ ಮೇಲೆ ಗದಾಪ್ರಹಾರ ಮಾಡುವಂತಹ ಒಂದು ಅವಾಸ್ತವವಾದ ಸ್ಥಿತಿಯನ್ನು ನಾವು ನೋಡುತ್ತಿದ್ದೇವೆ.

ಸಹಕಾರಿ ರಂಗ ಬೆಳೆದು ಬರಲೇಬೇಕಾದ, ಅನಿವಾರ್ಯವಾಗಿ ಇರಲೇಬೇಕಾದ, ಸಹಭಾಗಿತ್ವದಿಂದ ಇರುವಂತಹ ಒಂದು ರಂಗವಾದ್ದರಿಂದ ಎಷ್ಟು ಅನಿಷ್ಟಗಳಿದ್ದರೂ ಕೂಡ ಅವನ್ನು ಸರಿಪಡಿಸಬೇಕು, ಸರಿಪಡಿಸಿ ಈ ರಂಗವನ್ನು ನಿಜವಾದ ರಂಗವನ್ನಾಗಿ ಮಾಡಬೇಕಾದ ಅಗತ್ಯ ಇದೆ. ನಾನು ಒಂದು ದುರುಪಯೋಗದ ವಿಚಾರ ಹೇಳುವುದಾದರೆ, ನಮ್ಮ ವರದಿಯಲ್ಲಿ ಇರುವಂತೆ ೪೦ ಕೋಟಿ ರೂಪಾಯಿಗಳ ದುರುಪಯೋಗದ ಪ್ರಕರಣಗಳು ಈ ರಾಜ್ಯದಲ್ಲಿ ಇವೆ. ೩೦೮೧ ಕೋಟಿ ರೂಪಾಯಿಗಳ ದುಡಿಮೆಯ ಬಂಡವಾಳ ಇರುವಂತಹ ಒಂದು ರಂಗದಲ್ಲಿ ಈ ರೀತಿ ೪೦ ಕೋಟಿ ರೂಪಾಯಿಗಳು ಇರಲೇಬಾರದು. ಆದರೂ ಈ ೪೦ ಕೋಟಿ ರೂಪಾಯಿಗಳು ಒಂದು ಪರ್ಸೆಂಟ್‌ಗಿಂತ ಸ್ವಲ್ಪ ಜಾಸ್ತಿ ಎನ್ನುವುದನ್ನು ದಯಮಾಡಿ ಗಮನಿಸಬೇಕು. ಬೇರೆ ಕೈಗಾರಿಕಾ ರಂಗದಲ್ಲಾಗಲಿ ಇನ್ನಿತರೆ ರಂಗಗಳಲ್ಲಾಗಲಿ ಇರುವಂತಹ ದುರ್ವ್ಯವಹಾರ, ನಷ್ಟವನ್ನು ಹೋಲಿಸಿ ನೋಡಿದರೆ ಸಹಕಾರ ರಂಗದಲ್ಲಿ ಆದಂಥ ದುರ್ವ್ಯವಹಾರ, ನಷ್ಟ ಅಷ್ಟೊಂದು ದೊಡ್ಡದಲ್ಲ. ಈ ರಂಗದಲ್ಲಿ ಇಷ್ಟು ದೊಡ್ಡ ಪ್ರಚಾರ ಏತಕ್ಕೆ ಆಗುತ್ತದೆ ಎಂದರೆ, ಇದರಲ್ಲಿ ಮಹಾಸಭೆಗಳನ್ನು ಕರೆದು ಸರ್ವ ಸದಸ್ಯರ ಸಭೆಯಲ್ಲಿ ಎಲ್ಲಾ ವಿಚಾರಗಳನ್ನು ಬಹಿರಂಗವಾಗಿ ಹೇಳುವಂತಹ ವ್ಯವಸ್ಥೆ ಇರುವುದರಿಂದ ಈ ರಂಗದಲ್ಲಿ ಈ ಕುರಿತಂತೆ ಪ್ರಚಾರ ಇದೆ, ಜನರಿಗೆ ತಿಳಿಯುತ್ತದೆ. ಜನರಿಗೆ ತಿಳಿಸದೆ ಗುಪ್ತವಾಗಿ ನಡೆಯುವಂತಹ ಬೇರೆ ಬೇರೆ ರಂಗಗಳಲ್ಲಿ ಆದಂಥ ನಷ್ಟವನ್ನಾಗಲಿ, ಅವ್ಯವಹಾರಗಳನ್ನಾಗಲಿ ಇವತ್ತು ಅನೇಕರು ಗಮನಿಸುವುದಿಲ್ಲ ಸಹಕಾರ ರಂಗದ ಮೇಲೆ ಮಾತ್ರ ಈ ಗದಾಪ್ರಹಾರ ಮಾಡುವಂತಹ ಒಂದು ವ್ಯವಸ್ಥೆ ನಮ್ಮ ಸಮಾಜದಲ್ಲೇ ಬೆಳೆದು ಬಂದಿದೆ. ಇದು ದುರದೃಷ್ಟಕರ ಸಹಕಾರಿ ರಂಗದಲ್ಲಿ ಇದು ಹೋಗಬೇಕಾದರೆ ಅನೇಕ ಮಂದಿ ಹೇಳಿದರು ಇದರಲ್ಲಿ ಇದ್ದವರೆ ಇರುತ್ತಾರೆ, ಬಂದವರೇ ತಿರುಗಿ ತಿರುಗಿ ಬರುತ್ತಾರೆ. ಅಂತಹ ವ್ಯವಸ್ಥೆ ಇದು. ಹೊಸಬರು ಬರುವುದಕ್ಕೆ ಅವಕಾಶ ಇದೆ ಬರಬೇಕು, ನಮ್ಮ ದುರಾದೃಷ್ಟ ಸಹಕಾರಿ ರಂಗಕ್ಕೆ ಯುವಕರು ಮತ್ತು ಹೊಸಬರು ಆಕರ್ಷಿತರಾಗುವುದಿಲ್ಲ, ಅವರು ಹೊಸದಾಗಿ ಸದಸ್ಯರಾಗಬೇಕು. ಇದರ ಡೆಮಾಕ್ರಟಿಕ್ ಕ್ಯಾರೆಕ್ಟರ್ ಯಾವುದಿದೆ ಅದು ಉಳಿಯಬೇಕು, ಉಳಿಯದೆ ಇರುವ ಹಾಗೆ ಆದಂಥ ಒಂದು ವ್ಯವಸ್ಥೆ ಏನೆಂದರೆ, ಈ ನಾಮಕರಣ ಪದ್ಧತಿ, ಅನೇಕ ವರ್ಷಗಳಿಂದ ಹಿಂದೆ ಯಾವುದೇ ಸರ್ಕಾರವೇ ಇರಲಿ ತಮ್ಮ ಪಕ್ಷದ ಕಾರ್ಯಕರ್ತರ ಕೈಯಲ್ಲಿ ಈ ಸಹಕಾರಿ ರಂಗ ಉಳಿಯಬೇಕು ಎನ್ನುವಂಥ ಕಾರಣದಿಂದ ಬೇರೆ ಬೇರೆ ಸೆಕ್ಷನ್‌ಗಳ ಅಡಿಯಲ್ಲಿ ತಮಗೆ ಬೇಕಾದಂತಹವರನ್ನು ನಾಮಕರಣ ಮಾಡತಕ್ಕಂಥ ವ್ಯವಸ್ಥೆಯಾದ್ದರಿಂದ ಇದರ ಡೆಮಾಕ್ರಟಿಕ್ ಕ್ಯಾರೆಕ್ಟರ್ ಬುಡ ಮೇಲು ಆಗುವಂತಹ ವ್ಯವಸ್ಥೆ ಆಗಿದೆ. ನಾನು ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ಕೆಲವು ವರ್ಷಗಳ ಹಿಂದೆ ಕೆಲವು ಜನರು ಗೆದ್ದು ಬಂದಾಗ ಅವರು ಅಧಿಕಾರ ವಹಿಸಿಕೊಳ್ಳಬಾರದು ಎನ್ನುವ ಕಾರಣದಿಂದ ನಾಮಕರಣ ಮಾಡಿದರು. ಆ ನಾಮಕರಣ ತಪ್ಪು ಎಂದು ಹೈಕೋರ್ಟ್ ಸ್ಟೇ ಆರ್ಡರ್ ಕೊಟ್ಟಿತು, ನಾಮಕರಣ ಮಾಡಿ ಬಹುಮತವನ್ನು ಬದಲಾವಣೆ ಮಾಡುವಂತಹ ವ್ಯವಸ್ಥೆ ಯಾವುದು ಇದೆ, ಕೇವಲ ದುರ್ಬಲವರ್ಗದವರಿಗೆ ಮಹಿಳೆಯರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದರಿಗೆ ಒಂದು ವೇಳೆ ಆಡಳಿತ ಮಂಡಲಿಯಲ್ಲಿ ಅವಕಾಶ ಇಲ್ಲದೆ ಇದ್ದರೆ ಆಗ ನಾಮಕರಣ ಮಾಡಲಿ ಆದರೆ ಒಂದು ಆಡಳಿತವನ್ನೇ ಬುಡಮೇಲು ಮಾಡುವಂತಹ ವ್ಯವಸ್ಥೆ ಆಗಬಾರದು. ಇದು ಹೋಗಬೇಕು ಇದರಿಂದಲೇ ತೊಂದರೆಯಾಗುತ್ತದೆ ಆದ್ದರಿಂದ ನಮ್ಮ ಡೆಮಾಕ್ರಟಿಕ್ ಕ್ಯಾರೆಕ್ಟರ್ ಯಾವುದು ಇದೆ ಅದನ್ನು ಉಳಿಸುವಂತಹ ವ್ಯವಸ್ಥೆಯಾಗಬೇಕು. ಚುನಾವಣಗಳು ಕಾಲಕಾಲಕ್ಕೆ ಸರಿಯಾಗಿ ನಡೆಯಬೇಕು. ಈಗ ಮಳೆಗಾಲ ಇದೆ ಎಂದು ಮಾನ್ಯ ಸಚಿವರು ಚುನಾವಣೆಯನ್ನು ಮುಂದಕ್ಕೆ ಹಾಕಿದ್ದಾರೆ. ಅನೇಕ ಶಾಸಕರು ಒತ್ತಾಯ ಮಾಡಿದರು ಅದು ಸತ್ಯ, ಆದರೆ ಚುನಾವಣೆಗಳು ಆಗುವ ಕಾಲದಲ್ಲಂತೂ ಆಗಬೇಕು, ಮುಂದೆ ಚುನಾವಣೆಗಳನ್ನು ನಡೆಸಿಕೊಡಬೇಕೆಂದು ನಾನು ಅವರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ. ಸಹಕಾರಿ ರಂಗದಲ್ಲಿರುವ ಅವ್ಯವಹಾರಗಳನ್ನು ಮಟ್ಟ ಹಾಕಬೇಕಾದರೆ ಅದಕ್ಕೆ ಕಾನೂನಿನಲ್ಲಿ ಉಗ್ರವಾದ ಕೆಲವು ಕಲಮುಗಳನ್ನು ಸೇರಿಸಬೇಕು. ಇವತ್ತಿನ ಕಾನೂನುಗಳಲ್ಲಿ ಅದಕ್ಕೆ ಅವಕಾಶ ಇಲ್ಲ. ನಮ್ಮ ಜಿಲ್ಲೆಯಲ್ಲೇ ಇರುವಂಥ ಒಂದು ಪ್ರಾಥಮಿಕ ಸಹಕಾರ ಸಂಘದಲ್ಲಿ ಅನೇಕ ವರ್ಷಗಳ ಹಿಂದೆ ಒಬ್ಬ

ಪ್ರಬಲ ವ್ಯಕ್ತಿ ಕೆಲವು ಲಕ್ಷ ರೂಪಾಯಿಗಳ ದುರುಪಯೋಗ ಮಾಡಿದರು. ಅದು ಸಿರತಾಡಿ ಸಹಕಾರ ಸಂಘ. ಅದರಲ್ಲಿ ಹೈಕೋರ್ಟ್‌ನಿಂದ ಬೇರೆ ಬೇರೆ ಹಂತಗಳಲ್ಲಿ ಸ್ಟೇ ಆರ್ಡರ್ ತಂದರು, ನಂತರ ಸಿ.ಒ.ಡಿ. ಎನ್‌ಕ್ವೈರಿಗೆ ಹೋಯಿತು. ಸಿ.ಒ.ಡಿ. ಎನ್‌ಕ್ವೈರಿಗೆ ಹೋದರೂ ಅದರ ರಿಪೋರ್ಟ್ ಇವತ್ತಿಗೂ ಬರಲಿಲ್ಲ. ಅನೇಕ ವರ್ಷಗಳು ಆಯಿತು. ಸಹಕಾರಿ ರಂಗದಲ್ಲಿ ಒಂದು ರಿಪೋರ್ಟ್ ತರಿಸಿಕೊಳ್ಳುವುದಕ್ಕೆ ಆಗದೇ ಇದ್ದರೆ ಇದಕ್ಕೆ ಒಂದು ಕಾನೂನಿನ ವ್ಯವಸ್ಥೆ ಇಲ್ಲದಿದ್ದರೆ ಕೆಲವು ವರ್ಷಗಳ ಮೇಲೆ ಅವರನ್ನು ಹಿಡಿಯುಲಿಕ್ಕೆ ಆಗದಿದ್ದ ಒಂದು ವ್ಯವಸ್ಥೆ ಅಥವಾ ಒಂದು ದುರುಪಯೋಗದ ಪ್ರಕರಣ ಆಗಿ ಹೋಗುತ್ತದೆ. ಆದ್ದರಿಂದ ಕಾನೂನಿಗೆ ಶೀಘ್ರವಾದ ಒಂದು ತಿದ್ದುಪಡಿಯನ್ನು ತಂದು ಕೂಡಲೇ ಅಂತಹವರನ್ನು ಹಿಡಿಯುವ ವ್ಯವಸ್ಥೆ ಆಗಬೇಕು ನಮ್ಮಲ್ಲಿ ಒಂದು ಮೀನು ಮಾರಾಟ ಮಹಾಮಂಡಲಿ ಎಂದು ಇದೆ, ಅದರ ಹಣಕ್ಕೆ ಸರ್ಕಾರದವರೇ ಗ್ಯಾರಂಟಿ ಕೊಟ್ಟಿದ್ದಾರೆ. ಡಿ.ಸಿ.ಸಿ. ಬ್ಯಾಂಕ್ ಕೊಟ್ಟಂಥ ಒಂದು ಕೋಟಿ ರೂಪಾಯಿಗೆ ಸರ್ಕಾರ ಗ್ಯಾರೆಂಟಿ ಕೊಟ್ಟಿದೆ. ಆ ಗ್ಯಾರಂಟಿಯನ್ನೇ ರೀವೋಕ್ ಮಾಡಿದರೆ ಸರ್ಕಾರದ ಮೇಲ್ಮಟ್ಟದವರು ರಿವೋಕ್ ಮಾಡಬೇಡಿ ಅವರಿಗೆ ರಕ್ಷಣೆ ಕೊಡುವಂಥ ರಾಜಕೀಯ ವ್ಯವಸ್ಥೆ ಬರುತ್ತದೆ. ಇದು ಈ ವರ್ಷ ಅಲ್ಲ, ಬಹಳ ಹಿಂದೆ ಆಗಿದ್ದು. ಈ ವ್ಯವಸ್ಥೆ ಅಡ್ಡಿ ಬರುತ್ತದೆ. ಸಹಕಾರ ರಂಗ ಹೇಗೆ ಬೆಳೆಯಬೇಕು, ಆದ್ದರಿಂದ ಮೂಲಭೂತವಾಗಿ ಸಹಕಾರ ರಂಗವನ್ನು ಸದೃಢಗೊಳಿಸುವಂತಹ ಕೆಲಸ ಆಗಬೇಕು. ಸಹಕಾರ ರಂಗದಲ್ಲಿ ಕೆಲಸ ಮಾಡತಕ್ಕಂಥ ಹೈಯಸ್ಟ್ ಲೆವೆಲ್‌ನಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಅಥವಾ ನೀತಿ ನಿರೂಪಕರು ಇವರು ಈ ಕುರಿತು ಸದೃಢವಾದ ನಿಲುವೊಂದನ್ನು ತಳೆಯಬೇಕೆಂದು ನಾನು ಹೇಳುತ್ತೇನೆ. ನಮ್ಮ ಬಡ್ಡಿ ರಿಯಾಯಿತಿ ಧೋರಣೆ, ಸಾಲ ಮನ್ನಾ ಧೋರಣೆ ಏನಿದೆ, ಇತರಿಂದ ಸಹಕಾರ ರಂಗ ಸಾಯುತ್ತಿದೆ. ಬಡ್ಡಿ ರಿಯಾಯಿತಿಯಿಂದ ಪ್ರಾಥಮಿಕ ಸಹಕಾರ ಸಂಘಗಳು ಮತ್ತು ಡಿ.ಸಿ.ಸಿ. ಬ್ಯಾಂಕುಗಳಿಗೆ ಕೊಡಬೇಕಾದ ಹಣ ಏನಿದೆ, ಕೆಲವು ಕೋಟಿ ರೂಪಾಯಿಗಳನ್ನು ಇನ್ನು ಕೊಟ್ಟಿಲ್ಲ. ಹಿಂದಿನ ಸರ್ಕಾರದ ಒಂದು ಬಳುವಳಿ ಇದು. ಇದು ಕೊಡದಿದ್ದರೆ ಆ ಸಹಕಾರ ಸಂಘಗಳು ಸಾಯುತ್ತವೆ. ಡಿ.ಸಿ.ಸಿ. ಬ್ಯಾಂಕುಗಳು ಸಾಯುವಂಥ ಪರಿಸ್ಥಿತಿಗೆ ಬಂದಿವೆ. ಈ ವರ್ಷವಂತೂ ರಿಕವರಿಯೇ ಇಲ್ಲ. ಎಲ್ಲಾ ಸ್ಟೇಜ್‌ನಲ್ಲಿ ಕೃಷಿ ಆಧಾರಿತ ಸಹಕಾರ ಸಂಘಗಳು ಯಾವುವು ಇವೆ ಆ ವ್ಯವಸಾಯ ಸಹಕಾರ ಸಂಘಗಳಲ್ಲಿ ರಿಕವರಿಯಾಗದೆ ಬಹಳ ತೊಂದರೆಯಾಗಿದೆ. ಕೇಂದ್ರ ಸರ್ಕಾರದ ಧೋರಣೆ ಮೂಲಕ ಹೆಚ್ಚೇನೂ ಸಾಲ ಮನ್ನಾ ಆಗುವುದಿಲ್ಲ. ಎರಡು ವರ್ಷ ಅಣೇವಾರಿ ಆಗಬೇಕು ಇತ್ಯಾದಿ ಇತ್ಯಾದಿ ಇದೆ. ಆ ಧೋರಣೆ ಪ್ರಕಾರ ಹೆಚ್ಚಿಗೆ ಸಾಲ ಮನ್ನಾ ಆಗುವುದಿಲ್ಲ. ಕೇವಲ ಕೆಲವೇ ಕೋಟಿ ರೂಪಾಯಿ ಆಗುತ್ತದೆ. ಇದನ್ನು ನಿರ್ದಿಷ್ಟವಾಗಿ ಹೇಳಿ. ಅಪೆಕ್ಸ್ ಬ್ಯಾಂಕಿನವರು ಈಗ ತಿಳಿಸಿದ್ದಾರೆ. ಇಂತಿಷ್ಟೇ ಬಡ್ಡಿ ರಿಯಾಯಿತಿ ಸಿಗುವಂಥಾದ್ದು ಇದೆ. ಇಷ್ಟು ಸಾಲ ಮನ್ನಾ ಆಗುವುದಿಲ್ಲವೆಂದು ಜನರಿಗೆ ಹೇಳಿದರೆ ಅವರಿಗೆ ನಿರ್ದಿಷ್ಟವಾಗಿ ಗೊತ್ತಾಗುತ್ತದೆ, ಸಹಕಾರಿ ಸಂಘಗಳಲ್ಲಿ ಇರುವವರು ಮುಂದಿನ ಚುನಾವಣೆ ಸಂದರ್ಭದಲ್ಲಿ ಸುಸ್ತಿದಾರರಾಗಬಾರದು. ಈಗ ಸರ್ಕಾರ ಹೊರಡಿಸಿದಂಥ ಆರ್ಡರ್ ಪ್ರಕಾರ ೩ ತಿಂಗಳು ಸುಸ್ತಿದಾರರಲ್ಲ ಅನ್ನುವಂಥಾ ಕಾನೂನು ಪ್ರಕಾರ ಸರ್ಕಾರದ ಕೃಪಕಟಾಕ್ಷದಿಂದ ವೋಟು ಕೊಡುವಂಥ ಒಬ್ಬ ವೋಟರ್ ಆಗಿರಬಾರದು. ೩ ತಿಂಗಳಿಗೆ ಅವನು ಸುಸ್ತಿದಾರನಲ್ಲ. ೩ ತಿಂಗಳು ಆದ ಮೇಲೆ once he is elected he will continue as the Director. ಸರ್ಕಾರದ ಕೃಪಕಟಾಕ್ಷದಿಂದ ಆತ ಯಾವುದೇ ಡೈರೆಕ್ಟರ್ ಆಗಬಾರದು. ಆತ ಸ್ವಂತ ಸುಸ್ತಿದಾರನಲ್ಲದ ಒಬ್ಬ ಡೈರೆಕ್ಟರ್ ಆಗಿ ಬರಬೇಕು, ಹಾಗೆ ಆಗಬೇಕಾದರೆ, ಸಾಲಾ ಮನ್ನಾ ಧೋರಣೆ ಕುರಿತು ಸ್ಪಷ್ಟ ನಿಲುವು ರೂಪಿಸಲ್ಪಡಬೇಕು. ಇನ್ನೂ ಕೆಲವು ಅನಿಷ್ಟಗಳಿಗೆ ಕಾರಣವನ್ನು ನಾನು ಮೊದಲೇ ಹೇಳಿದ್ದೆ. ಒಂದು ನಾಮಕರಣ. ಸೆಕ್ಷನ್ ೨೯ ಡಿ'ಯಲ್ಲೂ ನಾಮಕರಣ. ಸೆಕ್ಷನ್ ೫೩ರಲ್ಲೂ ನಾಮಕರಣ, ಸೆಕ್ಷನ್ ೩೦ 'ಬಿ' ನಲ್ಲೂ ನಾಮಕರಣ ಆದನ್ನು ಮಾನ್ಯ ಸಚಿವರು "This will be sparingly used" ಎಂದು ಹೇಳಿದರು. ಇವತ್ತು ಯಾವುದಕ್ಕೆ ಉಪಯೋಗವಾಗುತ್ತಿದೆ? ಸಂಬಂಧಪಟ್ಟ ಸಹಕಾರ ರಂಗಳು ಸಣ್ಣ ಮಟ್ಟದಲ್ಲೇ ಇರಲಿ, ತಾಲ್ಲೂಕು ಮಟ್ಟದಲ್ಲೇ ಇರಲಿ, ಜಿಲ್ಲಾ ಮಟ್ಟದಲ್ಲೇ ಆಗಲಿ, ಆಯಾ ಮಟ್ಟದಿಂದ ಹೊರಕ್ಕೆ ಹೋಗಬೇಕಾದರೆ ಮೇಲಾಧಿಕಾರಿಗಳ ಪರವಾನಿಗೆ ಬೇಕು. ಒಬ್ಬ ಗ್ರಾಮ ಮಟ್ಟದ ಸಹಕಾರ ಸಂಘದ ನೌಕರನಾಗಲಿ, ಅಧ್ಯಕ್ಷರಾಗಲೀ, ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳ ಸಭೆಗೆ ಹೋಗಬೇಕಾದರೆ ಇವರ ಪರವಾನಿಗೆ ಬೇಕು. ಪರವಾನಿಗೆ ಕೇಳಿದರೆ ಪರವಾನಿಗೆ ಪಕ್ಕನೆ ಸಿಗುವುದಿಲ್ಲ. ಮೀಟಿಂಗ್‌ಗೆ ಬರಬೇಕೆಂದು ಹೇಳುವವರು ಮುಂಚಿತವಾಗಿ ಪರವಾನಗಿ ಕೊಡುವುದೂ ಇಲ್ಲ. ಇಂಥಾ ಸಂದಿಗ್ಧವಾದ ಮತ್ತು ಸರಿಯಾಗಿಲ್ಲದ ಒಂದು ವ್ಯವಸ್ಥೆ ಇದೆ. ಇಂಥಾದ್ದೆಲ್ಲ ಹೋಗಬೇಕು. ಸಹಕಾರ ರಂಗದಲ್ಲಿ ಪ್ರಚಾರ, ರಜತೋತ್ಸವ ಇತ್ಯಾದಿಯೆಲ್ಲ ಆಗುವಂಥಾದ್ದು ಸ್ವಾಭಾವಿಕ, ಇದು ಹಿಂದಿನಿಂದ ನಡೆದು ಬಂದದ್ದು. ಅದಕ್ಕೆ ಒಂದು ಮಿತಿಯನ್ನು ಹಾಕಿದ್ದಾರೆ. ನೌಕರರಿಗೂ ಕೂಡ ಒಂದು ಮಿತಿಯನ್ನು ಹಾಕಿದ್ದಾರೆ.

ಸಹಕಾರ ಸಂಸ್ಥೆಗಳಲ್ಲಿ ನೇಮಕ ಮಾಡಿ ಕೊಳ್ಳುವುದಕ್ಕೆ ಕೆಲವು ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರದ ಪಾಲೇ ಇಲ್ಲ. ಯಾವುದೇ ನೆರವೂ ಇಲ್ಲ, ಅವರ ಒಂದು ಪಾಲು ಬಂಡವಾಳ ಅಥವಾ ವರ್ಕಿಂಗ್ ಕ್ಯಾಪಿಟಲ್ ಆಧಾರದ ಮೇಲೆ ಅಪ್ರೂವ್ಡ್ ಕೇಡರ್ ಸ್ಟ್ರೆಂಗ್ತ್ ಇದೆ. ಅಪ್ರೂವ್ಡ್ ಕೇಡರ್ ಸ್ಟ್ರೆಂಗ್ತ್‌ನಲ್ಲಿ ಅಪಾಯಿಂಟ್ ಮಾಡಿಕೊಳ್ಳುವುದಕ್ಕೂ ಕೂಡಾ ಇವತ್ತು ರಿಸ್ಟ್ರಿಕ್ಷನ್ ಇದೆ, ಉದಾಹರಣೆಗೆ ರಾಜ್ಯದ ಗೃಹ ನಿರ್ಮಾಣ ಮಹಾ ಮಂಡಲ ಎಂದು ಇದೆ, ಇತ್ತೀಚೆಗೆ ನಾನು ಅದರ ಅಧ್ಯಕ್ಷನಾದೆ. ಅದರಲ್ಲಿ ಶೇಕಡ ೫೦ರಷ್ಟು ಸಿಬ್ಬಂದಿಯೇ ಇಲ್ಲ. ೮೦ ಪರ್ಸೆಂಟ್ ಮೇಲೆ ರಿಕವರಿ ಇದೆ. ಒಳ್ಳೆಯ ಸಂಸ್ಥೆ. ಇನ್ನೂ ಹೆಚ್ಚಿಗೆ ಕೆಲಸ ಮಾಡಬೇಕು, ಹೆಚ್ಚಿನ ಜನರಿಗೆ ಗೃಹ ನಿರ್ಮಾಣಕ್ಕೆ ಸಾಲ ಕೊಡಬೇಕು, ಈ ಕೆಲಸ ಮಾಡಬೇಕಾದರೆ ನಮಗೆ ಸಿಬ್ಬಂದಿಗಳಿಲ್ಲ. ದಯವಿಟ್ಟು ೫೦ ಪರ್‌ಸೆಂಟ್ ಅಲ್ಲದಿದ್ದರೂ ಸ್ವಲ್ಪವಾದರೂ ಸ್ಟಾಫ್ ತೆಗೆದುಕೊಳ್ಳುವುದಕ್ಕೆ ಪರ್ಮಿಷನ್ ಕೊಡಿ, ನಿಮ್ಮ ರೋಸ್ಟರ್ ಪ್ರಕಾರವೇ ನಿಮ್ಮ ಅಧಿಕಾರಿಗಳೇ ಇದ್ದು ನೇಮಕ ಮಾಡಿಕೊಳ್ಳುತ್ತೇವೆಂದರೆ, ಅದಕ್ಕೆ ಒಪ್ಪಿಗೆ ಆಯಿತು. ಆದರೆ ಅಂತಿಮವಾಗಿ ತೀರ್ಮಾನ ಕಮ್ಯೂನಿಕೇಟ್ ಆಗುವಾಗ ಮುಂದಿನ ಜನರಲ್ ಬಾಡಿ ಮೀಟಿಂಗ್ ನಂತರ ಈ ಅರ್ಜಿಯನ್ನು ಪುನ: ಸಲ್ಲಿಸುವುದು ಎಂದು ಕಳುಹಿಸಿದ್ದಾರೆ. ಅಂದರೆ ಈಗಿದ್ದವರು ಪ್ರಯೋಜನವಿಲ್ಲ, ಮುಂದಿನ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಒಳ್ಳೆಯವರು ಬರುತ್ತಾರೆ ಅಂದ ಹಾಗೆ ಆಯಿತು. ಆಮೇಲೆ ಇನ್ನೊಂದು ಆರ್ಡರ್ ಬಂದು ಅದರಲ್ಲಿ ಜನರಲ್ ಬಾಡಿ ಮೀಟಿಂಗ್ ಮುಂದೆ ಹಾಕಿದೆಯೆಂದು ತಿಳಿಸುತ್ತಾರೆ. ನಾವು ಸಂಸ್ಥೆಗಳನ್ನು ನಡೆಸಬೇಕೋ ಬೇಡವೋ ಇದರ ಜೊತೆಗೆ ಇನ್ನೂ ಒಂದು ಬರುತ್ತದೆ. ಸರ್ಕಾರದಲ್ಲಿ ಏನು ನಡೆಯುತ್ತದೆ ಎಂದರೆ, ಕೆಳಮಟ್ಟದಲ್ಲಿ ಅಧಿಕಾರಿಗಳನ್ನು ತುಂಬುವ ಬದಲಿಗೆ ಆಡಿಷನಲ್ ರಿಜಿಸ್ಟ್ರಾರ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ, ಮಾನ್ಯ ಅಧ್ಯಕ್ಷರೇ, ಈ ರೀತಿಯಾದರೆ

ಈ ಸಹಕಾರಿ ರಂಗ ಬದುಕುವುದಿಲ್ಲ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಕಚೇರಿಯಲ್ಲಿ, ಡೆಪ್ಯುಟಿ ರಿಜಿಸ್ಟ್ರಾರ್ ಕಚೇರಿಯಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ. ಮೇಲ್ದರ್ಜೆಯ ಹುದ್ದೆಗಳು ಎಲ್ಲಾ ಭರ್ತಿಯಾಗುತ್ತಾ ಇವೆ. ಅದಕ್ಕೆ ನಾನು ಬೇಡ ಎನ್ನುವುದಿಲ್ಲ. ಸಹಕಾರಿ ರಂಗದ ಮೇಲೆ ಸೂಪರ್ ಸ್ಟ್ರಕ್ಚರ್ ಯಾವುದಿದೆ ಅದು ಒಳ್ಳೆಯ ರೀತಿಯಲ್ಲಿ ಆಗಬೇಕು. ಅನುಭವ ಅಧಿಕಾರಿಗಳಿಗೆ ಪ್ರಮೋಷನ್ ಇತ್ಯಾದಿ ಸಿಗಬೇಕು ; ಬೇಡ ಎಂದು ಹೇಳುವುದಿಲ್ಲ. ಆದರೆ ಅದೇ ರೀತಿಯಲ್ಲಿ ತಳಪಾಯ ಕೂಡ ಸರಿಯಾಗಿ ಇಲ್ಲದಿದ್ದರೆ, ಕೇವಲ ಮೇಲಿನವರು ಕುಳಿತುಕೊಂಡು ಯಾವುದೇ ಕೆಲಸವನ್ನು ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ರಾಜ್ಯ ಸಹಕಾರಿ ಫೆಡರೇಷನ್ ಎಂದು ಒಂದು ಇದೆ, ನಾಲ್ಕು ಸಂಸ್ಥೆಗಳ ವಿಲೀನದಿಂದ ಇದು ಸ್ಥಾಪಿತವಾಗಿದೆ. ಮೊದಲು ಕೋ-ಆಪರೇಟಿವ್ ಯೂನಿಯನ್ ಎಂದು ಇತ್ತು. ಅನಂತರ ಅದು ವಿಲೀನ ಆಗುವಾಗಲೂ ಸಹ ಅದಕ್ಕೂ ಒಂದು ಕಾನೂನು ಇದೆ. ವೈಯಕ್ತಿಕ ಸದಸ್ಯರು ಇರುವ ಸಂಸ್ಥೆಗಳು ಹಾಗೂ ಸಂಯೋಜಿತ ಸಹಕಾರಿ ಸಂಘಗಳು ಇರುವ ಸಂಸ್ಥೆಗಳು ಏನಿವೆ ಕಾನೂನು ಪ್ರಕಾರ ಇವುಗಳನ್ನು ಒಟ್ಟು ಮಾಡಲಿಕ್ಕೆ ಆಗುವುದಿಲ್ಲ. ಅದರ ಮೇಲೆ ಅಪೀಲ್ ಇದೆ. ಹಿಂದಿನ ಸರಕಾರ ಇದ್ದಾಗ ಮಾನ್ಯ ಏಕಾಂತಯ್ಯನವರ ಮುಂದೆ ಅಪೀಲು ಬಂತು. ಆದರೆ ಅದು ತೀರ್ಮಾನ ಆಗದೆ ಹಾಗೆಯೇ ಉಳಿದಿದೆ. ಹೀಗೆ ಈ ಸಂಸ್ಥೆ ಫೆಡರೇಷನ್ ಆಯಿತು. ಸರಕಾರದಿಂದ ನಾಮಕರಣ ಆಯಿತು. ಕಳೆದ ಸರಕಾರ ಹೋದಾಗ ನಾಮಕರಣ ಸದಸ್ಯರನ್ನು ತೆಗೆದು ಹಾಕಿದಾಗ ಆ ಸಂಸ್ಥೆ ಬರೇ ಎಂ.ಡಿ. ಒಬ್ಬರ ಕೈಗೆ ಬಂತು. ಸ್ಪೆಷಲ್ ಆಫೀಸರ್ ಹಾಕಬೇಕೆಂದಾಗ ಸ್ಪೆಷಲ್ ಆಫೀಸರ್ ಹಾಕಲಿಕ್ಕೆ ಇಲ್ಲ, ಇದರಲ್ಲಿ ಅವಕಾಶ ಇಲ್ಲ ಎಂದಾಯಿತು. ಆಗ ಐದು ರಾಜ್ಯ ಮಟ್ಟದ ಫೆಡರೇಶನ್‌ಗಳ ಅಧ್ಯಕ್ಷರು ಆಟೋಮೆಟಿಕ್ ಆಗಿ ನಾನ್‌ಅಫಿಷಿಯಲ್ ಮೆಂಬರ್ ಆಗಿರುತ್ತಾರೆ ೮ ಜನರ ಕೋರಮ್ ಆಗಬೇಕು. ಎರಡು ಜನ ಅಧಿಕಾರಿ ಸದಸ್ಯರು ಇರುತ್ತಾರೆ. ಆದುದರಿಂದ ಸರಕಾರ ೩ ಜನರನ್ನು ನಾಮಕರಣ ಮಾಡಿತು. ಅಧ್ಯಕ್ಷರನ್ನು ಆರಿಸಿ ಈ ಸಂಸ್ಥೆಯನ್ನು ನಡೆಸಬೇಕೆಂಬ ಉದ್ದೇಶ ಇದರಲ್ಲಿ ಇತ್ತು. ನಾಲ್ಕು ಸಲ ಅಧ್ಯಕ್ಷರ ಚುನಾವಣೆಗೆ ಮೀಟಿಂಗ್ ಕರೆದರು. ಆದರೆ ಅದಕ್ಕೆ ಯಾವ ಅಧಿಕಾರಿಯೂ ಬರುವುದಿಲ್ಲ. ಅಧ್ಯಕ್ಷರ ಚುನಾವಣೆಗೆ ನೀವು ಹೋಗಬೇಕಾದರೆ ಸರಕಾರದಿಂದ ಸ್ಪಷ್ಟವಾದ ನಿರ್ದೇಶನ ಬೇಕು. ಇಂಥ ಒಂದು ಆರ್ಡರ್ ಇರುವಾಗ, ಅಧ್ಯಕ್ಷರನ್ನು ಆಯ್ಕೆ ಮಾಡಬೇಕೆಂದು ಸರಕಾರದವರೇ ಹೇಳಿರುವಾಗ, ಇಂಥ ನಿರ್ದೇಶನ ಬಂದಾಗ, ಒಂದಕ್ಕೊಂದು ಕಾಂಟ್ರವರ್ಸಿಯಲ್ ಉಂಟಾಗುವ ಪರಿಸ್ಥಿತಿಯು ಇದೆ. ಈ ಬಗ್ಗೆ ಸರಕಾರ ಸೂಕ್ತ ನಿರ್ದೇಶನಗಳನ್ನು ಸ್ಪಷ್ಟವಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಂತೆಯೇ ಟಿಎಪಿಸಿಎಂ.ಗಳೂ ಪುನಶ್ಚೇತನವಾಗಬೇಕು. ರಾಜ್ಯದಲ್ಲಿರುವ ಅನೇಕ ಟಿಎಪಿಸಿಎಂ ಗಳ ವ್ಯವಸ್ಥೆಯು ಸರಿಯಾಗಿಲ್ಲ. ತಾಲ್ಲೂಕು ಮಟ್ಟದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ವ್ಯವಸ್ಥೆಯೂ ಸರಿಯಾಗಿ ಆಗಬೇಕು. ಮಾನ್ಯ ಮುಖ್ಯ ಮಂತ್ರಿಯವರು ಇತ್ತೀಚೆಗೆ ಒಂದು

ಸಮಾರಂಭದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಇದರಲ್ಲಿ ಟೂಟೈರ್ ಸಿಸ್ಟಮ್ ಮಾಡಬೇಕು, ಎರಡೆರಡು ಸಂಸ್ಥೆಗಳ ಅಗತ್ಯ ಇಲ್ಲ ಎಂದು ಹೇಳಿದ್ದಾರೆ. ಆಂಧ್ರಪ್ರದೇಶದಲ್ಲಿ ಹೀಗೆ ಮಾಡಿದ್ದಾರೆ. ಇತ್ತೀಚಿಗೆ ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವಿಚಾರದಲ್ಲಿ ಒಂದು ವಾರಪತ್ರಿಕೆಯಲ್ಲಿ ಟೀಕೆಗಳು ಬಂದಿವೆ. ಆ ಟೀಕೆ ಕುರಿತು ತನಿಖೆ ಮಾಡಿ ಎಂದು ಅದರ ಅಧ್ಯಕ್ಷರೇ ಕೇಳಿಕೊಂಡಿದ್ದಾರೆ. ಯಾರ ಮೇಲಾದರೂ ಒಂದು ಆಪಾದನೆ ಬಂದಾಗ ಆ ಸಂಸ್ಥೆಯ ಹಿತದೃಷ್ಟಿಯಿಂದ ವಿಚಾರಣೆ ಮಾಡಿಸುವುದು ಒಳ್ಳೆಯದು. ಅದರ ಮೂಲಕ ಸತ್ಯಾಂಶಗಳು ಹೊರಗೆ ಬರಬೇಕು. ಇನ್ನು ಕನ್ಸ್ಯೂಮರ್ಸ್ ಫೆಡರೇಶನ್ ಬಗ್ಗೆ ಮಾನ್ಯ ಏಕಾಂತಯ್ಯನವರು ಹೇಳಿದರು. ಸಹಕಾರಿ ರಂಗವನ್ನು ಪರಿಶುದ್ಧವಾಗಿ ಇಟ್ಟುಕೊಳ್ಳುವಲ್ಲಿ ಎಚ್ಚರಿಕೆ ವಹಿಸಬೇಕಾಗುತ್ತದೆ. ಇಲ್ಲವಾದಲ್ಲಿ ಅದರ ಅಭಿವೃದ್ಧಿಗೆ ಮಾರಕವಾಗಬಹುದಾಗಿದೆ. ಆದುದರಿಂದ ಈ ಬಗ್ಗೆ ತನಿಖೆ ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ಸ್ಪಿನ್ನಿಂಗ್ ಮಿಲ್‌ಗಳು, ಸಕ್ಕರೆ ಕಾರ್ಖಾನೆಗಳು, ಬಹಳಷ್ಟು ನಷ್ಟದಲ್ಲಿವೆ. ಸಹಕಾರಿ ರಂಗದಲ್ಲಿ ಲಾಭದಲ್ಲಿ ನಡೆಸಲಿಕ್ಕೆ ಆಗುತ್ತದೆಂದು ನಮಗೆ ಗೊತ್ತಿದೆ. ಆದರೆ ಕೆಲವು ನಷ್ಟದಲ್ಲಿ ಏಕೆ ಆಗುತ್ತವೆ ಎಂಬುದಕ್ಕೆ ಒಂದೇ ಕಾರಣ ನನಗನ್ನಿಸುತ್ತದೆ. ಅದೇನೆಂದರೆ, ಅನುಭವಿ ಅಧಿಕಾರಿಗಳನ್ನು ಸ್ಪಿನ್ನಿಂಗ್ ಮತ್ತು ಶುಗರ್ ಫ್ಯಾಕ್ಟರಿಗಳಿಂದ ಬದಲಾಯಿಸುವುದರಿಂದಾಗಿ ಇದರಲ್ಲಿ ವಿಶೇಷವಾಗಿ ತರಬೇತು ಹೊಂದಿದವರು ಅಲ್ಲಿ ಹೆಚ್ಚು ವರ್ಷ ಇರುವುದಿಲ್ಲ. ಈ ರೀತಿ ಬದಲಾವಣೆಯಾಗಿ ಹೋಗುವುದರಿಂದ ನಷ್ಟ ಉಂಟಾಗಬಹುದು. ಅಂಥವರನ್ನು ಇದ್ದಲ್ಲಿಯೇ ಮುಂದುವರಿಸಿಕೊಂಡು ಹೋಗಬೇಕು. ತಜ್ಞರುಗಳ ಒಂದು ವಿಶೇಷವಾದ ಪಡೆಯನ್ನು ಅಲ್ಲಿ ರೂಪಿಸಿಕೊಳ್ಳಬೇಕು. ಅನುಭವಸ್ಥರು, ತಜ್ಞರು, ಎಂ.ಡಿ.ಗಳಾದವರು ಅದರಲ್ಲಿ ಇರಬೇಕು. ಈ ರೀತಿಯಾಗಿ ಮಾಡಿದರೆ ಅದನ್ನು ಮುಂದುವರಿಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಶ್ರೀ ಶಾಮಣ್ಣನವರು ಕ್ಯಾಂಕೊ ಸಂಸ್ಥೆ ವಿಚಾರದಲ್ಲಿ ಟೀಕೆ ಮಾಡಿದರು. ಇದು ಕರ್ನಾಟಕ ಮತ್ತು ಕೇರಳ ರಾಜ್ಯಗಳೆರಡೂ ಸೇರಿದಂಥ ಅತ್ಯುತ್ಕೃಷ್ಟವಾದಂಥ ಒಂದು ಸಂಸ್ಥೆ ಆಗಿದೆ. ಎಲ್ಲೋ ಸಾಗರದಲ್ಲಿ ಆದ ಅವ್ಯವಹಾರಕ್ಕೆ ಕ್ಯಾಂಕೋವನ್ನು ದೂರುವಂಥಾದ್ದು ಸರಿಯಲ್ಲ, ಮತ್ತು ಇದು ಮನೋಪಲಿ ಸಂಸ್ಥೆಯೂ ಅಲ್ಲ, ಕ್ಯಾಂಕೋ ಮನೋಪಲಿ ಸಂಸ್ಥೆಯೂ ಆಗಬಾರದು. ಆ ಸಂಸ್ಥೆಯಿಂದ ಬಹಳಷ್ಟು ಅನುಕೂಲವಾಗಿದೆ. ಇನ್ನು ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಕುರಿತು ಒಂದು ಮಾತು. ರಾಷ್ಟ್ರದಲ್ಲಿ ನ್ಯಾಷನಲ್ ಹೌಸಿಂಗ್ ಪಾಲಿಸಿ ಎಂದು ಕಳೆದ ವರ್ಷ ಆಗಿದೆ. ಹಾಗೆಯೇ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಎಂದೂ ಇದೆ. ಆ ಸಂಸ್ಥೆಯಲ್ಲಿ ಮನೆ ಕಟ್ಟಲು ಸಾಲ ಕೊಡುವ ವ್ಯವಸ್ಥೆ ಇದೆ. ನ್ಯಾಷನಲ್ ಹೌಸಿಂಗ್ ಪಾಲಿಸಿಯಲ್ಲಿ ಒಂದು ಉಲ್ಲೇಖ ಮಾಡಿದ್ದಾರೆ. A separate chapter on housing should be added in the Co operative Act ಎಂದು ಇದೆ. ಮುಂದೆ ಸಹಕಾರ ಸಂಘಗಳ ಕಾಯಿದೆ ತಿದ್ದುಪಡಿಯಾಗಲಿಕ್ಕಿದೆ. ಆ ಸಂದರ್ಭದಲ್ಲಿ ಈ ಕೆಲಸವನ್ನು ಮಾಡಬೇಕು. ಎಲ್ಲೋ ಬೆಂಗಳೂರಿನಲ್ಲಿ ಹೌಸಿಂಗ್ ಸೊಸೈಟಿಗಳು ಅವ್ಯವಹಾರ ಮಾಡಿವೆ ಎಂದು ಇಡೀ ರಾಜ್ಯದಲ್ಲಿ ಹೌಸಿಂಗ್ ಸೊಸೈಟಿಗಳು ರಿಜಿಸ್ಟರಾಗುವುದಿಲ್ಲ. ಇದರಿಂದ ಮನೆ ಕಟ್ಟುವವರಿಗೆ ತೊಂದರೆಯಾಗಿದೆ. ಬೆಂಗಳೂರಿನಲ್ಲಿ ಆದಂಥ ಅವ್ಯವಹಾರದ ಬಗ್ಗೆ ಕೂಡಲೇ ತನಿಖೆಯಾಗಬೇಕು. ದ್ವಿಸದಸ್ಯ ಸಮಿತಿಯಾಗಿದೆ. ಯಾರು ಕೆಟ್ಟ ಕೆಲಸ ಮಾಡಿದ್ದಾರೋ ಯಾರು ಸ್ವಂತ ಲಾಭಕ್ಕಾಗಿ ಮಾಡಿದ್ದಾರೋ ಅಂತಹವರನ್ನು ಮಟ್ಟ ಹಾಕಿ. ಇದಕ್ಕೆ ಸಂಬಂಧಪಡದವರಿಗೂ ತೊಂದರೆ ಕೊಡಬಾರದು. ಈ ಎಲ್ಲ ಸಹಕಾರಿ ಸಂಘಗಳವರು ಕೆಟ್ಟವರು ಎನ್ನುವಂಥ ಭಾವನೆಯನ್ನು ಸಮಾಜದಿಂದ ತೆಗೆದುಬಿಡಬೇಕು. ಹೌಸಿಂಗ್‌ನಲ್ಲಿ ರಿಜಿಸ್ಟ್ರೇಷನ್ ಫೀ ಎಂದು ಶೇಕಡ ೧೦ ಪರ್ಸೆಂಟ್ ಕಟ್ಟಬೇಕಾಗುತ್ತದೆ. ಒಂದು ಲಕ್ಷ ರೂಪಾಯಿ ಸಾಲ ಸಿಕ್ಕಿದರೆ ೧೦ ಸಾವಿರ ರಿಜಿಸ್ಟ್ರೇಷನ್ ಫೀ ಎಂದು ಕಟ್ಟಬೇಕು. ಇದಕ್ಕೆ ಹಿಂದೆ ರಿಯಾಯಿತಿ ಇತ್ತು, ಈಗ ಇಲ್ಲವಾಗಿದೆ. ಇದರ ಪರಿಣಾಮವಾಗಿ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಮೂಲಕ ನ್ಯಾಷನಲೈಸ್ಡ್ ಬ್ಯಾಂಕ್ ಮೂಲಕ ಅಡಮಾನ ಮಾಡಿಕೊಳ್ಳುವ ವ್ಯವಸ್ಥೆ ಬಹಳ ಚೀಪ್ ರೇಟ್‌ನಲ್ಲಿ ಕಡಿಮೆಯಲ್ಲಾಗುತ್ತದೆ. ಆದರೆ ಸಹಕಾರಿ ರಂಗಕ್ಕೆ ಬರುವಾಗ ಜಾಸ್ತಿಯಾಗುತ್ತದೆ. ಈ ತಾರತಮ್ಯ ಹೋಗಲಾಡಿಸಲು ಸಹಕಾರಿ ರಂಗಕ್ಕೆ ಕೆಲವೊಂದು ರಿಯಾಯಿತಿಗಳನ್ನು, ಮಾರ್ಪಾಟುಗಳನ್ನು ಮಾಡಬೇಕಾದ ಅಗತ್ಯವಿದೆ. ಆಮೇಲೆ ೩೫ ಸಾವಿರ ದಾವೆಗಳು ಬಾಕಿ ಇವೆ. ಬಹಳ ವರ್ಷಗಳಿಂದ ಈ ಬಾಕಿ ಬೆಳೆದುಬರುತ್ತಿದೆ. ಸಹಕಾರಿ ರಂಗದಲ್ಲಿ, ದಾವೆಗಳು ಬೇಗ ಖುಲಾಸೆ ಆಗದಿದ್ದರೆ ಕೆಲಸ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ಆದ್ದರಿಂದ ಇದಕ್ಕೆ ವಿಶೇಷವಾದ ಕೊ–ಆಪರೇಟೀವ್ ಕೋರ್ಟ್‌ಗಳನ್ನು ಮಾಡುವಂಥ ವ್ಯವಸ್ಥೆಯಾಗಬೇಕು. ಆಯಾಯ

ತಾಲ್ಲೂಕಿನಲ್ಲಿ ಮಾಡಬೇಕು ಎಂದು ನನ್ನ ಸೂಚನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ವರ್ಷಗಳಿಂದ ಒಂದು ಪ್ರಪೋಸಲ್ ಇದೆ. ಬೇರೆ ಕಡೆಯಲ್ಲೆಲ್ಲಾ ತಾಲ್ಲೂಕಿಗೊಂದು ಎಪಿಎಂಸಿ ಇದ್ದರೆ ನಮ್ಮಲ್ಲಿ ಜಿಲ್ಲೆಗೆ ಒಂದು ಮಾತ್ರ ಇದೆ. ಅದನ್ನು ಮೂರು ಎಪಿಎಂಸಿಗಳನ್ನಾಗಿ ಮಾಡಬೇಕು ಎಂದು ನನ್ನ ವಿಜ್ಞಾಪನೆ. ಆಮೇಲೆ ಆಹಾರ ಇಲಾಖೆ ಬಗ್ಗೆ ಹೇಳುವುದಾದರೆ, ಒಂದೇ ಸೆಂಟೆನ್ಸ್‌ನಲ್ಲಿ ಹೇಳಿ ಮುಗಿಸುತ್ತೇನೆ. ಹಸಿರು ಕಾರ್ಡ್ ವಿತರಣೆಯಲ್ಲಿ ಹಳ್ಳಿಗಳಲ್ಲಿ ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು. ಇನ್ನು ಸಾರಿಗೆ ವಿಚಾರ ಹೇಳುವುದಾದರೆ, ಇತ್ತೀಚಿನ ಧೋರಣೆ ಪ್ರಕಾರ ಮದುವೆ ಪಾರ್ಟಿಗಳಿಗೆ ಹಾಗೂ ಶಾಲಾ ಮಕ್ಕಳ ಟ್ರಿಪ್‌ಗಳಿಗೆ ಖಾಸಗಿ ಬಸ್‌ಗಳಿಗೆ ವಿಶೇಷ ಪರ್ಮಿಟ್ ಕೊಡುತ್ತಿದ್ದರು. ಆದರೆ ಈಗ ಅದನ್ನೂ ನಿಲ್ಲಿಸಿಬಿಟ್ಟಿದ್ದಾರೆ. ಇದರಿಂದ ನಮ್ಮ ಮಂಗಳೂರಿನಲ್ಲಿ ಕಾಸರಗೋಡಿನಿಂದ ಬಸ್ಸನ್ನು ತಂದು ಓಡಿಸುತ್ತಿದ್ದಾರೆ. ಇದರಿಂದ ಕರ್ನಾಟಕದವರಿಗೆ ತೊಂದರೆ ಕೊಟ್ಟ ಹಾಗೆ ಆಯಿತೇ ಹೊರತು ಬೇರೇನೂ ಇಲ್ಲ. ಆದ್ದರಿಂದ ಮೊದಲಿನ ವ್ಯವಸ್ಥೆಯನ್ನೇ ಊರ್ಜಿತಗೊಳಿಸಬೇಕು. ಕಂಪ್ಯೂಟರೈಜೇಷನ್ ವ್ಯವಸ್ಥೆಯನ್ನು ಸಾರಿಗೆ ರಂಗದಲ್ಲಿ ಏರ್ಪಡಿಸಬೇಕು. ಕೊನೆಯದಾಗಿ ಸಹಕಾರಿ ಕಾನೂನಿಗೆ ತಿದ್ದುಪಡಿ ಮಾಡಬೇಕು, ಅದರಲ್ಲಿ ಸಹಕಾರಿ ಸ್ವರೂಪ ಉಳಿಸಿಕೊಳ್ಳಬೇಕು. ಕಳೆದ ಅನೇಕ ವರ್ಷಗಳಲ್ಲಿ ಅನೇಕ ರಿಪೋರ್ಟ್‌ಗಳು ಬಂದಿವೆ. ಯಾರೋ ಒಬ್ಬರು ಯಾವುದೋ ಒಂದು ರಿಪೋರ್ಟನ್ನು ಅಡಾಪ್ಟ್ ಮಾಡಿ ಎಂದು ಹೇಳಿದರು. ಸಮಗ್ರವಾಗಿ ಪರಿಶೀಲನೆ ಮಾಡಿ ಇವತ್ತಿನ ವ್ಯವಸ್ಥೆಗೆ ಅನುಕೂಲವಾಗುವಂತಹ, ಜನರಿಗೆ ಬೇಕಾಗುವಂತಹ ಸಹಕಾರಿ ಸ್ವರೂಪವನ್ನು ಉಳಿಸಿಕೊಳ್ಳುವಂತಹ ಒಂದು ರಿಪೋರ್ಟ್‌ನ್ನು ತೆಗೆದುಕೊಂಡು ತಿದ್ದುಪಡಿ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

† ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ದಿನ ನಮ್ಮ ಮುಂದೆ ಇರತಕ್ಕಂಥ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು, ವಾಹನ ತೆರಿಗೆ, ರಸ್ತೆ ಸಾರಿಗೆ, ಸಹಕಾರ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳ ಮೇಲಿನ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ, ನನ್ನ ಕೆಲವು ಸಲಹೆಗಳನ್ನು ಕೂಡಾ ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಫುಡ್ ಸಪ್ಲೈಸ್ ಡಿಪಾರ್ಟ್‌ಮೆಂಟ್ ಏನಾಗಿದೆ ಎಂದರೆ, ಈ ಪಟ್ಟಣ ಪ್ರದೇಶದಲ್ಲಿ ಇರತಕ್ಕಂಥ ಜನರ ಕೂಗಿಗೆ ಈ ಡಿಪಾರ್ಟ್‌ಮೆಂಟ್‌ನವರು ಓಗೊಟ್ಟು ಒಳ್ಳೆಯ ಪದಾರ್ಥಗಳನ್ನು ಸಮಯಕ್ಕೆ ಸರಿಯಾಗಿ ಅಲ್ಲಿ ವಿತರಣೆ ಮಾಡುತ್ತಿದ್ದಾರೆ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಸಮಯದಲ್ಲಿ ಅದು ತಲುಪುವುದಿಲ್ಲ. ಮತ್ತು ಸಮಂಜಸವಾಗಿ ವಿತರಣೆ ಕೂಡಾ ಆಗುತ್ತಿಲ್ಲ. ಇತ್ತೀಚೆಗೆ ಹೆಚ್ಚಾಗಿ ಅಕ್ಕಿಯನ್ನು ನಮ್ಮ ತಾಲ್ಲೂಕುಗಳಿಗೆಲ್ಲಾ ಕೊಟ್ಟಾಗ ಅಲ್ಲಿಯ ಸೊಸೈಟಿಗಳವರು ನಮ್ಮಲ್ಲಿ ಸಕ್ಕರೆ ಮಾತ್ರ ಖರ್ಚಾಗುತ್ತದೆ. ಅಕ್ಕಿ ಖರ್ಚಾಗುವುದಿಲ್ಲ, ಇದೇ ರೇಟಿಗೆ ಲೋಕಲ್‌ನಲ್ಲಿ ಅಕ್ಕಿ ಸಿಗುವುದರಿಂದ ಅಲ್ಲೇ ತೆಗೆದುಕೊಳ್ಳುತ್ತಾರೆ. ಆದ್ದರಿಂದ ನಮಗೆ ಇಷ್ಟೊಂದು ಅಕ್ಕಿ ಬೇಡ. ೪೦ ಕ್ವಿಂಟಾಲ್ ಅಕ್ಕಿಯನ್ನು ಹಾಕಿರುವ ಕಡೆ ಹತ್ತು ಕ್ವಿಂಟಾಲ್ ಅಕ್ಕಿಯನ್ನು ಮಾತ್ರ ಮಾಡಿಸಿ ಬಿ.ಡಿ.ಓ.ಗೆ ಫೋನ್ ಮಾಡಿ ಎಂದು ನನಗೆ ಕೇಳುತ್ತಲೇ ಇದ್ದರು. ನಾನು ಕೆಲವು ಸೊಸೈಟಿಗಳಿಗೆ ಆ ರೀತಿ ಮಾಡಿಕೊಟ್ಟಿದ್ದು ಉಂಟು. ಆದ್ದರಿಂದ ಬೇಡಿಕೆಗೆ ತಕ್ಕಂತೆ ಸಪ್ಲೈ ಇದ್ದರೆ ಒಳ್ಳೆಯದಾಗುತ್ತದೆ, ಗ್ರಾಮಾಂತರ ಪ್ರದೇಶಗಳಲ್ಲಿ ಪಾಮೋಲಿನ್ ಆಯಿಲ್ ಆಗಲೀ ಇನ್ಯಾವುದೇ ಪದಾರ್ಥವಾಗಲೀ ಅವರು ಏನು ಕೇಳಿದ್ದಾರೆ ಅವರಿಗೆ ಅಂಥ ಒಳ್ಳೆಯ ಪದಾರ್ಥಗಳನ್ನು ಸಮಯಕ್ಕೆ ಸರಿಯಾಗಿ ವಿತರಣೆ ಮಾಡಿಕೊಡಿ ಎಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಹಸಿರು ಕಾರ್ಡ್‌ನ ಒಂದು ಕೂಗು ಇಡೀ ರಾಜ್ಯಾದ್ಯಂತ ಕೇಳಿಬರುತ್ತಿದೆ. ಇದ್ದಷ್ಟೇ ಕಾರ್ಡು, ಒಂದು ಕಾರ್ಡ್ ಸಹಾ ನಾವು ಹೆಚ್ಚಾಗಿ ಕೊಡುವುದಿಲ್ಲ, ಎಷ್ಟು ಕ್ಯಾನ್ಸಲ್ ಮಾಡುತ್ತೇವೆಯೋ ಅಷ್ಟು ಮಾತ್ರ ನಾವು ಇತರೆಯವರಿಗೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಹೊಸದಾಗಿ ಬಂದು ನೆಲೆಸತಕ್ಕಂಥ ಬಡ ಜನರಿಗೆ ಇದರಿಂದ ತೊಂದರೆಯಾಗುತ್ತಿದೆ, ಇದು ಒಂದು ಪಾಲಿಸಿ ಮ್ಯಾಟರ್, ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಸಾಕಷ್ಟು ಗಮನವನ್ನು ಹರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ, ಸುಮಾರು ನಾಲ್ಕೈದು ತಿಂಗಳಿಂದ ನಮ್ಮ ಏರಿಯಾದಲ್ಲಿ ಸರ್ಕಾರಿ ಕಟ್ಟಡಗಳಿಗೂ ಕೂಡಾ ಸರಿಯಾಗಿ ಸಿಮೆಂಟ್ ಸಪ್ಲೈ ಆಗಲಿಲ್ಲ. ಮೊನ್ನೆ ಸ್ವಲ್ಪ ಮಾತ್ರ ಸಿಮೆಂಟ್ ಸಪ್ಲೈ ಆಗಿದೆ. ಅದನ್ನು ಸ್ವಲ್ಪಸ್ವಲ್ಪವಾಗಿ ಹಂಚುತ್ತಿದ್ದಾರೆ. ಯಾವ ಬಿಲ್ಡಿಂಗ್‌ನ್ನೂ ಪೂರ್ಣ ಮಾಡುವುದಕ್ಕೆ ಆಗುತ್ತಿಲ್ಲ. ನಮ್ಮ ಗೌರ್ನ್‌ಮೆಂಟ್ ಆಸ್ಪತ್ರೆಗೆ ಆರ್.ಸಿ.ಸಿ. ಹಾಕುವುದಕ್ಕೆ ಪ್ರಿಯಾರಿಟಿಕೊಟ್ಟು ಅದಕ್ಕೆ ಸಿಮೆಂಟ್ ಕೊಡುತ್ತೇನೆಂದು ನಮ್ಮ ಇಂಜಿನಿಯರು ಹೇಳುತ್ತಿದ್ದರು. ಆದರಿಂದ ಸಿಮೆಂಟ್ ಸಪ್ಲೈ ಕೂಡಾ ನಮಗೆ ಸರಿಯಾಗಿ ಆಗುತ್ತಿಲ್ಲ. ದಯವಿಟ್ಟು ಅದನ್ನು ಕೂಡಾ......

SRI AZEEZ SAIT.—Cement is under Industries & Commerce Department, not under Food.

ಶ್ರೀಮತಿ ದಮಯಂತಿ ಬೋರೇಗೌಡ.—ಇದೂಕೂಡಾ ಸಿವಿಲ್ ಸಪ್ಲೈಸ್‌ನಲ್ಲಿ ಬರುತ್ತದೆ ಎಂದು ತಿಳಿದುಕೊಂಡಿದ್ದ ವಾಹನಗಳ ತೆರಿಗೆಯು ದಿನೇ ದಿನೇ ಹೆಚ್ಚಾಗುತ್ತಿದೆ. ಆದರೆ ತೆರಿಗೆಯು ಹಣ ಬಂದು ಪಿ.ಡಬ್ಲ್ಯು.ಡಿ. ಇಲಾಖೆಗೆ ಹೋಗಿ ರಸ್ತೆಗಳ ಮೇಯಿನ್‌ಟೆನನ್ಸ್ ಸರಿಯಾಗಬೇಕು. ಯಾವ ರಸ್ತೆಗಳು ಕೂಡಾ ವಾಹನಗಳ ಒಂದು ಸಂಚಾರಕ್ಕೆ ಸಮರ್ಪಕವಾಗಿಲ್ಲ ಎಂದು ನಾನು ಹೇಳಬಯಸು ತ್ತೇನೆ. ಇರುವ ರಸ್ತೆಗಳಲ್ಲಿ ಶೇಕಡ ಹತ್ತರಷ್ಟು ಮಾತ್ರ ವಾಹನ ಸಂಚಾರಕ್ಕೆ ಚೆನ್ನಾಗಿದೆ. ಅಪಘಾತಗಳು ಆಗುತ್ತಿರುವುದಕ್ಕೆ ರಸ್ತೆಗಳು ಚೆನ್ನಾಗಿಲ್ಲದೇ ಇರುವುದೇ ಮುಖ್ಯವಾದ ಕಾರಣ ಎಂದು ನಾವು ತಿಳಿದು ಕೊಳ್ಳಬೇಕು. ಇದರಿಂದ ಬರತಕ್ಕಂಥ ಒಂದು ಹಣದಲ್ಲಿ ಸಾಕಷ್ಟು ರಸ್ತೆಗಳ ಮೆಂಟೆನೆನ್ಸ್‌ಗೆ. ರಿಪೇರಿಗೆ ಅವರು ಕೊಡಬೇಕು ಎಂದು ಹೇಳುತ್ತೇನೆ, ಇನ್ನೂ ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಇಂಡಸ್ಟ್ರಿಯಲ್ ಬ್ಯಾಂಕ್‌ನಲ್ಲಿ ಸುಮಾರು ವರ್ಷಗಳ ಕಾಲ ಡೈರೆಕ್ಟರ್ ಆಗಿದ್ದೆ, ಆಗ ಅಲ್ಲಿ ಏನಾಯಿತು ಎಂದರೆ, ಒಬ್ಬ ಸೆಕ್ರೆಟರಿಯವರು ಒಂದು ರೆಕಮೆಂಡನ್ನು ಮಾಡಿದ್ದರು. ಅದಕ್ಕಿಂತ ಹೆಚ್ಚಾಗಿ ಅಲ್ಲಿನ ಮುನಿಸಿಪಾಲಿಟಿಯವರು ಒಂದು ಮನೆಗೆ ಬೆಲೆಯನ್ನು ಕಟ್ಟಿದ್ದರು. ಆ ಬೆಲೆಗೆ ಅನುಗುಣವಾಗಿ ನಾವು ಸಾಲವನ್ನು ಸ್ಯಾಂಕ್ಷನ್ ಮಾಡಿದ್ದೂ ಉಂಟು, ಆದರೆ ಯಾವ ಮೀಟಿಂಗ್‌ನಲ್ಲಿ ಯಾರು ಸಮಯಕ್ಕೆ ಎಷ್ಟು ಹೋಗುತ್ತಿದ್ದರೋ ಮತ್ತು ಅದಕ್ಕೆ ಯಾರು ಒಪ್ಪಿಗೆಯನ್ನು ಕೊಟ್ಟಿದ್ದರೋ ಆದರ ಡಿಟೈಲ್ ಸಹಾ ಇಲ್ಲ. ಆದರೆ ಮುನಿಸಿಪಾಲಿಟಿ ಯವರ ವ್ಯಾಲ್ಯೂಯೇಷನ್‌ಗೆ ಕಡಿಮೆ ನಾವು ಲೋನ್ ಸ್ಯಾಂಕ್ಷನ್ ಮಾಡಿದ್ದೇವೆ. ಈ ಲೋನನ್ನು ಸಂಬಂಧಪಟ್ಟ ಅಧಿಕಾರಿಗಳು ವಸೂಲು ಮಾಡುವುದನ್ನು ಬಿಟ್ಟು ಡೈರೆಕ್ಟರ್‌ಗಳ ಮೇಲೆ ಕೇಸ್ ಹಾಕಿದ್ದಾರೆ. ಅದ್ದರಿಂದ ನಾವು ಇವತ್ತಿಗೂ ರಿಜಿಸ್ಟ್ರಾರ್ ಆಫೀಸ್‌ಗೆ ಹೋಗಿ ಆಲೆಯುವುದು ತಪ್ಪಿಲ್ಲ. ಈ ರೀತಿ ಆಗಿದೆ. ಆಗ ಇದ್ದಂಥ ಪ್ರೆಸಿಡೆಂಟ್‌ರೂ ಕೂಡ ತೀರಿಕೊಂಡಿದ್ದಾರೆ. ಅವರು ತೀರಿಕೊಂಡಿದ್ದರೂ ಅವರಿಗೂ ಸಹಾ ನೋಟೀಸ್ ಹೋಗುತ್ತಿದೆ. ಅದನು ಸ್ವರ್ಗಕ್ಕೆ ಕಳುಹಿಸುತ್ತಿದ್ದಾರೋ ಅಥವಾ ಅವರ ಮನೆಗೆ ಕಳುಹಿಸುತ್ತಿದ್ದಾರೋ ಗೊತ್ತಿಲ್ಲ. ಇನ್ನೂ ಕೂಡ ಅವರ ಮನೆಗೆ ನೋಟಿಸ್‌ಗಳು ಹೋಗು ತ್ತಿವೆ. ಈ ರೀತಿ ವೃಥಾ ಸರ್ಕಾರದ ಹಣ ಸಮಯ ಖರ್ಚಾಗುತ್ತಿದೆ ಎನ್ನುವುದನ್ನು ನಾವು ಮರೆಯ ಬಾರದು. ಎಲ್ಲಾ ಕಡೆ ಮಹಿಳೆಯರು ಸಹಕಾರಸಂಘಗಳನ್ನು ಮಾಡಿ ಎಂದು ಭಾಷಣ ಮಾಡಿ ಪ್ರಚಾರ ಮಾಡುತ್ತಿದ್ದಾರೆ. ನಾವು ಕೆಲವು ಕಡೆ ಮಾಡಿದ್ದೇವೆ. ಮಾಡಿದಮೇಲೆ ಇಲಾಖೆಯವರ ಗೈಡೆನ್ಸ್ ಆಗಲೀ ಅಸಿಸ್ಟೆನ್ಸ್ ಆಗಲೀ ನಮಗೆ ಸಾಕಷ್ಟು ಬರುತ್ತಿಲ್ಲ ಎಂದು ಬಹಳ ವ್ಯಥೆಯಿಂದ ನಾನು ಹೇಳ ಬೇಕಾಗುತ್ತದೆ,

೩-೨೦ ಪಿ.ಎಂ.

ಮಂಡ್ಯ ಜಿಲ್ಲೆಯಲ್ಲಿ ಕೂಡ ಮಹಿಳಯರ ಸಹಕಾರ ಸಂಘವನ್ನು ನಾವು ಪ್ರಾರಂಭ ಮಾಡಿ ಸಾಕಷ್ಟು ಹಣ ಸಂಗ್ರಹಿಸಿದ್ದೇವೆ, ಆದರೆ ನಮ್ಮ ಕಾಗದಕ್ಕೆ ರಿಪ್ಲೈ ಮೂರು ತಿಂಗಳಾದರೂ ಬರದೇ ಇದ್ದರೆ ಇನ್ನು ಮಹಿಳೆಯರು ಮನೆ ಬಿಟ್ಟು ಆಫೀಸುಗಳಿಗೆ ಅಲೆಯುವುದಾದರು ಏಕೆ ಎಂದು ನನಗನ್ನಿಸುತ್ತದೆ. ಚಿಕ್ಕಪುಟ್ಟ ಸೊಸೈಟಿಗಳಲ್ಲಿ ರಿಸರ್ವೇಷನ್ ಇರುವ ರೀತಿ ಸೊಸೈಟಿಯಿಂದ ಹಿಡಿದು ಕರ್ನಾಟಕ ಸ್ಟೇಟ್ ಕೋ-ಆಪರೇಟೀವ್ ಅಪೆಕ್ಸ್ ಬ್ಯಾಂಕ್‌ನವರಿಗೆ ಕೂಡ ಮಹಿಳೆಯರಿಗೆ ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿ ಒಂದು ಸ್ಥಾನಮಾನವನ್ನು ಕೊಡಬೇಕು ಎಂದು ನಾನು ಇಲ್ಲಿ ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಸಾರಿಗೆ ವಿಚಾರ ಹೇಳಬೇಕಾದರೆ. ಎಲ್ಲಾ ಆರ್.ಟಿ ಓ ಆಫೀಸ್‌ಗಳಲ್ಲಿ ಕೂಡ ವಿಪರೀತ ರಷ್, ಗೊಂದಲ ಇದ್ದೇ ಇದೆ. ಅವರು ಯಾವುದೇ ಒಂದು ಆರ್ಜಿಯನ್ನು ಸ್ವೀಕರಿಸಿದರೂ ಕೂಡ ಒಂದು ವಾರ ಅಲ್ಲ. ೧೫ ದಿವಸ ತೆಗೆದುಕೊಳ್ಳಲಿ, ಅಷ್ಟರಲ್ಲಿ ವಿಲೇವಾರಿ ಆಗಬೇಕು. ಚಿಕ್ಕಮಗಳೂರಿನ ಡಿ.ಸಿ. ಆಫೀಸ್‌ನಲ್ಲಿ ಒಂದು ಸಿಸ್ಟಂ ಇತ್ತು. ಒಬ್ಬ ಅರ್ಜಿ ಕೊಟ್ಟರೆ ಆದರ ಬಗ್ಗೆ ಪರಿಶೀಲನೆ ಮಾಡಿ ಅವನಿಗೆ ಉತ್ತರ ಕೊಡುವುದಕ್ಕೆ ಒಂದು ವಾರ ಅಥವಾ ೧೦ ದಿವಸ ಸಮಯ ನಿಗದಿ ಮಾಡಿ ಅವರುಗಳ ಅರ್ಜಿಯನ್ನು ವಿಲೇವಾರಿ ಮಾಡುತ್ತಿದ್ದರು. ಈ ಒಂದು ಸಿಸ್ಟಂ ಎಲ್ಲಾ ಕಡೆ ಬಂದರೆ ತುಂಬಾ ಒಳ್ಳೆಯದಾಗುತ್ತದೆ, ಇನ್ನು ಕೆ.ಎಸ್ ಆರ್.ಟಿ.ಸಿ. ಬಗ್ಗೆ ಕಡಿಮೆ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ. ಬ್ರಹ್ಮನಿಂದಲೂ ಸರಿಪಡಿಸುವುದಕ್ಕೆ ಸಾಧ್ಯ ಆಗದೇ ಇರುವ ಇಲಾಖೆಯನ್ನು ಶ್ರೀಮಾನ್ ಜಾರ್ಜ್‌ರವರಿಗೆ ನಮ್ಮ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅವರು ವಿಶ್ವ ಪ್ರಯತ್ನ ಮಾಡುತ್ತಿದ್ದಾರೆ ಆದರೆ ಒಂದು ಶೋಚನೀಯ ಸಂಗತಿ ಅಂದರೆ, ಕೆಲವು ಕರಪ್ಟ್ ಆಫೀಸರ್ಸ್‌ಗೆ ಪ್ರೊಮೋಷನ್ ಆಗಿದೆ. ಅವರಿಂದ ಇಡೀ ಇಲಾಖೆಯ ಮೊರೇಲ್ ಹೋಗುತ್ತದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ, ಈಗ ಲಕ್ಸುರಿ ಕೋಚಸ್ ಬಾಡಿ ಬಿಲ್ಡಿಂಗ್ ಅನ್ನು ಪ್ರೈವೇಟ್‌ನವರಿಗೆ ಕೊಡುತ್ತಿದ್ದಾರೆ, ಇದು ನೋಡು ವುದಕ್ಕೆ ಬಹಳ ಚೆನ್ನಾಗಿ ಇರುತ್ತದೆ. ಆದರೆ ಆ ರ್‍ಯಾಟ್ಲಿನ್ ಎಷ್ಟು ಇದೆ ಎಂದರೆ ಆದರಲ್ಲಿ ಪ್ರಯಾಣ ಮಾಡುವಾಗ ಇದೂ ಒಂದು ಲಕ್ಸುರಿ ಕೋಚಾ ಎಂದು ನಮಗೆ ಅನಿಸುತ್ತದೆ. ಈಗ ಇವರು ಹಾಸ

ಫ್ಯಾಕ್ಟರಿಗೆ ಕೂಡ ಕೊಡುತ್ತಿದ್ದಾರೆ, ಅವಲ್ಲದೇ ಇವರದ್ದೇ ಆದ ಒಂದು ಕೋಚ್ ಬಿಲ್ಡಿಂಗ್ ಫ್ಯಾಕ್ಟರಿ ಕೂಡ ಇದೆ ಇದನ್ನೇ ದೊಡ್ಡದು ಮಾಡಿ ಅಲ್ಲೇ ಮಾಡಿದರೆ ಒಳ್ಳೆಯದೆಂದು ನನಗೆ ಅನಿಸುತ್ತದೆ. ಪೀಕ್ ಸೀಸನ್‌ಗಳಲ್ಲಿ ನೀವು ಏನು ಮಾಡುತ್ತೀರಿ ಅಂದರೆ ಅನೇಕ ಬಸ್‌ಗಳನ್ನು ಬೆಂಗಳೂರು ಮೈಸೂರ್ ನಾನ್ ಸ್ಟಾಪ್ ಬಸ್ ಓಡಿಸುತ್ತೀರಿ. ಮಧ್ಯದಲ್ಲಿ ಇರತಕ್ಕವರು ಆ ಬಸ್‌ಗಳನ್ನು ನೋಡಿಕೊಂಡು ಗಂಟೆಗಟ್ಟಲೆ ರಸ್ತೆ ಬದಿಯಲ್ಲಿ ಬಸ್‌ಗಾಗಿ ಕಾಯಬೇಕಾಗುತ್ತದೆ. ಇದು ತಪ್ಪಬೇಕು. ಅವರಿಗೆ ನೀವು ಎಷ್ಟು ಬಸ್ ಸೌಲಭ್ಯ ಕೊಡುತ್ತೀರೋ ಅಷ್ಟೇ ಪ್ರಮಾಣದಲ್ಲಿ ಮೊಫ್ಯೂಸಲ್ ಏರಿಯಾಸ್‌ಗೂ ತಾವು ಕೊಡಬೇಕು. ಬೆಂಗಳೂರು–ರಾಮನಗರ, ಬೆಂಗಳೂರು–ಚೆನ್ನಪಟ್ಟಣ, ಬೆಂಗಳೂರು–ಮಂಡ್ಯ ಮತ್ತು ಮೈಸೂರಿಗೆ ನಾನ್ ಸ್ಟಾಪ್ ಬಸ್ ಇದೆ. ಶ್ರೀರಂಗಪಟ್ಟಣದವರು ಏನು ಪಾಪ ಮಾಡಿದ್ದೇವೆ. Is is not a tourists centre ? Thousands of people go there every day. ಅದ್ದರಿಂದ ಬೆಂಗಳೂರಿಂದ ಶ್ರೀರಂಗಪಟ್ಟಣಕ್ಕೆ ಒಂದು ನಾನ್ ಸ್ಟಾಪ್ ಬಸ್ ಸರ್ವೀಸ್ ಕೊಡಿ ಎಂದು ನಾನು ಸಲಹೆ ಮಾಡುತ್ತಿದ್ದೇನೆ. ಇದು ಒಂದೇ ಅಲ್ಲ, ಅನೇಕ ಫಾಸ್ಟ್ ಎಕ್ಸ್‌ಪ್ರೆಸ್ ಬಸ್‌ಗಳು ರಾಮನಗರದಲ್ಲಿ ಎರಡು ಕಡೆ, ಚೆನ್ನಪಟ್ಟಣದಲ್ಲಿ ಎರಡು ಕಡೆ, ಮಂಡ್ಯದಲ್ಲಿ ಮೂರು ಕಡೆ ನಿಲ್ಲುತ್ತವೆ. ಶ್ರೀರಂಗಪಟ್ಟಣದಲ್ಲಿ ಒಂದು ಸ್ಟಾಪ್ ಅನ್ನು ಎರಡು ನಿಮಿಷಗಳ ಕಾಲ ಕೊಡುವುದಕ್ಕೆ ಏನು ಅಡ್ಡಿ ಬರುತ್ತದೆ. ಒಂದು ಸಂತೋಷದ ವಿಷಯ ಏನು ಅಂದರೆ, ಮೈಸೂರಿನಿಂದ ಡಿವಿಜನಲ್ ಆಫೀಸರ್ ಅವರಿಗಿಂತ ಮೇಲ್ಪಟ್ಟ ಏರಿಯಾ ಆಫೀಸರ್ ಎಲ್ಲರೂ ಶ್ರೀರಂಗಪಟ್ಟಣಕ್ಕೆ ಬಂದಿದ್ದರು. ನಾನು ಆಫೀಸಿಗೆ ಬರುತ್ತೇನೆ ಎಂದಾಗ ಅವರು ಬಂದಿದ್ದರು. ಅವರನ್ನು ನಾನು ಕರೆದುಕೊಂಡು ಹೋಗಿ ಯಾವ ರೂಟ್ ತೆಗೆದುಕೊಂಡರೆ ಎಷ್ಟು ಕಿಲೋ ಮೀಟರ್ ಕಡಿಮೆ ಆಗುತ್ತದೆ, ನಿಮಗೆ ಎಷ್ಟು ಡೀಸೆಲ್ ಉಳಿತಾಯ ಆಗುತ್ತದೆ. ಎಷ್ಟು ಸಮಯ ಎನರ್ಜಿ ಎಲ್ಲಾ ಉಳಿಯುತ್ತದೆ ಎಂದು ತೋರಿಸಿಕೊಟ್ಟೆ. ಈ ರೀತಿಯಾಗಿ ಕೆಲವು ಪ್ರಾಕ್ಟಿಕಲ್ ಪ್ರಾಬ್ಲಮ್‌ಗಳನ್ನು ಅವರು ಗಮನಕ್ಕೆ ತೆಗೆದುಕೊಂಡು ಸೂಕ್ತವಾದಂತಹ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಶ್ರೀರಂಗ ಪಟ್ಟಣಕ್ಕೆ ಒಂದು ಬಸ್ ಸ್ಟ್ಯಾಂಡ್ ಇಲ್ಲ. ಬರೀ ಒಂದು ಬಸ್ ಶೆಲ್ಟರ್ ಮಾತ್ರ ಇದೆ. ಅಷ್ಟು ದೊಡ್ಡ ಪ್ರವಾಸೀ ಕೇಂದ್ರ ಆಗಿರತಕ್ಕ ಶ್ರೀರಂಗ ಪಟ್ಟಣದಲ್ಲಿ ಬಸ್ ಸ್ಟ್ಯಾಂಡ್ ಇಲ್ಲ. ಅಲ್ಲಿರತಕ್ಕ ಶೆಲ್ಟರ್ ಕೇವಲ ನೆರಳು ಕೊಡುತ್ತದೆಯೇವಿನಹ ಮಳೆಯಿಂದ ಯಾವ ರಕ್ಷಣೆಯೂ ಇಲ್ಲ. ಹಿಂದೆ ಮಾನ್ಯ ಅಜೀಜ್ ಸೇಠ್‌ರವರು ಸಾರಿಗೆ ಮಂತ್ರಿಯಾಗಿದ್ದಾಗ, ನಾನು ಎಂ.ಎಲ್.ಎ. ಆಗಿದ್ದಾಗ ಅವರ ಮಗಳ ಜೊತೆಯಲ್ಲಿ ನಾನು ಬರುವಾಗ ಒಬ್ಬ ಅಂಗಡಿಯವನು ಪ್ಲೈವುಡ್ ಬಾಕ್ಸ್ ಹಾಕಿದ್ದ ಅದರ ಮೇಲೆ ಕುಳಿತುಕೊಂಡು ಅವರನ್ನು ರಿಸೀವ್ ಮಾಡಿಕೊಂಡೆವು ಆಮೇಲೆ ಅವರು ಒಂದು ಟೆಂಪೊರರಿ ಶೆಲ್ಟರ್ ಕೊಟ್ಟರು, ಅಲ್ಲಿ ಕೇವಲ ಶೆಲ್ಟರ್ ಇದೆಯೇ ವಿನಹ ಬಸ್ ಸ್ಟ್ಯಾಂಡ್ ಇಲ್ಲ. ಮೊನ್ನೆ ಸಹ ಆಫೀಸರ್ ಅನ್ನು ಕರೆದುಕೊಂಡು ಹೋಗಿ ತೋರಿಸಿದೆ. This Budgeted work was lapsed. ಅದನ್ನು ಮಾಡಲಿಲ್ಲ. ಈಗ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಮತ್ತೆ ಅರ್ಕಿಯಾಲಜಿ ಇಲಾಖೆಯವರು ನೋ ಅಬ್ಜೆಕ್ಷನ್ ಎಂದು ಹೇಳುವುದು It is a lame execuse. ಎರಡು ಫರ್ಲಾಂಗ್ ಉದ್ದಕ್ಕೂ ಗವರ್ನಮೆಂಟ್ ಬಿಲ್ಡಿಂಗ್ ಬಂದಿದೆ, ಗವರ್ನಮೆಂಟ್ ಆಫೀಸಸ್ ಬಂದಿದೆ. ಅಗ್ರಿಕಲ್ಚರ್ ಆಫೀಸ್ ಸಿರಿಕಲ್ಚರ್ ಆಫೀಸ್, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್, ಯೂತ್ ಸರ್ವೀಸಸ್ ಬಂದಿದೆ ಮತ್ತೆ ಈ ಕಡೆ ಪ್ರೈವೇಟ್ ಬಿಲ್ಡಿಂಗ್ ಸಹ ಬಂದಿದೆ. ಅಲ್ಲಿಗೆ ಬರತಕ್ಕ ಪ್ರಯಾಣಿಕರಿಗೆ ಸಾಕಷ್ಟು ಅನುಕೂಲ ಆಗುವ ರೀತಿಯಲ್ಲಿ ಬಸ್ ಸ್ಟ್ಯಾಂಡ್ ಮತ್ತು ಇತರ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಸಾರಿಗೆ ರಾಷ್ಟ್ರೀಕರಣದ ವಿಚಾರದಲ್ಲಿ ಹೇಳುವುದಾದರೆ, ಈ ದಿಶೆಯಲ್ಲಿ ನಾವು ನಿಧಾನಕ್ಕೆ ಹೋದರೆ ಒಳೆಯದು. ಏಕೆಂದರೆ. ಪ್ರಾಮಾಣಿಕ ಸಿಬ್ಬಂದಿಯ ಕೊರತೆ ಇರುವಾಗ ಸುಮ್ಮನೆ ಎಲ್ಲಾ ನಾವೇ ಮಾಡುತ್ತೇವೆ ಎಂದು ಹೋಗುವುದು ಸರಿಯಲ್ಲ. ನೀವು ತಿಳಿದಿರುವ ಹಾಗೆ. ಮೊದಲು ಪ್ರೈವೇಟ್ ಬಸ್‌ಗಳನ್ನು ಎಷ್ಟು ಸ್ವಚ್ಛವಾಗಿ ಇಟ್ಟಿರುತ್ತಾ ಇದ್ದರು. ಈಗ ಗವರ್ನಮೆಂಟ್ ಬಸ್‌ಗಳಲ್ಲಿ ಕಸ ಕೂಡ ತೆಗೆಯುವುದಿಲ್ಲ. ಇದಕ್ಕೆ ಏನು ಕಾರಣ. ಒಂದು ಬಸ್ ಕ್ಲೀನಿಂಗಿಗೆ ಇಷ್ಟು ಎಂದು ಮಾತನಾಡಿ. ನಿಮ್ಮ ಡಿಪೊಗಳಲ್ಲಿ ಸರಿಯಾಗಿ ಕ್ಲೀನಿಂಗ್ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನನಗನ್ನಿಸುತ್ತದೆ. ನ್ಯಾಷನಲೈಸ್ ಮಾಡಿದಂಥ ಗುರಿ ಏನೆಂದರೆ, ಕಮ್ಯೂಟರ್ಸ್‌ಗೆ ಮ್ಯಾಗ್ಸಿಮಮ್ ಬೆನಿಫಿಟ್ಸ್ ಕೊಡಬೇಕಾದ್ದು ನಮ್ಮ ಗುರಿ, ಆ ಬೆನಿಫಿಟ್ಸ್ ಕಮ್ಯೂಟರ್ಸ್‌ಗೆ ನಮ್ಮ ಸರ್ಕಾರಿ ಬಸ್‌ಗಳಿಂದ ಕೊಟ್ಟರೂ ಸರಿಯೇ ಅಥವಾ ಪ್ರೈವೇಟ್ ಬಸ್‌ಗಳಿಂದ ಕೊಟ್ಟರೂ ಸರಿಯೆ. ಆ ವಿಚಾರದಲ್ಲಿ ಸೌತ್ ಕೆನರಾದಲ್ಲಿ ಚೆನ್ನಾಗಿ ಸಾರಿಗೆ ವ್ಯವಸ್ಥೆ ಇತ್ತು, ಈಗ ಅದು ಹಾಗೇ ಇದೆಯೋ ಗೊತ್ತಿಲ್ಲ. ಬೇರೆ ಕಡೆ ಆ ಸಿಸ್ಟಂ ಜಾರಿಗೆ ತಂದರೆ ಒಳ್ಳೆಯದು. ಈ ಬಿ. ಟಿ. ಎಸ್. ವಿಚಾರದಲ್ಲಿ ಹೇಳುವುದಾದರೆ ಅದರಲ್ಲಿ

ಹಣ ಸೋರುವುದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ಕಡೆ ಹಳ್ಳಿಗಳ ಕಡೆ ಹೋಗಬೇಕಾದರೆ ಕಂಡಕ್ಟರ್ಸ್ ಟಿಕೆಟ್ಟೇ ಕೊಡುವುದಿಲ್ಲ. ಅವರು ಟಿಕೆಟ್ಟನ್ನು ಮೇನ್ ರೋಡ್‌ನಲ್ಲಿ ಮಾತ್ರ ಇಷ್ಟು ಮಾಡುತ್ತಾರೆ. ಹಳ್ಳಿ ಕಡೆ ಹೋಗಬೇಕಾದರೆ ೪ ಆಣೆ ೮ ಆಣೆ ಕಡಿಮೆ ತೆಗೆದುಕೊಂಡು ಟಿಕೆಟ್ ಕೊಡದೆ ಹಾಗೆ ಇರುತ್ತಾರೆ. ಇವತ್ತು ಕೆಲವರು ಕಂಡಕ್ಟರ್ಸ್, ಆಫೀಸರ್ಸ್‌ಗಿಂತ ಹೆಚ್ಚು ಆಸ್ತಿ ಮಾಡಿದ್ದಾರೆ. ಅವರು ಇಟ್ಟಿರುವ ಟ್ಯಾಕ್ಸಿ, ಆಟೋರಿಕ್ಷಾಗಳು ಮತ್ತು ಕಟ್ಟಿರುವ ಮನೆಗಳನ್ನು ಆಫೀಸರ್ಸ್ ಕಟ್ಟಿಲ್ಲ. ಅದೇ ಪ್ರಾಮಾಣಿಕತೆಯ ಕೊರತೆ ಇರುವಾಗ ಬಹಳ ತೊಂದರೆಯಾಗುವಂಥ ಪರಿಸ್ಥಿತಿ ಇದೆ. ಆದುದರಿಂದ ರಾಷ್ಟ್ರೀಕರಣ ಮಾಡಬೇಕಾದರೆ ಅದಷ್ಟು ಯೋಚನೆ ಮಾಡಿ ನಿರ್ಧಾರಕ್ಕೆ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಮತ್ತೆ ಈ ಬಿ.ಟಿ ಎಸ್. ಹಗರಣನ್ನು ಯಾವ ರೀತಿ ಬಗೆಹರಿಸುತ್ತೀರಿ ಎಂದು ಕೇಳಬೇಕಾಗಿದೆ. ದೆಹಲಿಯಲ್ಲಿ ಡೆಲ್ಲಿ ಟ್ರಾನ್ಸ್‌ಪೋರ್ಟ್ ಸರ್ವಿಸ್ ಇದೆ. ಹಿಂದೆ ನಮ್ಮ ಚೀಫ್ ಮಿನಿಸ್ಟರ್ ಒಂದು ದಿವಸ ಹೇಳುತ್ತಾ ಇದ್ದರು. ಅವರು ಅಲ್ಲಿ ಸಾರಿಗೆ ಮಂತ್ರಿಯಾಗಿದ್ದುದರಿಂದ ಅದರ ಬಗ್ಗೆ ವಿವರಣೆಗಳನ್ನು ಕೊಟ್ಟರು. ಡೆಲ್ಲಿಯಲ್ಲಿ ಬಸ್‌ಗಳನ್ನು ಕಂಟ್ರ್ಯಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡು ಓಡಿಸುತ್ತಾ ಇದ್ದಾರೆ. ಇದರ ಜೊತೆಯಲ್ಲಿ ಪ್ರೈವೇಟ್ ಬಸ್‌ಗಳನ್ನು ಓಡಿಸುವುದನ್ನು ನಾವು ಡೆಲ್ಲಿಯಲ್ಲಿ ನೋಡಿದ್ದೇವೆ. ಒಂದು-ಎರಡು ರೂಪಾಯಿ ಕೊಟ್ಟರೆ ಒಂದು ಪಾಯಿಂಟ್‌ನಿಂದ ಇನ್ನೊಂದು ಪಾಯಿಂಟ್‌ವರೆಗೆ ತೆಗೆದುಕೊಂಡು ಹೋಗಿ ಬಿಡತಕ್ಕಂಥ ಒಂದು ವ್ಯವಸ್ಥೆ ಇತ್ತು. ಏನೇ ಆಗಲಿ ಸಾರ್ವಜನಿಕರಿಗೆ ಸೇವೆ ಮಾಡುವುದು ನಮ್ಮ ಗುರಿ. ಆದುದರಿಂದ ಬಿ. ಟಿ. ಎಸ್ ಬಸ್ ಏನು ಓಡುತ್ತಿದೆ ಇಲ್ಲಿ ಸ್ವಲ್ಪ ಮಟ್ಟಿಗಾದರೂ ಪ್ರೈವೇಟ್ ಆಪರೇಟರ್ಸ್‌ಗೆ ಕೊಟ್ಟು ಎಕ್ಸ್‌ಪೆರಿಮೆಂಟ್ ಮಾಡಿ ಅದರ ರಿಸಲ್ಟ್ಸ್ ನೋಡಿಕೊಂಡು ಮುಂದುವರಿಯಬಹುದಾಗಿತ್ತು ಎಂದು ಇಷ್ಟು ಹೇಳಿ, ನನಗೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ಸನ್ಮಾನ್ಯ ಸಚಿವರು ತಂದಿರತಕ್ಕ ಬೇಡಿಕೆಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತ. ಕಾಲ ಅಭಾವವನ್ನು ಅರಿತು ನಾನು ಕೆಲವೇ ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಬಹಳ ಪ್ರಾಮುಖ್ಯವಾಗಿ ಚರ್ಚೆ ಮಾಡಬೇಕು ಎಂಬ ಇಚ್ಛೆಪಟ್ಟಿರತಕ್ಕದ್ದು ಸಾರಿಗೆ ಇಲಾಖೆ ಬಗ್ಗೆ. ಇವತ್ತು ಸಾರಿಗೆ ವ್ಯವಸ್ಥೆ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತು ಸಾರಿಗೆ ವ್ಯವಸ್ಥೆ ಎಷ್ಟು ಅವಶ್ಯಕ ಮತ್ತು ಎಷ್ಟು ಅವ್ಯವಸ್ಥೆಯಾಗಿದೆ ಎನ್ನುವುದು ಕೂಡ ತಮಗೆ ತಿಳಿದಿರತಕ್ಕದ್ದು. ದಿನೇದಿನೇ ಜನಸಂಖ್ಯೆಯು ಸ್ಫೋಟ ಜಾಸ್ತಿಯಾದ ಹಾಗೆಲ್ಲ ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗಿ ಸಮಸ್ಯೆಗಳು ಉಲ್ಬಣವಾಗುತ್ತಿವೆ. ಇವತ್ತು ಇದನ್ನು ಎದುರಿಸತಕ್ಕಂಥ ಶಕ್ತಿ ನಿಮಗೆ ಇದೆಯೇ ಎನ್ನತಕ್ಕಂಥ ಪ್ರಶ್ನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ವ್ಯವಸ್ಥೆಯನ್ನು ಅರಿತೆ ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಗೆ ಸ್ವಲ್ಪ ಮಟ್ಟಿಗಾದರೂ ಬೇಡಿಕೆ ಈಡೇರಿಸುವುದರಲ್ಲಿ ಸಫಲರಾಗುತ್ತಾರೆ, ಕೆಲಸವನ್ನು ಮಾಡುತ್ತಾರೆ ಎಂಬ ಉದ್ದೇಶದಿಂದ ಯುವಕ ಮಂತ್ರಿಗಳನ್ನು ಹಾಕಿದ್ದಾರೆಂದು ನನಗಾದರೂ ಅನಿಸುತ್ತದೆ. ಆದರೆ ನಾನು ಅವರನ್ನು ಟೀಕೆ ಮಾಡುತ್ತಾ ಇಲ್ಲ, ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಮುಖ್ಯವಾಗಿ ತಮ್ಮ ಕೈಯಲ್ಲಿ ಒಂದು ಕಡೆ ಖಾಸಗಿಯಲ್ಲಿ ಬಸ್‌ಗಳನ್ನು ನಡೆಸತಕ್ಕಂಥಾದ್ದು ಇದೆ, ಮತ್ತೊಂದು ಕಡೆ ಇಡೀ ಕರ್ನಾಟಕದಲ್ಲಿ ಬಹು ದೊಡ್ಡದಾಗಿರತಕ್ಕಂಥ ಕೆ. ಎಸ್. ಆರ್. ಟಿ. ಸಿ. ಸಂಸ್ಥೆ ಇದೆ. ಈ ಸಂಸ್ಥೆಯ ಗಾತ್ರವೇನು ಎಂದು ನಾನು ಹೇಳಬೇಕಾದ್ದಿಲ್ಲ. ಸುಮಾರು ೬೦೦೦ ಷೆಡ್ಯೂಲ್‌ಗಳನ್ನು ಇಟ್ಟುಕೊಂಡಿದ್ದೀರಿ, ೭೦೦೦ ಬಸ್‌ಗಳನ್ನು ಇಟ್ಟಿದ್ದೀರಿ. ಸುಮಾರು ೫೫-೬೦ ಸಾವಿರ ಜನ ನೌಕರರಿದ್ದಾರೆ.

ಶ್ರೀ ಕೆ. ಜೆ. ಜಾರ್ಜ್.—೭೭೦೦ ಷೆಡ್ಯೂಲ್ ಇದೆ, ೯ ಸಾವಿರ ಬಸ್ಸುಗಳು ಇವೆ.

ಶ್ರೀ ಟಿ. ಬಿ. ಜಯಚಂದ್ರ.—ಅಂದರೆ ನಾನು ಹೇಳುವುದಕ್ಕಿಂತಲೂ ಜಾಸ್ತಿ ಇದೆ. ಇಷ್ಟೆಲ್ಲಾ ವ್ಯವಸ್ಥೆ ಇಟ್ಟುಕೊಂಡು ಕೂಡ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಇಲ್ಲದಂತಾಗಿದೆ. ತಮಗೆ ಹೆಚ್ಚಿನ ಸಮಯ ಬಸ್ಸಿನಲ್ಲಿ ಓಡಾಡಿ ಅನುಭವ ಇಲ್ಲವೆಂದು ಕಾಣುತ್ತದೆ. ತುಮಕೂರಿನಿಂದ ಬೆಂಗಳೂರಿಗೆ ಬರಬೇಕಾದರೆ, ನಾವು ಯಾವತ್ತೂ ಕುಳಿತು ಬರುವುದಕ್ಕೆ ಸಾಧ್ಯವಿಲ್ಲ. ನಮ್ಮ ಊರಿನಿಂದ ಬರಬೇಕಾದರೆ ಕುಳಿತು ಬರುವುದಕ್ಕೆ ಸಾಧ್ಯವಾಗಿಲ್ಲ. ನಿಂತು ಬರತಕ್ಕಂಥ ಪರಿಸ್ಥಿತಿ ಇದೆ. ಇತ್ತೀಚಿಗಂತೂ ಇದರ ಅವ್ಯವಸ್ಥೆ ಬಹಳಷ್ಟು ಜಾಸ್ತಿಯಾಗಿದೆ. ಈ ಅವ್ಯವಸ್ಥೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ನಾವು ಎರಡು ತಿಂಗಳ ಹಿಂದೆ ದರಗಳನ್ನು ಜಾಸ್ತಿ ಮಾಡಿದಿರಿ. ತಾವು ಒಂದು ಹೇಳಿಕೆ ಕೊಟ್ಟು ೮೦-೯೦ ಕೋಟಿ ರೂಪಾಯಿಗಳವರೆಗೆ ಕೊರತೆ ಇದ್ದು ಅದನ್ನು ತುಂಬಿಸಬೇಕಾಗಿರುವುದರಿಂದ ಬೆಲೆಗಳನ್ನು ಏರಿಸಬೇಕಾಗಿ ಬಂತು ಎಂದು ಹೇಳಿ ಬೆಲೆಗಳನ್ನು

ಏರಿಸಿದಿರಿ. ಸುಮಾರು ೩೫ ಪರ್ಸೆಂಟ್ ಹೆಚ್ಚಿನ ವರಮಾನ ಬಂದರೆ ಕೊರತೆ ನೀಗಬಹುದು ಎನ್ನುವ ಉದ್ದೇಶದಿಂದ ಈ ರೀತಿ ಮಾಡಿದಿರಿ. ಒಂದು ವರ್ಷಕ್ಕೆ ೮೦ ಕೋಟಿ ರೂಪಾಯಿ ಹೆಚ್ಚು ಆದಾಯ ಬರತಕ್ಕಂಥ ಮಟ್ಟಕ್ಕೆ ನೀವು ಬಸ್ ಚಾರ್ಜುಗಳನ್ನು ಜಾಸ್ತಿ ಮಾಡಿದಿರಿ. ಮಾಡಿದಿರಿ. ನೀವು ಚಾರ್ಜುಗಳನ್ನು ಜಾಸ್ತಿ ಮಾಡಿ ಎರಡು ತಿಂಗಳಾಯಿತು. ಎಷ್ಟು ವರಮಾನ ಬಂದಿದೆ ? ನನಗೆ ತಿಳಿದಮಟ್ಟಿಗೆ ಎರಡು ತಿಂಗಳಾದರೂ ೧೫ ಪರ್ಸೆಂಟ್ ವರಮಾನ ಬಂದಿರಬಹುದೇ ಹೊರತು, ಅದಕ್ಕಿಂತ ಜಾಸ್ತಿ ಬಂದಿಲ್ಲ. ಉಳಿಕೆ ೨೦ ಪರ್ಸೆಂಟ್ ನೀವು ಆಂಟಿಸಿಪೇಟ್ ಮಾಡಿದ್ದು ಎಲ್ಲಿ ಹೋಯಿತು ? ತಾವು ಚಾರ್ಜ್ ಮಾಡಿದ್ದರಿಂದ ಬಸ್‌ನಲ್ಲಿ ಓಡಾಡುವಂಥ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಿಲ್ಲ. ತಾವು ಬರೀ ಚಾರ್ಜ್ ಜಾಸ್ತಿ ಮಾಡುವುದರಿಂದ ಕೊರತೆಯನ್ನು ತುಂಬುವುದಕ್ಕಾಗುವುದಿಲ್ಲ, ಆಡಳಿತವನ್ನು ಶುದ್ಧ ಮಾಡುವುದರ ಜೊತೆಗೆ ಆಡಳಿತದಲ್ಲಿ ಹೆಚ್ಚಿನ ಕಂಟ್ರೋಲ್ ಇಟ್ಟುಕೊಳ್ಳಬೇಕು. ಸೋರಿಹೋಗತಕ್ಕದ್ದನ್ನು ತಡೆಗಟ್ಟುವ ವ್ಯವಸ್ಥೆ ಮಾಡಿದರೆ, ಕೊರತೆಯನ್ನು ತುಂಬುವುದಕ್ಕೆ ಸಾಧ್ಯವಿದೆ. ಅದನ್ನು ಬಿಟ್ಟು ತಾವು ಬರೀ ಚಾರ್ಜ್ ಜಾಸ್ತಿ ಮಾಡುತ್ತಾ ಹೋದರೆ, ಕರ್ನಾಟಕದ ಜನತೆ ವರ್ಮ ವಿರುದ್ಧವಾದಾರು ಎನ್ನುವ ಎಚ್ಚರಿಕೆಯನ್ನು ಕೂಡ ಕೊಡಬಯಸುತ್ತೇನೆ. ಮುಖ್ಯವಾಗಿ ಸಾರಿಗೆ ವ್ಯವಸ್ಥೆಯನ್ನು ಇಂಪ್ರೂವ್ ಮಾಡದೇ ಹೋದರೆ, ಪಕ್ಷದ ಮೇಲೂ ಕೂಡ ಜನತೆ ನಂಬಿಕೆ ಕಳೆದುಕೊಳ್ಳತಕ್ಕ ಪರಿಸ್ಥಿತಿ ಬರಬಹುದು, ಅದಕ್ಕಾಗಿ ತಾವು ಇದರ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕೆಂದು ಹೇಳುತ್ತೇನೆ. ಬಹು ಮುಖ್ಯವಾಗಿ ಹಣ ಸೋರತಕ್ಕ ಪರಿಸ್ಥಿತಿ ಎಲ್ಲಿದೆ ಅಂದರೆ; ತಾವು ಹೇಳಿದಂತೆ ನಿಮ್ಮಲ್ಲಿ ೯,೦೦೦ ಬಸ್ಸುಗಳು ಇವೆ. ಈ ಬಸ್ಸುಗಳಿಗೆ ಬಿಡಿಭಾಗಗಳನ್ನು ಕೊಳ್ಳುವಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ಡೆಪ್ಯೂಟಿ ಕಮಿಷನರ್ ಒಂದು ವರ್ಷಕ್ಕೆ ೩ ಲಕ್ಷ ರೂಪಾಯಿ ಮೌಲ್ಯದ ಬಿಡಿಭಾಗಗಳನ್ನು ಕೊಳ್ಳುವುದಕ್ಕೆ ಅವಕಾಶವಿದೆ. ಆದರೆ, ಇವರು ಒಂದೂವರೆ ಕೋಟಿ, ಎರಡು ಕೋಟಿ ರೂಪಾಯಿ ಬೆಲೆ ಬಾಳುವ ಬಿಡಿಭಾಗಗಳನ್ನು ಕೊಳ್ಳುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಿನಲ್ಲಿರತಕ್ಕ ಡಿವಿಜನಲ್ ಕಂಟ್ರೋಲ್‌ರವರು ಒಂದೂವರೆ ಕೋಟಿ ರೂಪಾಯಿ ಬೆಲೆಯ ಬಿಡಿ ಭಾಗಗಳನ್ನು ಕೊಂಡಿದ್ದಾರೆ, ಅದನ್ನು ಕೊಳ್ಳಬೇಕಾದರೆ ಆದಕ್ಕೆ ಒಂದು ಪರ್ಚೇಸ್ ಕಮಿಟಿ ಇಲ್ಲವೆ, ನೀತಿ ಇಲ್ಲವೆ, ನಿರ್ಧಾರ ಇಲ್ಲವೆ ? ಇವೆಲ್ಲವನ್ನೂ ಉಲ್ಲಂಘನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಇದರಲ್ಲಿ ಸಾಕಷ್ಟು ಹಣ ದುರುಪಯೋಗವಾಗುತ್ತದೆ ಎಂದರೆ ತಪ್ಪಾಗಲಾರದು. ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಯಾವುದೇ ಬಿಡಿಭಾಗಗಳನ್ನು ಕೊಂಡರೂ ಶೇ. ೩೦ ರಷ್ಟು ಹಣ ದುರುಪಯೋಗವಾಗಿರುತ್ತದೆ ಎನ್ನುವುದನ್ನು ತಾವು ಅರಿಯಬೇಕು. ಈ ಸಂಸ್ಥೆಯಲ್ಲಿ ೧೫-೧೬ ವಿಭಾಗಗಳಿವೆ. ಸಿವಿಲ್ ಇಂಜಿನಿಯರಿಂಗ್, ಮೆಕಾನಿಕಲ್ ಇಂಜಿನಿಯರಿಂಗ್ ಇದೆ. ಬಸ್ ಕೆಟ್ಟು ಹೋದರೆ ರಿಪೇರಿ ಮಾಡಲಿಕ್ಕೆ ಒಂದು ವಿಭಾಗ ಇದೆ. ಪ್ರತಿಯೊಂದು ವಿಭಾಗವನ್ನು ಚುರುಕುಗೊಳಿಸಬೇಕಾಗಿದೆ. ಇದರಲ್ಲಿ ಸೂಪರ್ ಟೈಂ ಸ್ಕೇಲ್ ಆಫೀಸರ್ಸ್‌ನ್ನು ತಾವು ಇಟ್ಟುಕೊಂಡಿದ್ದೀರಿ. ಈ ವಿಭಾಗಗಳ ಕಾರ್ಯವೈಖರಿ ಬಗ್ಗೆ ನಿಗಾ ಕೊಡಬೇಕೆಂದು ಹೇಳುತ್ತೇನೆ. ಎಲ್ಲರಕ್ಕಿಂತ ಮುಖ್ಯವಾಗಿ ಭ್ರಷ್ಟಾಚಾರಕ್ಕೆ ಒಳಗಾಗಿರತಕ್ಕ ಅಧಿಕಾರಿಗಳನ್ನು ಇಟ್ಟುಕೊಂಡು ಸಾರಿಗೆ ಸಂಸ್ಥೆಯ ಉಸ್ತುವಾರಿ ಮಾಡುತ್ತಿದ್ದೀರಿ. ಇದರ ಬಗ್ಗೆ ಬಹಳ ಎಚ್ಚರಿಕೆ ವಹಿಸಬೇಕು. ಒಂದು ಉದಾಹರಣೆ ಹೇಳುವುದಾದರೆ, ೩೫ ಜನ ಅಧಿಕಾರಿಗಳು ಸಾರಿಗೆ ಸಂಸ್ಥೆಯಲ್ಲಿ ಇಲ್ಲೀಗಲ್ ಅಪಾಯಿಂಟ್ ಮಾಡಿರತಕ್ಕ ಆರೋಪಗಳು ಇದ್ದಾಗ್ಯೂ, ಅವರ ಮೇಲೆ ಯಾವುದೇ ವಿಚಾರಣೆ ಮಾಡದೇ, ಅವರನ್ನೇ ಸೇವೆಯಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ಅವರ ಬಗ್ಗೆ ತಾವು ಹೆಚ್ಚಿನ ನಿಗಾ ವಹಿಸಬೇಕೆಂದು ಹೇಳುತ್ತಿದ್ದೇನೆ.

ಇವೊತ್ತು ನೀವು ಕಂಟ್ರೋಲರ್ ಆಫ್ ಸ್ಟೋರ್ಸ್ ಅಂಡ್ ಪರ್ಚೇಸಸ್‌ನಲ್ಲಿ ಒಬ್ಬರನ್ನು ಇಟ್ಟುಕೊಂಡಿದ್ದೀರಿ. ತಾವು ಅವರ ಇತಿಹಾಸವನ್ನು ಅರಿಯಬೇಕು. ಅವರು ಎಲ್ಲಿಂದ ಬಂದರು, ಎಲ್ಲಿಗೆ ಹೋದರು. ಅವರ ಕೆಲಸದ ವೈಖರಿ ಯಾವರೀತಿ ನಡೆಯುತ್ತಿದೆ ಎನ್ನುವುದರ ಬಗ್ಗೆ ಸೂಕ್ಷ್ಮವಾಗಿ ವಿಚಾರಮಾಡಿದರೆ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇನ್ನು ಬಹಳ ಮುಖ್ಯವಾಗಿರತಕ್ಕಂಥ ವಿಚಾರ ಅಂದರೆ, ಪಿಡಬ್ಲ್ಯೂಡಿ ಇಲಾಖೆ ಇದೆ; ನಮ್ಮ ಸರ್ಕಾರದ ಸೌಮ್ಯದಲ್ಲಿ ಬರತಕ್ಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್. ಲ್ಯಾಂಡ್ ಆರ್ಮಿ ಇದೆ. ಬೆಂಗಳೂರಿನಲ್ಲಿ ಯಾವುದೇ ಬಸ್‌ಸ್ಟ್ಯಾಂಡ್ ಕಟ್ಟಬೇಕಾದರೆ ಅಥವಾ ಇನ್ಯಾವುದೇ ಕಟ್ಟಡ ಕಟ್ಟಬೇಕಾದರೆ ಡಿಪಾರ್ಟ್‌ಮೆಂಟಲ್ಲಾಗಿ ಕೆಲಸ ಮಾಡಿಸುತ್ತಿದ್ದಾರೆ ಟೆಂಡರ್ ಕರೆಯುತ್ತಿಲ್ಲ. ಅದೂಕೂಡ ಡಿಪಾರ್ಟ್‌ಮೆಂಟಲ್ ಆಗಿ ಯಾರೂ ಮಾಡುತ್ತಿಲ್ಲ. ಖಾಸಗಿ ಯಾವರ ಕೈಯಲ್ಲಿ ಮಾಡಿಸಿ ಬಿಲ್ ಮಾಡತಕ್ಕವರು ಅಧಿಕಾರಿಗಳು, ಇದೆಲ್ಲಾ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದ್ದರಿಂದ, ಅದರ ಬಗ್ಗೆ ವಿಚಾರ ಮಾಡಬೇಕು. ಇನ್ನು ಪ್ರತಿದಿವಸ ಬೆಳಿಗ್ಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಅಂದರೆ ಯಾವಾಗ ನೋಡಿದರೂ ಬಸ್ಸುಗಳು ದಾರಿದಾರಿಯಲ್ಲೂ

ಬ್ರೇಕ್‌ಡೌನ್ ಆಗಿ ನಿಂತಿರುವುದನ್ನು ನೋಡುತ್ತಿದ್ದೇವೆ. ಈಗ ತಾವು ಜನರಲ್ ಮ್ಯಾನೇಜರ್ ಟೆಕ್ನಿಕಲ್ ಹುದ್ದೆಯನ್ನು ಸೃಷ್ಟಿಮಾಡಿ ಇಟ್ಟಿದ್ದೀರಿ. ಅವರು ಏನು ಕೆಲಸ ಮಾಡಿದ್ದಾರೆ. ಎಷ್ಟು ಡಿಪೋಗಳಿಗೆ ಹೋಗಿ ಚೆಕ್ ಮಾಡಿದ್ದಾರೆಂದು ತಾವು ವಿಚಾರ ಮಾಡಬೇಕು. ಇನ್ನು ಸಾರಿಗೆ ವ್ಯವಸ್ಥೆಯನ್ನು ಇಂಪ್ರೂವ್‌ಮಾಡುವ ದೃಷ್ಟಿಯಿಂದ ಐದು ಲಕ್ಷ ಕಿಲೋಮೀಟರ್ ಓಡಿದ ತಕ್ಷಣ ಆ ಬಸ್ಸನ್ನು ಸ್ಕ್ರ್ಯಾಪ್ ಮಾಡಿ ಸೇಲ್ ಮಾಡುವ ವ್ಯವಸ್ಥೆಯನ್ನು ಇಟ್ಟಿದ್ದೀರಿ; ನಮ್ಮ ರಾಜ್ಯದಲ್ಲಿ ಮಾತ್ರ ಈ ವ್ಯವಸ್ಥೆ ಇರುವಂಥಾದ್ದು. ಇವತ್ತು ಅದೇ ಪಕ್ಕದ ಬೇರೆ ರಾಜ್ಯಗಳಲ್ಲಿ ಹತ್ತುಲಕ್ಷ–ಹದಿನೆಂಟು ಲಕ್ಷ ಕಿಲೋಮೀಟರ್ ಓಡಿರತಕ್ಕ ಬಸ್ಸುಗಳನ್ನು ಇಟ್ಟುಕೊಂಡು ಅನಂತರ ಸ್ಕ್ರ್ಯಾಪ್ ಮಾಡತಕ್ಕಂಥ ವ್ಯವಸ್ಥೆ ಇದೆ. ಇವೊತ್ತು ತಾವು ಐದು ಲಕ್ಷ ಕಿಲೋಮೀಟರ್ ಮಾತ್ರ ಓಡಿಸಿ ಸ್ಕ್ರ್ಯಾಪ್ ಮಾಡುತ್ತಿಲ್ಲ. ಬೇರೆಯವರಿಗೆ ಹರಾಜು ಹಾಕುತ್ತಿದ್ದೀರಿ ಸೇಲ್ ಏನು ಮಾಡುತ್ತಿದ್ದೀರಿ. ಸೇಲ್ ಮಾಡುವುದರಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗುತ್ತಿದೆ. ಅದರ ಬಗ್ಗೆ ತಾವು ಎಚ್ಚರಿಕೆ ಕೊಡಬೇಕೆಂದು ಹೇಳುತ್ತೇನೆ. ಇನ್ನು ನನ್ನ ಕ್ಷೇತ್ರದ ಬಗ್ಗೆ ತಮಗೆ ಅನೇಕ ಕಾಗದಗಳನ್ನು ಬರೆದಿದ್ದೆ. ತಮ್ಮಿಂದ ಮಾತ್ರ ನನಗೆ ಕಾಗದ ಬರುತ್ತದೆಯೇ ವಿನಹ ಕಾರ್ಯ ಆಗಿರುವ ಬಗ್ಗೆ ಇದುವರೆಗೂ ಯಾವುದೇ ಕಾಗದ ಬರಲಿಲ್ಲ. ನಾನು ಹುಡುಕಿಕೊಂಡು ಹೋಗಿ ನೋಡಿದಾಗ ತಾವು ಕಾಗದ ಬರೆದುದು ಹೇಗೆ ಇತ್ತೊ ಹಾಗೆಯೇ ಕೆ. ಎಸ್. ಆರ್. ಟಿಸಿ. ಯಲ್ಲಿ ಇತ್ತು. ತಾವು ಸರ್ಕಾರದ ಯುವಕ ಸಚಿವರಾಗಿದ್ದೀರಿ. ನಾನು ಈ ಸಂದರ್ಭದಲ್ಲಿ ತಮಗೆ ಹೇಳಬೇಕೆಂದರೆ, ಹಿರಿಯ ಅಧಿಕಾರಿಗಳು ನಾನು ಕಾಗದವನ್ನು ನೋಡಿಯೇ ಇಲ್ಲ ಎಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಗಲಾಟೆ ಮಾಡಿ ತೆಗೆಸಿದಾಗ ಗುಮಾಸ್ತರು ಆಗ ಕಾಗದ ತೆಗೆದು ತೋರಿಸುತ್ತಾರೆ. ಈ ಮಟ್ಟಕ್ಕೆ ತಮ್ಮ ಅಡ್ಮಿನಿಸ್ಟ್ರೇಷನ್ ಇದ್ದರೆ, ಬಹಳ ಕಷ್ಟವಾದೀತು. ಅದನ್ನು ತಾವು ಚುರುಕುಗೊಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನನ್ನ ಕ್ಷೇತ್ರದಮಟ್ಟಿಗೆ ಹೇಳಬೇಕೆಂದರೆ, ಕಳ್ಳಂಬೆಳ್ಳ ನನ್ನ ಕ್ಷೇತ್ರದ ಹೆಬ್ಬಾಗಿಲು. ಅಲ್ಲಿ ರಿಕ್ವೆಸ್ಟ್ ಸ್ಟಾಪ್ ಕೊಡಬೇಕೆಂದು ಕೇಳಿದಾಗಲೂ ಕೂಡ ಸ್ಟಾಪ್ ಮಾಡಬೇಕೆಂದು ತಾವು ಆದೇಶ ಕೊಟ್ಟರೂ ಕೂಡ ಒಂದು ಬಸ್‌ಕೂಡ ಇದುವರೆಗೂ ಸ್ಟಾಪ್ ಮಾಡಲಿಲ್ಲ. ನನ್ನ ಕ್ಷೇತ್ರ ಸಾಕಷ್ಟು ಹಳ್ಳಿಗಳಿಂದ ಕೂಡಿರತಕ್ಕದ್ದು. ಸಾಕಷ್ಟು ಬಸ್ಸುಗಳನ್ನು ಎಕ್ಸ್‌ಟೆನ್‌ಷನ್ ಮಾಡಿ ಎಂದು ಕೋರಿಕೆ ಮಾಡಿದರೂ ಇಲ್ಲಿಯವರೆಗೂ ಒಂದು ಕೆಲಸ ಆಗಲಿಲ್ಲ. ಇವತ್ತು ನಾನು ಊರಿಗೆ ಹೋದ ತಕ್ಷಣ ಕೇಳುತ್ತಾರೆ. ಜಾರ್ಜ್‌ರವರು ತಮಗೆ ಬೇಕಾದವರು ತಮ್ಮ ಜೊತೆಯಲ್ಲಿದ್ದಂಥವರು, ಏನು ಮಾಡಿದಿರಿ ಎಂದು ನನಗೆ ಕೇಳಿದಾಗ ನನಗೆ ಉತ್ತರ ಹೇಳಲಿಕ್ಕೆ ಆಗುವುದಿಲ್ಲ. ಆದ್ದರಿಂದ, ಈಗಲಾದರೂ ನಾನು ಬರೆದಿರತಕ್ಕ ಕಾಗದಗಳನ್ನು ತರಿಸಿ, ಆದಷ್ಟು ಕೆಲಸವನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನೀವು ಯಾವುದೇ ಬಸ್‌ಸ್ಟ್ಯಾಂಡಿಗೆ ಹೋದರೂಕೂಡ ಅಲ್ಲಿ ಹೋಟೆಲುಗಳು, ಕ್ಯಾಂಟೀನುಗಳು ಇವೆ. ಇವತ್ತು ಯಾವ ಬಸ್ಟ್ಯಾಂಡ್ ಹೋಟಲುಗಳಲ್ಲೂ ಊಟ, ತಿಂಡಿ, ಮಾಡುವ ಹಾಗೆ ಇಲ್ಲ: ಕೆಲವೊಂದು ಸಂದರ್ಭದಲ್ಲಿ ವಿಧಿ ಇಲ್ಲದೆ ತಿನ್ನಬೇಕಾಗಿದೆ. ಇನ್ನು ನಿಮ್ಮ ಸಾರಿಗೆ ಸಂಸ್ಥೆಗೆ ಕೋಟ್ಯಾಂತರ ರೂಪಾಯಿ ಬಾಕಿ ಇದೆ. ಏತಕ್ಕೋಸ್ಕರ ಬಾಕಿ ಇದೆ ಎಂದು ವಿಚಾರ ಮಾಡುವುದಾದರೆ, ನಿಮ್ಮಲ್ಲಿಯೇ ಇರತಕ್ಕ ಒಬ್ಬ ಹಿರಿಯ ಅಧಿಕಾರಿ ತನ್ನದೇ ಆದ ಹತ್ತು ಕ್ಯಾಂಟೀನ್‌ಗಳನ್ನು ಇಟ್ಟುಕೊಂಡಿದ್ದಾನೆ. ಈಗ ಅವರು ರಿಟೈರ್ ಆಗಿ ಹೋಗಿದ್ದಾರೆ. ಅವರಿಗೆ ತಾವು ಪೆನ್‌ಷನ್ ಕೂಡ ಸೆಟಲ್ ಮಾಡಿ ಕಳುಹಿಸಿದ್ದೀರಿ. ಏತಕ್ಕೋಸ್ಕರ ಅಷ್ಟೊಂದು ಬಾಕಿ ಇದೆ ಎನ್ನುವುದನ್ನು ತಾವು ಉತ್ತರದಲ್ಲಿ ತಿಳಿಸಬೇಕು. ಆ ಹೋಟೆಲಿನ ಮಾಲೀಕತ್ವ ಯಾರಿಗಿದೆ. ಅವರು ಯಾರ ಜೊತೆಯಲ್ಲಿ ಇದ್ದಾರೆ. ಅವರು ಯಾರ ಸಂಬಂಧಿಕರು ಎನ್ನುವುದನ್ನು ಹೇಳಬೇಕಾಗುತ್ತದೆ. ಇಷ್ಟೆಲ್ಲಾ ವ್ಯವಸ್ಥೆ ಇದ್ದರೂ ಡ್ರೈವರ್ಸ್, ಕಂಡೆಕ್ಟರ್ಸ್ ಇಲ್ಲದೆ ರೂಟ್ ಆಪರೇಟ್ ಮಾಡದೇ ಇರತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ ಸರ್ಕಾರದ ವತಿಯಿಂದ ಸುಮಾರು ನಾಲ್ಕು ನೂರು ಕೋಟಿ ರೂಪಾಯಿ ಬಂಡವಾಳ ಹಾಕಿ ಬಸ್ಸುಗಳನ್ನು ಇಟ್ಟುಕೊಂಡು, ಕಂಡಕ್ಟರ್ ಇಲ್ಲ ಎಂದು ಬಸ್ಸುಗಳನ್ನು ನಿಲ್ಲಿಸುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ, ಆದಷ್ಟುಬೇಗ ಕಂಡಕ್ಟರುಗಳನ್ನು ರೆಕ್ರೂಟ್ ಮಾಡಿಸಿ ತಪ್ಪು ಮಾಡಿದಂತಹವರನ್ನು ಮನೆಗೆ ಕಳುಹಿಸಿ ಅವರನ್ನು ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ. ಆದರೆ ಕಂಡಕ್ಟರ್ ಇಲ್ಲ, ಡ್ರೈವರ್ ಇಲ್ಲ ಎಂದು ರೂಟ್ ಆಪರೇಟ್ ಮಾಡದೇ ಇರತಕ್ಕದ್ದು ಸರಿಯಲ್ಲ. ಈ ಕಡೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಹರಿಸಬೇಕೆಂದು ಹೇಳುತ್ತೇನೆ.

ಮಾನ್ಯ ಉಪಾಧ್ಯಕ್ಷಿಣಿಯವರು ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡುವಾಗಲೇ ಬೆಲ್ ಹೊಡೆಯುವುದಕ್ಕೆ ಶುರು ಮಾಡಿದಾಗ, ನಾನು ಹೆಚ್ಚಿಗೆ ಮಾತನಾಡುವುದಕ್ಕಾಗುವುದಿಲ್ಲ, ನಾನು ಬೇಗನೆ ಮುಗಿಸುತ್ತೇನೆ. ತಮ್ಮ ಆಡಳಿತವನ್ನು ಬಹಳಷ್ಟು ಚುರುಕುಗೊಳಿಸಬೇಕಾಗುತ್ತದೆ. ಇವತ್ತು ಪ್ರಮೋಷನ್ ಕೊಡಬೇಕಾದರೆ ಸಿ ಅಂಡ್ ಆರ್ ರೂಲ್ಸ್ ಇದೆ. ಆ ರೂಲ್ ಪ್ರಕಾರ

ಬಿಟ್ಟು ಸಾಕಷ್ಟು ಜನರಿಗೆ ಪ್ರಮೋಷನ್ ಕೊಟ್ಟಿದ್ದೀರಿ, ಇದು ಸರಿಯಲ್ಲ, ನಿಮ್ಮ ಅಧಿಕಾರಿ ಎಲ್ಲಿಯವರೆಗೆ ಅದರ ವ್ಯಾಪ್ತಿಯನ್ನು ಮೀರಿ ಕೊಟ್ಟಿದ್ದಾರೆಂದರೆ, ಒಬ್ಬ ಸ್ಟೆನೋ ಆಗಿರತಕ್ಕಂತಹವನು ಸೀನಿಯರ್ ಸ್ಕೇಲ್ ಆಫೀಸರ್ ಆಗಿದ್ದಾನೆ. ಈ ಮಟ್ಟಕ್ಕೆ ಹೋಗಬೇಕಾದರೆ ಅವನಲ್ಲಿ ಯಾವ ಅರ್ಹತೆ ಇತ್ತು ಎನ್ನತಕ್ಕದ್ದನ್ನು ತಾವು ಯೋಚನೆ ಮಾಡಿ ಪ್ರಮೋಷನ್ ಕೊಡಬೇಕಾದರೆ ಅವರ ಯೋಗ್ಯತೆ, ಏನು, ಅವರ ಶಕ್ತಿ ಏನು ಎಂಬುದನ್ನು ವಿಚಾರ ಮಾಡಿ ಕೊಡಬೇಕು. ಒಬ್ಬ ಸ್ಟೆನೋ ಆಗಿದ್ದಂತಹವನು ಸಿ.ಪಿ.ಎಂ. ಆಗಿದ್ದಾನೆ ಇದರ ಬಗ್ಗೆ ವಿಚಾರ ಮಾಡಿ. ಇಷ್ಟುಮೇಲಾದರೂ ಕೂಡ ಈ ಇಲಾಖೆಯನ್ನು ಹೆಚ್ಚು ಸುಧಾರಣೆ ಮಾಡಿ ಮೇಲ್ಮಟ್ಟಕ್ಕೆ ತರುತ್ತೀರಿ ಎಂಬ ನಂಬಿಕೆ ನನಗಿದೆ. ಇನ್ನು ಆಹಾರ ಇಲಾಖೆಯ ಬಗ್ಗೆ ಹೇಳುವುದಾದರೆ, ಆಹಾರವನ್ನು ವಿತರಣೆ ಮಾಡತಕ್ಕಂತಹವರು ಮತ್ತು ಲೈಸೆನ್ಸ್ ಕೊಡತಕ್ಕಂಥವರು ತಹಸೀಲ್ದಾರ್‌ರವರು. ಆದರೆ ಅದರ ವಿತರಣಾ ವ್ಯವಸ್ಥೆ ಜಿಲ್ಲಾ ಪರಿಷತ್ತಿಗೆ ಇದೆ. ಈ ದ್ವಂದ್ವ ನೀತಿಯಿಂದಾಗಿ ಯಾರಿಗೆ ಅದು ತಲುಪಬೇಕೋ ಅವರಿಗೆ ತಲುಪುತ್ತಿಲ್ಲ. ಸುಮಾರು ೫೦-೬೦ ಕೋಟಿ ರೂಪಾಯಿ ಸಬ್ಸಿಡಿ ಮುಖೇನ ಬಡವರಿಗೆ ಆಹಾರ ಧಾನ್ಯಗಳನ್ನು ಒದಗಿಸಬೇಕೆಂದು ತಮ್ಮ ಉದ್ದೇಶವಿದ್ದರೂ ಕೂಡ ಅದು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತಿಲ್ಲ. ಇನ್ನು ಹಸಿರು ಕಾರ್ಡ್, ರೆಡ್ ಕಾರ್ಡ್ ವ್ಯವಸ್ಥೆಯನ್ನು ಬದಲು ಮಾಡಬೇಕು. ಮಾನ್ಯ ಸಚಿವರಿಗೆ ಕೂಡ ಇದು ಗೊತ್ತಿರುವಂಥಾದ್ದು. ಇದು ಯಾರಿಗೆ ಬೇಕೋ ಅವರಿಗೆ ತಲುಪುತ್ತಿಲ್ಲ. ಇವತ್ತು ಸೀಮೆ ಎಣ್ಣೆ ವಿತರಣೆ ಸಮರ್ಪಕವಾಗಿ ಆಗುತ್ತಿಲ್ಲ. ಈ ಪಾಮೋಲಿನ್ ಎಣ್ಣೆ ವಿತರಣೆ ಕೂಡ ಸರಿಯಾಗಿ ಆಗುತ್ತಿಲ್ಲ. ಜಿಲ್ಲಾ ಪರಿಷತ್ ಆಫೀಸಿನಲ್ಲಿ ಕೇಳಿದಾಗ ವಿತರಣೆಯಾಗಿರುವುದಕ್ಕೆ ಲೆಕ್ಕ ಇರುತ್ತದೆ. ಆದರೆ ಅಲ್ಲಿ ಹೋಗಿ ಡೆಲಿವರಿಯಾಗಿ ವಿತರಣೆಯಾಗಿರುವುದಕ್ಕೆ ಯಾವ ಲೆಕ್ಕ ಇರುವುದಿಲ್ಲ. ಈ ವ್ಯವಸ್ಥೆಯನ್ನು ಜಿಲ್ಲಾ ಪರಿಷತ್ತಿನಿಂದ ಕಿತ್ತುಕೊಂಡು ತಹಸೀಲ್ದಾರರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಕೊಡತಕ್ಕಂತಹ ಕೆಲಸವನ್ನು ಮಾಡಿದರೆ ಹೆಚ್ಚು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಆಗುತ್ತದೆ ಎಂದು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಉಪಾ ಅಧ್ಯಕ್ಷರೆ,...

ಶ್ರೀ ಕೆ. ಸೋಮಪ್ಪ ಸುವರ್ಣ.— ನಾನು ನಿನ್ನೆ ಅರ್ಧ ಮಾತನಾಡುವಾಗಲೇ ನಾಳೆ ನಿಮಗೆ ಪ್ರಥಮಸ್ಥಾನ ಕೊಡೋಣ ಎಂದು ಹೇಳಿದ್ದರು. ನಾನು ಇವತ್ತು ಕಾಯುತ್ತಿದ್ದೇನೆ. ನನ್ನ ಹೆಸರೇ ಕರೆಯಲಿಲ್ಲ.

ಉಪಾಧ್ಯಕ್ಷರು.— ಅವರು ಮಾತನಾಡುತ್ತಿದ್ದಾರೆ.

† ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ಆಹಾರ ಮತ್ತು ನಾಗರೀಕ ಪೂರೈಕೆ ಸಾಗೆ ಮತ್ತು ಸಹಕಾರ ಇಲಾಖೆಯ ಬೇಡಿಕೆಗಳನ್ನು ಏನು ಈ ಸದನದಲ್ಲಿ ಮಂಡಿಸಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ, ಕೆಲವಾರು ವಿಚಾರಗಳನ್ನು ಹೇಳಬೇಕೆಂದು ಬಯಸಿದ್ದೇನೆ. ಈಗ ಬೆಂಗಳೂರು ನಗರದಲ್ಲಿ ಮತ್ತು ಇತರ ಪಟ್ಟಣಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಆಹಾರವನ್ನು ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಸಹಾಯಧನದಿಂದ ಏನು ಪೂರೈಕೆ ಮಾಡುತ್ತಿದ್ದಾರೆ ಇದನ್ನು ಸರಿಯಾಗಿ ವಿತರಣೆ ಮಾಡಬೇಕಾಗುತ್ತದೆ. ಈ ಆಹಾರ ಪದಾರ್ಥಗಳು ಗೋಡಾನ್‌ನಿಂದ ಹೋಲ್‌ಸೇಲ್‌ಗೆ, ಹೋಲ್‌ಸೇಲ್‌ನಿಂದ ರೀಟೇಲ್‌ಗೆ ಹೋಗಬೇಕಾದರೆ ಒಂದು ಮೂಟೆಗೆ ೪-೫ ಕೆಜಿ. ಕಡಿಮೆಯಾಗುತ್ತದೆ. ಇಷ್ಟು ಕಡಿಮೆಯಾದಾಗ ಇವರು ಬಳಕೆದಾರರಿಗೆ ಯಾವ ರೀತಿಯಲ್ಲಿ ಕೊಡುತ್ತಾರೆಂಬುದನ್ನು ಯೋಚನೆ ಮಾಡಬೇಕಾಗಿದೆ. ನಾಗರೀಕ ಪೂರೈಕೆ ಇಲಾಖೆಯವರು ಈ ದಾಸ್ತಾನು ಇಟ್ಟಂತಹ ಸಂದರ್ಭದಲ್ಲಿ ಕಡಿಮೆಯಾಗತಕ್ಕಂತಹ ಪದ್ಧತಿಯನ್ನು ತನಿಖೆ ಮಾಡಿಲ್ಲವೇ ಎಂದು ಈ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳನ್ನು ನಾನು ಕೇಳಬಯಸುತ್ತೇನೆ. ಇವತ್ತು ಬೆಂಗಳೂರುನಗರದಲ್ಲಿ ಬಳಕೆದಾರರಿಗೆ ಈ ವಿತರಣಾದಾರರು ಏನು ಕೊಡುತ್ತಾರೆ ೫ ಕೆ.ಜಿ. ಕೊಟ್ಟರೆ ಅದರಲ್ಲಿ ಅರ್ಧ ಕೆ.ಜಿ. ಕಡಿಮೆ ಇರುತ್ತದೆ. ಬೆಂಗಳೂರು ನಗರದ ನಾಗರಿಕರು ಬಹಳ ದುಃಖದಿಂದ ಹೇಳುತ್ತಾರೆ. ಇವರು ಕೊಡತಕ್ಕಂತಹ ಆಹಾರವನ್ನು ಸಮರ್ಪಕವಾಗಿ ಕೊಡುತ್ತಿಲ್ಲ. ಒಂದು ಕುಟುಂಬಕ್ಕೆ ಆಗತಕ್ಕಂತಹ ವಸ್ತುಗಳನ್ನು ಕೊಡುತ್ತಿಲ್ಲ, ಕೊಡತಕ್ಕಂತಹ ವಸ್ತುಗಳನ್ನು ಕಡಿಮೆಕೊಡುತ್ತಾರೆ. ಅವರು ಏನು ಆಹಾರ ವಸ್ತುಗಳನ್ನು ಕೊಡುತ್ತಾರೆ ಅದನ್ನು ತೆಗೆದುಕೊಳ್ಳಬೇಕಾದರೆ ಮನೆಯಲ್ಲಿ ಒಬ್ಬರು ದಿನವಿಡೀ ಆ ಅಂಗಡಿಯ ಮುಂದೆ ಕಾಯಬೇಕಾಗಿದೆ. ಈ ರೀತಿಯಾದಂತಹ ಕೆಲಸಗಳನ್ನು ಏಕೆ ಮಾಡಬೇಕು ಎಂದು ಇವತ್ತಿನ ದಿವಸ ಬೆಂಗಳೂರು ನಗರದ ಜನತೆ ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ.

ನಾವು ಅನೇಕ ಸಾರಿ ನೋಡಿದ್ದೇವೆ. ಸುಮಾರು ೨೦೦-೩೦೦ ಜನ ಕ್ಯೂನಲ್ಲಿ ನಿಂತು ಅವರು ಕೊಡತಕ್ಕ ವಸ್ತುಗಳನ್ನು ತೆಗೆದುಕೊಳ್ಳಬೇಕಾದರೆ ಸುಮಾರು ೫ ಗಂಟೆ ವೇಸ್ಟ್ ಮಾಡಬೇಕಾಗುತ್ತವೆ, ಕೆಲವು ಸಂದರ್ಭಗಳಲ್ಲಿ ಈ ರೇಷನ್ ಅಂಗಡಿಗಳಲ್ಲಿ ಕೊಡತಕ್ಕ ಅಕ್ಕಿ ಚೆನ್ನಾಗಿರುವುದಿಲ್ಲ. ಗೂಡು ಗೂಡಾಗಿರುತ್ತದೆ, ಇದರ ಜೊತೆಗೆ ಸೀಮೆಎಣ್ಣೆಯನ್ನು ವಿತರಣೆ ಮಾಡತಕ್ಕಂತಹ ಗಾಡಿಗಳವರು ೫ ಲೀಟರಿಗೆ ೪ ಲೀಟರ್ ಕೊಡುತ್ತಿದ್ದಾರೆ. ಇವನ್ನು ತನಿಖೆ ಮಾಡತಕ್ಕಂತಹ ಅಧಿಕಾರಿಗಳು ಇದ್ದಾರೆಯೋ ಇಲ್ಲವೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಇವತ್ತಿನ ದಿವಸ ನಾವು ಬಡಾವಣೆಗೆ ಹೋದಾಗ ನಾಗರೀಕರು ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ಅಳತೆಯಲ್ಲಿ ಕಡಿಮೆ ಕೊಡತಕ್ಕದ್ದನ್ನು ನೀವಾದರೂ ಕೇಳಬಾರದಾ ಎಂದು ಕೇಳುತ್ತಾರೆ, ನಮಗೆ ಕೇಳುವುದಕ್ಕೆ ಏನು ಹಕ್ಕಿದೆ, ಇದಕ್ಕಾಗಿ ತೂಕ-ಅಳತೆ ಮಾಡತಕ್ಕ ಇಲಾಖೆ ಇದೆ ಮತ್ತು ಇನ್ಸ್‌ಪೆಕ್ಟರುಗಳು ಇದ್ದಾರೆ. ಇವರುಗಳೆಲ್ಲರೂ ಏನು ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ನಾನು ಕೇಳಬೇಕಾಗಿದೆ, ಇವತ್ತು ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಬಡವರು ಇದ್ದಾರೆ. ಅವರಿಗೆ ಈ ಪದಾರ್ಥಗಳು ಸಬ್ಸಿಡಿ ದರದಲ್ಲಿ ತಲುಪಲಿ ಎನ್ನುವ ದೃಷ್ಟಿಯಿಂದ ಸರ್ಕಾರ ಈ ವ್ಯವಸ್ಥೆಯನ್ನು ಮಾಡಿದರೆ, ಈ ಸಿಬ್ಬಂದಿಯವರು ಈ ರೀತಿಯಾಗಿ ಅನಾವಶ್ಯಕವಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರತಕ್ಕ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಈ ಸಭೆಗಳಲ್ಲಿ ನಾವು ಮಾತನಾಡಿದರೆ ಈ ಇನ್ಸ್‌ಪೆಕ್ಟರುಗಳ ಮಾಮೂಲು ಇನ್ನೂ ಜಾಸ್ತಿಯಾಗಿ ಬಿಡುತ್ತದೆ. ಮಾಮೂಲಿಯನ್ನು ನೋಡದೆ ಜನಗಳ ಹಿತದೃಷ್ಟಿಯಿಂದ ಈ ಇನ್ಸ್‌ಪೆಕ್ಟರ್‌ಗಳು ಮತ್ತು ತೂಕ ಅಳತೆಯ ಇಲಾಖೆಯ ಇನ್ಸ್‌ಪೆಕ್ಟರುಗಳು ಇದರ ಬಗ್ಗೆ ಗಮನಹರಿಸಬೇಕು. ಇಲ್ಲದೇ ಹೋದರೆ ತಾವು ಈ ಕಂಟ್ರೋಲನ್ನು ತೆಗೆದರೆ ಬಹಳ ಉತ್ತಮ ಎಂದು ಕಾಣುತ್ತದೆ, ಈ ಕಂಟ್ರೋಲ್‌ನಿಂದ ನಾವು ನಾಗರೀಕ ಪೂರೈಕೆಯಿಂದ ಏನು ವಸ್ತುಗಳನ್ನು ಕೊಡುತ್ತೇವೆ, ಅದು ಆ ಕುಟುಂಬಕ್ಕೆ ಪೂರ್ಣ ೩೦ ದಿವಸಗಳಿಗೆ ಸಾಕಾಗುವುದಿಲ್ಲ. ಆದುದರಿಂದ ಅವರು ಮುಕ್ತ. ಬಹಿರಂಗ ಮಾರುಕಟ್ಟೆಗೆ ಹೋಗಬೇಕು ಮತ್ತು ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳಬೇಕಾಗಿದೆ ಈ ದಿಸೆಯಲ್ಲಿ ಈ ಕಂಟ್ರೋಲ್‌ನ್ನು ತೆಗೆದು ಇಂತಹ ಪದಾರ್ಥವನ್ನು ಈ ರೇಟಿಗೆ ಕೊಡಬೇಕೆಂದು ಸಮರ್ಪಕವಾದ ರೇಟನ್ನು ಫಿಕ್ಸ್ ಮಾಡಿ ವಿತರಣೆ ಮಾಡಿದ್ದಲ್ಲಿ ಬೆಂಗಳೂರು ನಗರದ ಜನತೆಗೆ ಇದರಿಂದ ಅರ್ಧ ಸಮಾಧಾನವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ಕಡೆ ಸರಿಯಾಗಿ ಸಾಮಾನುಗಳು ಸಿಗುತ್ತಿಲ್ಲ. ವ್ಯವಸ್ಥಿತವಾಗಿ ಕೊಡುವುದಿಲ್ಲ ಮತ್ತು ಸರಿಯಾದ ಅಳತೆಯಲ್ಲಿ ಸಾಮಾನುಗಳನ್ನು ಕೊಡುವುದಿಲ್ಲ, ಇದರಿಂದ ಬೆಂಗಳೂರ ನಗರದ ಜನತೆಗೆ ಬಹಳ ಬೇಜಾರು ಆಗಿದೆ. ೧೯೫೫ರಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಕಂಟ್ರೋಲ್ ಅನ್ನು ತೆಗೆದು ಹಾಕಿದರು. ಕಂಟ್ರೋಲನ್ನು ತೆಗೆದ ತಕ್ಷಣವೇ ವಸ್ತುಗಳ ಬೆಲೆ ಕಡಿಮೆಯಾಯಿತು. ಇವತ್ತಿನ ದಿವಸ ವಸ್ತುಗಳ ಉತ್ಪಾದನೆ ಜಾಸ್ತಿಯಾಗಿದೆ. ಬಳಕೆದಾರರು ಇದ್ದರೂ ಕಂಟ್ರೋಲ್ ಅಂತ ಹೇಳಿದರೆ ವ್ಯಾಪಾರಸ್ಥರಿಗೆ ಹಣ ಮಾಡುವಂತಹ ಆಸೆ, ಬಳಕೆದಾರರಿಗೆ ವಸ್ತುಗಳು ಸಿಗಲಿಲ್ಲ ಅಂತ ದು:ಖ ಈ ರೀತಿಯ ಭಾವನೆ ಬರುತ್ತದೆ. ತಾವು ಬಳಕೆದಾರರ ಹಿತದೃಷ್ಟಿಯಿಂದ ಈ ಕಂಟ್ರೋಲ್ ತೆಗೆದರೂ ಚಿಂತೆಯಿಲ್ಲ, ಆಹಾರ ಪದಾರ್ಥಗಳನ್ನು ಸಮರ್ಪಕವಾಗಿ ವಿತರಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ,

ಇನ್ನು ಬಡವರು ಹೋಟೆಲ್‌ಗಳಲ್ಲಿ ಊಟ, ತಿಂಡಿ ಮಾಡುತ್ತಾರೆ. ಹೋಟೆಲ್‌ಗಳಲ್ಲಿ ಊಟ ತಿಂಡಿಗಳ ಬೆಲೆಗಳನ್ನು ಸಿಕ್ಕಾಪಟ್ಟೆ ಏರಿಸಿದ್ದಾರೆ. ಇದರಿಂದ ಕೂಲಿ ಮಾಡುವ ಜನರಿಗೆ ಬಹಳ ಕಷ್ಟವಾಗಿದೆ. ಬೆಂಗಳೂರು ನಗರದಲ್ಲಿ ಬಹುತೇಕ ಬಡಬಗ್ಗರು ಕೂಲಿಗಾರರು ಹೋಟೆಲುಗಳನ್ನು ಅವಲಂಬಿಸಿದ್ದಾರೆ, ಈ ದಿಸೆಯಲ್ಲಿ ಹೋಟೆಲ್‌ಗಳಲ್ಲಿನ ತಿಂಡಿ ಬೆಲೆಗಳನ್ನು ಇಳಿಸತಕ್ಕ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು.

ಹಾಗೆಯೇ ಪಾಮೋಲಿನ್ ಎಣ್ಣೆಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆ ಮಾಡುತ್ತಿದ್ದಾರೆ. ಅದು ಜನರಿಗೆ ಸರಿಯಾಗಿ ಸಿಗುತ್ತಿಲ್ಲ, ಅದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಆರೋಗ್ಯ ಇಲಾಖೆಯವರು ಹೆಚ್ಚಿನ ರೀತಿಯಲ್ಲಿ ಜನತೆಯ ಹಿತದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ,

ಒಬ್ಬ ಮಾನ್ಯ ಸದಸ್ಯರು.—ಅಜೀಜ್ ಸೇಠ್ ಅಂದರೆ ಅನ್ನದಾತ...

SRI AZEEZ SAIT.—My name is Azeez Sait. "Azeez" means a very dear friend. That is why nobody is troubling me. Thank you very much.

೩–೫೦ ಪಿ. ಎಂ.

ಶ್ರೀ ಕೆ. ಲಕ್ಕಣ್ಣ.—ಇವತ್ತು ಬೆಂಗಳೂರು ನಗರದ ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಬಸ್ಸೂ ಕೂಡ ಇಂತಿಷ್ಟು ಟ್ರಿಪ್‌ಗಳನ್ನು ಮಾಡಬೇಕೆಂದು ನಿಗದಿ ಮಾಡಿದೆ. ಆದರೆ ಅಷ್ಟು ಟ್ರಿಪ್‌ಗಳನ್ನು ಅವರು ಪೂರೈಸುವುದಿಲ್ಲ. ಮಧ್ಯಾಹ್ನ ೧ ಗಂಟೆಯಿಂದ ೩ ಗಂಟೆಯವರೆಗೂ ಬಸ್‌ಗಳನ್ನು ನಿಲ್ಲಿಸಿರುತ್ತಾರೆ. ಆಗ ನಾಗರೀಕರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಬೇಕಾದರೆ ಸುಮಾರು ೨ ಗಂಟೆ ಕಾಲ ಕಾಯಬೇಕಾಗಿರುತ್ತವೆ. ನಾನು ತಮಗೆ ಹೇಳುತ್ತೇನೆ. ಈ ೨ ಗಂಟೆಕಾಲ ಬಸ್ಸುಗಳನ್ನು ಓಡಿಸದೇ ನಿಲ್ಲಿಸುವುದರಿಂದ ನಮ್ಮ ಕೆ.ಎಸ್.ಆರ್.ಟಿ.ಸಿ.ಯವರಿಗೇ ನಷ್ಟ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು.

ಇನ್ನು ನಿಗದಿಪಡಿಸಿದಂಥ ಟ್ರಿಪ್‌ಗಳನ್ನು ಇವರು ಮಾಡದಿದ್ದರೂ ಕೂಡ ಚೆಕಿಂಗ್ ಇನ್ಸ್‌ಪೆಕ್ಟರ್‌ಗಳು ಟ್ರಿಪ್ ಮುಗಿಸಿದ್ದಾರೆ ಎಂದು ಬರೆಯುತ್ತಾರೆ. ಇದನ್ನು ತಾವು ಗಮನಿಸಿ ಅದು ಸುಳ್ಳು ಎಂದು ತಿಳಿದುಬಂದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಕಂಡಕ್ಟರ್‌ಗಳಿಂದ ಏನು ಹಣ ಸಂಸ್ಥೆಗೆ ಬರಬೇಕಾದ್ದು ಸೋರಿ ಹೋಗುತ್ತಿದೆ ಅದು ಸುಮಾರು ೩೦ ಪರ್ಸೆಂಟ್ ಇದೆ. ಈ ಸೋರುವಿಕೆಯನ್ನು ಯಾವ ರೀತಿ ತಡೆಗಟ್ಟಬೇಕೆಂಬುದು ತಾವು ಯೋಚಿಸಬೇಕು. ಇದರಲ್ಲಿ ನನ್ನ ಒಂದು ಸಲಹೆ ಎಂದರೆ, ಭತ್ಯ, ಸಂಬಳ ಎಂದು ಏನು ಅವರಿಗೆ ಕೊಡುತ್ತೀರಿ ಅದರ ಜೊತೆಗೆ ಪ್ರೋತ್ಸಾಹ ಧನ ಎಂದು ಕೊಟ್ಟರೆ ಅವನಲ್ಲಿ ಏನು ಹಣ ಕೊನೆಯಲ್ಲಿ ಉಳಿಯುತ್ತದೆ, ಅದು ಸಂಸ್ಥೆಗೆ ಬರುತ್ತದೆ. ಕಂಡಕ್ಟರ್ಸ್ ಪ್ರಯಾಣಿಕರಿಗೆ ಟಿಕೆಟ್ ಕೊಡಬೇಕು. ಪ್ರಯಾಣಿಕರು ಟಿಕೆಟ್ ಕೊಂಡು ಪ್ರಯಾಣ ಮಾಡುವುದರಿಂದ ಸಾರಿಗೆ ಸಂಸ್ಥೆಗೆ ಹೆಚ್ಚಿನ ಆದಾಯ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತಾವು ಈ ಯೋಜನೆಯನ್ನು ಪ್ರಾರಂಭ ಮಾಡಬೇಕು. ಇದರಿಂದಾಗಿ ಸೋರಿಹೋಗತಕ್ಕ ಹಣದಲ್ಲಿ ಸುಮಾರು ಮುಕ್ಕಾಲು ಭಾಗ ಸಂಸ್ಥೆಗೆ ಉಳಿಯುತ್ತದೆ. ಬಹುಶಃ ಅವರಿಗೆ ಪ್ರೋತ್ಸಾಹಧನ ಕೊಟ್ಟರೆ ಕಾಲುಭಾಗ ಕೊಟ್ಟಂತಾಗುತ್ತದೆ.

ಇನ್ನೊಂದು ವಿಚಾರ ಎಂದರೆ, ಮಳೆಗಾಲದಲ್ಲಿ ಬೆಂಗಳೂರು ನಗದಲ್ಲಿ ಬಿ.ಟಿ.ಎಸ್.ಗೋಸ್ಕರ ನಿಲ್ಲತಕ್ಕ ಪ್ರಯಾಣಿಕರಿಗೆ ಬಸ್ ಸ್ಟಾಪ್‌ಗಳಲ್ಲಿ ಷೆಲ್ಟರ್ ವ್ಯವಸ್ಥೆ ಮಾಡಿಕೊಡಬೇಕು. ನಗರದಲ್ಲಿ ಕೆಲವು ಕಡೆಗಳಲ್ಲಿ ಲಯನ್ಸ್ ಕ್ಲಬ್‌ನವರು, ರೋಟರಿ ಕ್ಲಬ್‌ನವರು, ಮುಂತಾದವರು ಷೆಲ್ಟರ್ ವ್ಯವಸ್ಥೆ ಮಾಡಿಸಿಕೊಟ್ಟಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಬಸ್ ಸ್ಟಾಪ್‌ಗಳಲ್ಲಿ ಷೆಲ್ಟರ್‌ಗಳನ್ನು ಕಟ್ಟಿಸುವ ಕ್ರಮ ಕೈಗೊಳ್ಳಬೇಕು. ಚೆಕಿಂಗ್ ಇನ್ಸ್‌ಪೆಕ್ಟರ್‌ಗಳೂ ಕೂಡ ವ್ಯವಸ್ಥಿತವಾಗಿ ಬಸ್ಸುಗಳನ್ನು ಚೆಕ್ ಮಾಡುತ್ತಿಲ್ಲ. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನಿಸಬೇಕು.

ಇನ್ನು ನಿಮ್ಮ ಇಲಾಖೆಯನ್ನು ಉತ್ತಮ ರೀತಿಯಿಂದ ನಿರ್ವಹಿಸಿಕೊಂಡು ಹೋಗಬೇಕಾದರೆ ದಕ್ಷ ಆಡಳಿತಾಧಿಕಾರಿಗಳನ್ನು ನೇಮಿಸಿಕೊಳ್ಳಬೇಕು. ಏಕೆಂದರೆ ನನಗೆ ಬಂದಿರುವ ಮಾಹಿತಿಯ ಪ್ರಕಾರ ಎನ್. ಜಿ. ಇ. ಎಫ್.ನವರು ನಿಮ್ಮ ಸಂಸ್ಥೆಯಿಂದ ಕಾಂಟ್ರ್ಯಾಕ್ಟ್ ಬೇಸಿಸ್‌ಮೇಲೆ ಬಸ್ಸುಗಳನ್ನು ತೆಗೆದುಕೊಂಡು ಓಡಿಸುತ್ತಿದ್ದಾರೆ. ಮೊದಲು ೧ ಕಿಲೋಮೀಟರ್‌ಗೆ ೩.೫೦ ರೂಪಾಯಿ ಪ್ರಕಾರ ತೆಗೆದುಕೊಳ್ಳುತ್ತಿದ್ದರು. ಅದನ್ನು ರಿವೈಸ್ ಮಾಡಿ ೧ ಕಿಲೋಮೀಟರ್‌ಗೆ ೭ ರೂಪಾಯಿನಂತೆ ಕಾಂಟ್ರ್ಯಾಕ್ಟ್‌ಮೇಲೆ ತೆಗೆದುಕೊಳ್ಳುತ್ತಿದ್ದಾರೆ. ಆದರೆ ನಿಮ್ಮ ಸಂಸ್ಥೆಗೆ ಮೊದಲು ಕೊಡುತ್ತಿದ್ದರಂತೆ ೩.೫೦ ರೂಪಾಯಿನಂತೆಯೇ ಲೆಕ್ಕವನ್ನು ಕೊಡುತ್ತಿದ್ದಾರೆಂದು ತಿಳಿದುಬಂದಿದೆ. ಮಾನ್ಯ ಮುತ್ತಣ್ಣನವರು ಅಲ್ಲಿ ಎಂ.ಡಿ. ಆಗಿದ್ದವರು ವಾಪಸು ಇಲ್ಲಿಗೆ ಬಂದಮೇಲೆ ಈ ರೀತಿ ಆಗುತ್ತಿರುವುದಕ್ಕೆ ಕಾರಣ ಏನೆಂದು ಅದಕ್ಕೆ ಸಂಬಂಧಪಟ್ಟ ಫೈಲನ್ನು ತರಿಸಿ ನೋಡಿದಾಗ ಇದು ಬೆಳಕಿಗೆ ಬಂದಿದೆ, ೩–೦೫ ರೂಪಾಯಿನಂತೆ ಒಂದು ಚೆಕ್ಕು, ಇನ್ನೊಂದು ೩–೫೦ ರೂಪಾಯಿನಂತೆ ಈ ರೀತಿ ಎರಡೆರಡು ಚೆಕ್ಕುಗಳನ್ನು ಕಳುಹಿಸಿಕೊಡುತ್ತಿದ್ದಾರೆ. ಅಂದರೆ ಒಂದು ಚೆಕ್ಕಿನ ದುಡ್ಡು ಯಾರಿಗೆ ಹೋಗುತ್ತಿದೆ ಎಂಬುದನ್ನು ತಾವು ತೀವ್ರವಾಗಿ ಪರಿಶೀಲಿಸಿ ಯಾರು ದುರ್ವ್ಯವಹಾರ ಮಾಡುತ್ತಿದ್ದಾರೆ ಅವರ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು. ಒಂದುವೇಳೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ನಿಮ್ಮ ಕಾನೂನಿನಲ್ಲಿ ಅವಕಾಶವಿಲ್ಲದಿದ್ದರೆ ಆಕ್ಟನ್ನು ಬದಲಾವಣೆ ಮಾಡಿದರೂ ಚಿಂತೆಯಿಲ್ಲ. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ಸಂಸ್ಥೆಯಾಗಿರುವುದರಿಂದ ಸಾರ್ವಜನಿಕರ ಹಣ ಪೋಲಾಗದಂತೆ ನೋಡಿಕೊಳ್ಳಬೇಕಾದ್ದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ. ಈ ಸಂಸ್ಥೆಯಲ್ಲಿ ದಿನೇ ದಿನೇ ಬಹಳಷ್ಟು ನಷ್ಟವಾಗುತ್ತಿದೆ. ಈ ನಷ್ಟವನ್ನು ಯಾವರೀತಿ ಸರಿದೂಗಿಸಬೇಕೆಂಬುದನ್ನು ಯೋಚನೆ ಮಾಡಬೇಕು. ಇಷ್ಟೇ ವಾಹನಗಳನ್ನು ಖಾಸಗೀಯವರು ಓಡಿಸಿದ್ದಿದ್ದರೆ ಕೋಟ್ಯಾಂತರ

ರೂಪಾಯಿಗಳ ಲಾಭವನ್ನು ಪಡೆದುಕೊಳ್ಳುತ್ತಿದ್ದರು. ಸರ್ಕಾರದವರೇ ಇದನ್ನು ನಡೆಸುತ್ತಿರುವುದರಿಂದ ವರ್ಷೇ ವರ್ಷೇ ಇಷ್ಟೊಂದು ನಷ್ಟವಾಗುತ್ತಿದೆ. ಆದ್ದರಿಂದ ಸಂಸ್ಥೆಯ ಹಿತಕ್ಕೆ ಧಕ್ಕೆ ತರುವಂಥ ಕಾನೂನು ಏನಾದರೂ ಇದ್ದರೆ ಅದನ್ನು ಬದಲಾವಣೆ ಮಾಡಿಯಾದರೂ ಈ ನಷ್ಟವನ್ನು ಹೋಗಲಾಡಿಸುವ ಕಡೆಗೆ ಮಾನ್ಯ ಸಚಿವರು ತೀವ್ರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಳ್ಳಿಗಾಡಿನಲ್ಲಿ ಓಡಾಡುವ ಸಾರಿಗೆ ಸಂಸ್ಥೆಯ ಬಸ್ಸುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಬಸ್ಸುಗಳನ್ನು ಯಾವ ನಿರ್ದಿಷ್ಟ ಸ್ಥಳದಲ್ಲಿ ನಿಲ್ಲಿಸಬೇಕೋ ಅಲ್ಲಿ ನಿಲ್ಲಿಸದೆ ಅವರ ಮನಸ್ಸಿಗೆ ಬಂದ ಕಡೆಗಳಲ್ಲಿ ನಿಮ್ಮ ಡ್ರೈವರ್ ಮತ್ತು ಕಂಡಕ್ಟರ್‌ಗಳು ನಿಲ್ಲಿಸುತ್ತಾರೆ. ಇದರಿಂದ ಹಳ್ಳಿಗಾಡಿನಿಂದ ರೈತರು, ಅಥವಾ ಪ್ರಯಾಣಿಕರು ತರಬಹುದಾದ ವಸ್ತುಗಳನ್ನು ಬಸ್ಸಿನ ಮೇಲೆ ಹಾಕುವುದಕ್ಕೆ ಅಥವಾ ಬಸ್ಸಿನ ಮೇಲಿನಿಂದ ಇಳಿಸುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಕಾರಣ, ಇವರು ನಿಲ್ಲಿಸಬಹುದಾದ ಸ್ಥಳಗಳಲ್ಲಿ ಕೂಲಿಗಳು ಯಾರೂ ಸಿಕ್ಕುವುದಿಲ್ಲ. ಆದ್ದರಿಂದ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ನಿಲ್ಲಿಸಲು ಯಾವ ಸ್ಥಳವನ್ನು ನಿಗದಿಮಾಡಲಾಗಿದೆ ಅಲ್ಲಿಯೇ ನಿಲ್ಲಿಸುವಂತೆ, ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವಂತೆ ಸಾರಿಗೆ ಸಂಸ್ಥೆಯ ಎಲ್ಲ ಡ್ರೈವರ್ ಮತ್ತು ಕಂಡಕ್ಟರ್‌ಗಳಿಗೆ ಕಟ್ಟುನಿಟ್ಟಿನ ಆದೇಶವನ್ನು ಕಳುಹಿಸಿಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಈ ಬೆಂಗಳೂರು ನಗರದಲ್ಲಿ ಆರ್.ಟಿ.ಓ. ಕಛೇರಿಗಳು ಏನಿವೆ ಅವುಗಳಿಗೆ ಸ್ವಂತ ಕಟ್ಟಡ ಇಲ್ಲ. ಅಲ್ಲದೆ ಇವರು ವೆಹಿಕಲ್‌ಸ್ನನ್ನು ಟೆಸ್ಟ್ ಮಾಡಲು ಸಾಕಷ್ಟು ವಿಶಾಲವಾದ ಸ್ಥಳ ಇಲ್ಲದ ಕಾರಣ ರಸ್ತೆಗಳಲ್ಲಿಯೇ ಟೆಸ್ಟ್ ಮಾಡುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರಿಗೆ ಬಹಳ ತೊಂದರೆ ಆಗುತ್ತದೆ. ಇದಕ್ಕೆ ಕಾರಣ ಎಂದರೆ, ಬೆಂಗಳೂರು ನಗರದಲ್ಲಿ ಅದರಲ್ಲೂ ಈ ಆರ್.ಟಿ.ಓ. ಕಛೇರಿಗಳು ಇರತಕ್ಕ ಕಡೆಗಳಲ್ಲಿ ಅಗಲವಾದ ರಸ್ತೆಗಳು ಅಥವಾ ವಿಶಾಲವಾದ ಸ್ಥಳಗಳು ಇಲ್ಲದಿರುವುದು. ಆದ್ದರಿಂದ ಬೆಂಗಳೂರಿನ ಹೊರ ವಲಯದಲ್ಲಿ ೨೦–೩೦ ಎಕರೆ ಪ್ರದೇಶವನ್ನು ತಾವು ತೆಗೆದುಕೊಂಡು ಆರ್.ಟಿ.ಓ. ಆಫೀಸುಗಳ ಕಟ್ಟಡಗಳನ್ನು ಕಟ್ಟಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ವರ್ಕಿಂಗ್ ಕ್ಯಾಪಿಟಲ್‌ಗೋಸ್ಕರ ನಬಾರ್ಡ್‌ನಿಂದ ಹಣವನ್ನು ಅಪೆಕ್ಸ್ ಬ್ಯಾಂಕಿಗೆ ಕೊಡುತ್ತಾರೆ. ಈ ಹಣ ಅಪೆಕ್ಸ್ ಬ್ಯಾಂಕ್‌ನಿಂದ ಡಿ.ಸಿಸಿ. ಬ್ಯಾಂಕ್‌ಗೆ ಬರಬೇಕಾದರೆ ಸಾಲದ ವಸೂಲಾತಿ ಸರಿಯಾಗಿ ಆಗಿಲ್ಲವೆಂದು ಅವರಿಗೆ ಹಣವನ್ನೇ ರಿಲೀಸ್ ಮಾಡುತ್ತಿಲ್ಲ. ಇವತ್ತು ಸಣ್ಣಸಣ್ಣ ಕೈಗಾರಿಕೆಗಳು ಬಹಳ ಕಷ್ಟವನ್ನು ಅನುಭವಿಸುತ್ತಿವೆ, ಆದ್ದರಿಂದ ಈ ದಿಸೆಯಲ್ಲಿ ನಬಾರ್ಡ್‌ನಿಂದ ಬರುವಂಥ ಹಣವನ್ನು ನೇರವಾಗಿ ಡಿ.ಸಿ.ಸಿ. ಬ್ಯಾಂಕ್‌ಗಳಿಗೇ ಕೊಟ್ಟು ಅದರ ಮೂಲಕ ಹಣವನ್ನು ಸಮರ್ಪಕವಾಗಿ ಹಂಚಿಸುವ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಂಡು ಈ ಸಂದರ್ಭದಲ್ಲಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).—ಮಾನ್ಯ ಉಪಾಧ್ಯಕ್ಷಿಣಿಯವರೆ, ಆಹಾರ, ಸಾರಿಗೆ, ಸಹಕಾರ ಇಲಾಖಾ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನಾಡಬಯಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ತಾವು ಏನು ಸಹಕಾರ ಕ್ಷೇತ್ರದ ಬಗ್ಗೆ ಮಾತನಾಡುತ್ತೀರಿ?

ಶ್ರೀ ಬಿ. ಎಸ್. ಕೌಜಲಗಿ.—ಅವರು ಸಹಕಾರ ಕ್ಷೇತ್ರದಲ್ಲಿ ಪ್ರವೀಣರು. ನೀವು ಯಾವುದರಲ್ಲಿ ಪ್ರವೀಣರಿದ್ದೀರಿ ?

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಇವತ್ತು ದೇಶದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಕೃಷಿ ಅಭಿವೃದ್ಧಿಯಾಗಬೇಕಾದರೆ ಸಹಕಾರಿ ರಂಗ ಮುಂದುವರಿಯಬೇಕು ಮತ್ತು ಮಹತ್ವಪೂರ್ಣವಾಗಬೇಕು. ಸಹಕಾರಿ ರಂಗ ಯಾವ ಪದ್ಧತಿಯಲ್ಲಿರಬೇಕು ಮತ್ತು ಹೇಗೆ ಇರಬೇಕು ಎಂಬುದು ಮುಖ್ಯ. ನನಗೆ ಒಂದು ಸಮಾಧಾನವಾಗುತ್ತದೆ, ಈ ಮನೆಯಲ್ಲಿ ಸಹಕಾರಿಗಳನ್ನು ಯಾರು ಬೈದಿಲ್ಲ. ಹಿಂದೆ ಸಹಕಾರಿಗಳು ಎಂದರೆ ದ್ರೋಹಿಗಳು, ಪುಂಡರು ಎಂದು ಹೇಳಿದಂಥ ಶಬ್ದಗಳನ್ನು ಕೇಳಿದ್ದೇನೆ. ಸಹಕಾರಿ ರಂಗದ ಬಗ್ಗೆ ಮಾನ್ಯ ಕೆ. ಹೆಚ್. ಪಾಟೀಲರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಮೊದಲು ಸಹಕಾರ ಅಂದರೆ ಏನು ಎಂದು ತಿಳಿದುಕೊಳ್ಳಬೇಕು. ಈ ದೇಶ ಬಹಳ ದೊಡ್ಡ ದೇಶ. ಈ ದೇಶದಲ್ಲಿ ಸಹಕಾರಿ ರಂಗ ಮುಂದೆ ಬಂದರೆ ಮಾತ್ರ ಸಹಕಾರ ಚಳುವಳಿ ಚೆನ್ನಾಗಿ ಆದರೆ ಮಾತ್ರ ಈ ದೇಶದ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ ಮತ್ತು ಗ್ರಾಮೀಣ

ಅಭಿವೃದ್ಧಿಯಾಗುವುದಕ್ಕೆ ಸಾಧ್ಯ. ಅದಕ್ಕಾಗಿ ಇದರಲ್ಲಿ ರಾಜಕೀಯ ಇರಕೂಡದು. ಪಕ್ಷದಲ್ಲಿ ಏನೇ ಇರಲಿ, ಸಹಕಾರಿ ರಂಗದಲ್ಲಿ ಮಾತ್ರ ಯಾವ ರಾಜಕೀಯವೂ ಇರಕೂಡದು. ಸಹಕಾರ ಹೇಗೆ ಎಂದರೆ, ಒಂದು ಮಂದಿರ ಇದ್ದ ಹಾಗೆ. ಮಂದಿರದಲ್ಲಿ ಹೋಗುವಾಗ ಯಾವ ಪ್ರಕಾರ ಪಾದರಕ್ಷೆಯನ್ನು ಹೊರಗಿಟ್ಟು ಹೋಗುತ್ತೇವೆಯೋ ಅದೇ ಪ್ರಕಾರ ಸಹಕಾರ ರಂಗದಲ್ಲಿ ರಾಜಕೀಯವನ್ನು ಹೊರಗಿಟ್ಟು ಒಳಗೆ ಪ್ರವೇಶವಾದ್ದರೆ ನಿಜವಾಗಿಯೂ ಸಹಕಾರ ಮುಂದೆ ಬರುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ದೇವಸ್ಥಾನಕ್ಕೆ ಹೋಗಬೇಕಾದರೆ ಚಪ್ಪಲಿ ಹೊರಗೆ ಬಿಟ್ಟು ಹೋಗಬೇಕು ಅಂದರೆ ರಾಜಕೀಯವನ್ನು ಚಪ್ಪಲಿಗೆ ಹೋಲಿಸಿದಿರೇ ಹೇಗೆ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ತಾವು ತಪ್ಪು ತಿಳಿದುಕೊಂಡಿದ್ದೀರಿ. ನಾನು ಹೇಳುವುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಿ. ಅದು ಪವಿತ್ರವಾದ ಮನೆ ಇದ್ದಹಾಗೆ. ಅದನ್ನು ಒಳ್ಳೆಯ ರೀತಿಯಲ್ಲಿ ನಾವು ಉಪಯೋಗಿಸಿದರೆ ನಿಜವಾಗಿಯೂ ಒಳ್ಳೆಯದಾಗುತ್ತದೆ. ಇದರಲ್ಲಿ ನಾನು ಹೇಳತಕ್ಕ ಉದ್ದೇಶವೇನೆಂದರೆ ಸಹಕಾರ ಸಂಘಗಳು ಸರ್ಕಾರಿ ಸಂಘಗಳಾಗಿ ಆಗಬಾರದು. ನಿಜವಾಗಿ ಸಹಕಾರ ಸಂಘಗಳಲ್ಲಿ ಸರ್ಕಾರ ಮಧ್ಯಸ್ಥಿಕೆ ವಹಿಸಬಾರದು. ಸೆಕ್ಷನ್ ೩೦ ಬಿ. ಏನಿದೆ ಇದನ್ನು ಯಾವುದಕ್ಕೆ ಉಪಯೋಗ ಮಾಡಬೇಕೆಂದು ತಂದರೋ ಏನೋ ? ಹಣ ದುರುಪಯೋಗವಾದಾಗ, ಸಾಮಾಜಿಕ, ಆರ್ಥಿಕ ಲುಕ್ಸಾನು ಬಂದ ಸಂದರ್ಭದಲ್ಲಿ ಉಪಯೋಗಿಸಬೇಕು. ಹೊರಗಡೆ ಹೋಗಬೇಕಾದರೆ ಸೆಕ್ಷನ್ ೩೦ ಬಿ, ಒಳಗಡೆ ಬರಬೇಕಾದರೆ ಸೆಕ್ಷನ್ ೩೦ ಬಿ, ಹೀಗಾಗಿ ಹೊರಗೆ ಹೋಗುವ ಹಾಗೆ ಇಲ್ಲ, ಒಳಗೆ ಬರುವ ಹಾಗೆ ಇಲ್ಲ. ನಿಜವಾಗಿ ಸಹಕಾರ ಸಂಸ್ಥೆಗಳು ಉಳಿಯಬೇಕಾದರೆ ಸೆಕ್ಷನ್ ೩೦ ಬಿ ಇರಕೂಡದು. ಅದಕ್ಕಾಗಿ ಸೆಕ್ಷನ್ ೩೦ ಬಿ ಯನ್ನು ತೆಗೆಯಬೇಕೆಂದು ನಮ್ಮ ಸರ್ಕಾರ ಇದ್ದಾಗಲೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಆದ್ದರಿಂದ ಕಾನೂನಿನಲ್ಲಿರುವ ಸೆಕ್ಷನ್ ೩೦ ಬಿ. ಯನ್ನು ತೆಗೆಸಿ ಸಹಕಾರಿಗಳು ಮುಕ್ತವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಡಬಾರದೆಂದು ಹೇಳತಕ್ಕವನು ನಾನಲ್ಲ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಖಡಾಖಂಡಿತವಾಗಿ ಶಿಕ್ಷೆ ಕೊಡಿ. ಎಲ್ಲಿ ಸಂಸ್ಥೆಗಳು ಸರಿಯಾಗಿ ನಡೆದಿವೆ, ಅಲ್ಲಿ ಮಧ್ಯಸ್ಥಿಕೆ ವಹಿಸಿ ತೊಂದರೆ ಕೊಡುವ ಕೆಲಸವನ್ನು ಸರ್ಕಾರ ಮಾಡಬಾರದೆಂದು ಹೇಳುತ್ತೇನೆ.

ಈ ಒಂದು ಸಹಕಾರ ಕ್ಷೇತ್ರದಲ್ಲಿ ಗ್ರಾಮಾಂತರ ಸಹಕಾರ ಸಂಘಕ್ಕೂ ತಾಲ್ಲೂಕು ಮಟ್ಟದ ಮಾರ್ಕೆಟಿಂಗ್ ಸಹಕಾರ ಸಂಘಕ್ಕೂ ಮತ್ತು ಗ್ರಾಹಕರ ಸಹಕಾರ ಸಂಘಕ್ಕೂ ಪರಸ್ಪರ ಹೊಂದಾಣಿಕೆ ಇರಬೇಕು. ಕಾರಣ, ಸಾಲ ಕೊಡುವ ವ್ಯವಸ್ಥೆಯನ್ನು ಪತ್ತಿನ ಸಹಕಾರ ಸಂಘಗಳು ಮಾಡುತ್ತವೆ. ಮಾರ್ಕೆಟಿಂಗ್ ಸೊಸೈಟಿಗಳು ಮಾರ್ಕೆಟಿಂಗ್ ವ್ಯವಸ್ಥೆಯನ್ನು ಮಾಡುತ್ತವೆ. ಗ್ರಾಹಕರ ಸಂಘ ಒಳ್ಳೆಯ ರೀತಿಯಲ್ಲಿದ್ದರೆ ರೈತರಿಗೆ ಒಳ್ಳೆಯ ಬೆಲೆ ಸಿಗುವ ಹಾಗೆ ವ್ಯವಸ್ಥೆ ಮಾಡುತ್ತಾರೆ. ಈ ಮೂರಕ್ಕೂ ಪರಸ್ಪರ ಹೊಂದಾಣಿಕೆ ಇಲ್ಲದಿದ್ದರೆ ಸಹಕಾರ ರಂಗ ಮುಂದುವರಿಯುವುದಕ್ಕೆ ಕಷ್ಟವಾಗುತ್ತದೆ. ಕೆಲವು ಕಡೆ ಕಚ್ಚಾ ನೂಲೂ ಖರೀದಿ ಮಾಡುತ್ತಾರೆ, ಹತ್ತಿ ಖರೀದಿ ಮಾಡುತ್ತಾರೆ. ಪ್ರತಿಯೊಂದು ಬೆಳೆಯೂ ಚೆನ್ನಾಗಿ ಆಗಿ ಬೆಲೆಯೂ ಸರಿಯಾಗಿ ಸಿಗಬೇಕಾದರೆ ಈ ಮೂರು ಸಂಘಗಳಿಗೆ ಪರಸ್ಪರ ಹೊಂದಾಣಿಕೆ ಇರಬೇಕು. ಇನ್ನೊಂದು ನನ್ನ ಸಲಹೆ ಏನೆಂದರೆ, ಸಾಲ ಕೊಡುವಲ್ಲಿ ಸಿಂಗಲ್ ವಿಂಡೋ ಸಿಸ್ಟಂ ಮಾಡಬೇಕು ಎಂಬುದು. ಆಂಧ್ರ ಪ್ರದೇಶದಲ್ಲಿ ಅದನ್ನು ಮಾಡಿದ್ದಾರೆ. ನಾವು ಇವತ್ತು ರೈತರಿಗೆ ಸಂಪೂರ್ಣ ಸಾಲ ಕೊಡುತ್ತಿಲ್ಲ. ಯಾವಾಗ ಒಬ್ಬ ರೈತ ೧೦-೧೫ ಎಕರೆಯಲ್ಲಿ ಕಬ್ಬು ಹಾಕುತ್ತಾನೆ ಅಷ್ಟಕ್ಕೂ ಬೇಕಾದ ಸಾಲವನ್ನು ನಾವು ಕೊಡುವುದಿಲ್ಲ. ನಾನು ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿ ಕೆಲಸ ಮಾಡಿರುವುದರಿಂದ ನನಗೆ ಗೊತ್ತಿದೆ. ಒಂದು ಎಕರೆ ಎರಡು ಎಕರೆ ಮೇಲೆ ಸಾಲ ಕೊಡುವುದಕ್ಕೆ ಸಾಧ್ಯವಿಲ್ಲ. ನಾವು ಯಾವಾಗ ರೈತನಿಗೆ ಸಂಪೂರ್ಣ ಸಾಲ ಕೊಡುವುದಿಲ್ಲ ಆಗ ಅವನು ಮತ್ತೊಂದು ಕಡೆ ಹೋಗುತ್ತಾನೆ. ಬಂಡವಾಳಶಾಹಿಗಳಿಂದ ಶೋಷಣೆ ತಪ್ಪಿಸಬೇಕೆಂದು ನಾವು ಏನು ಹೇಳುತ್ತಿದ್ದೇವೋ ಅಲ್ಲೇ ಪುನ: ಅವನು ಸಾಲಕ್ಕೆ ಹೋಗಬೇಕಾಗುತ್ತದೆ. ಅವನು ತಪ್ಪಿಸಬೇಕಾದರೆ ನಾವು ಅವರಿಗೆ ಸಂಪೂರ್ಣವಾದ ಸಾಲವನ್ನು ಕೊಡಬೇಕು. ಉದಾಹರಣೆಗೆ ಹೇಳುವುದಾದರೆ ಸೊಲ್ಲಾಪುರದಲ್ಲಿ ಒಂದು ಊರಿದೆ. ಅಲ್ಲಿ ನಾನು ನೋಡಿದ್ದೇನೆ. ಆ ಊರಿನಲ್ಲಿ ಸಂಪೂರ್ಣವಾದ ಸಾಲ ಎಂದರೆ, ಅಲ್ಲಿನ ಸಂಘಗಳು ರೈತರ ಮಾಲನ್ನು ಸಂಪೂರ್ಣವಾಗಿ ತೆಗೆದುಕೊಳ್ಳುತ್ತವೆ. ಅವರ ಮನೆಗೆ ನೆಂಟರು ಬಂದಿದ್ದರೆ, ಚಹಾಕ್ಕೆ, ಕಾಫಿಗೆ ಸಕ್ಕರೆಗೆ ಸಾಲ ಕೊಡುತ್ತಾರೆ. ಅವನ ಮಗನಿಗೆ ಸೀಟ್ ಬೇಕಾದರೆ, ಫೀಸ್ ಬೇಕಾದರೆ, ಶಾಲೆಗೆ ಹೋಗುವುದಕ್ಕೆ ಪುಸ್ತಕ ಬೇಕಾದರೆ ಎಲ್ಲದಕ್ಕೂ ಸಾಲ ಕೊಟ್ಟು ಅವರು ಬೆಳೆದಂಥ ಬೆಳೆಯನ್ನು ತೆಗೆದುಕೊಳ್ಳುತ್ತಾರೆ. ಹೀಗೆ ರೈತರಿಗೆ ಸಂಪೂರ್ಣವಾದ ಸಾಲವನ್ನು ಕೊಟ್ಟರೆ ಅವರ ಅಭಿವೃದ್ಧಿಗೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅರ್ಧ ಈ ಕಡೆ ಅರ್ಧ ಆ ಕಡೆ ಬಡ್ಡಿಗೆ ಸಾಲ ತಂದು ಸಾಲಗಾರನಾಗಿ ತೊಂದರೆ

ಗೀಡಾಗುತ್ತಾನೆ. ಇದರಿಂದ ಸಹಕಾರ ಚಳುವಳಿ ಸರಿಯಾಗಿ ಆಗದೆ ಅಥವಾ ಇದರಿಂದ ಉಪಯೋಗವಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಕಾನೂನಿನಲ್ಲಿ ಪರಿವರ್ತನೆ ತಂದು ನೀತಿಯನ್ನು ಬದಲಾಯಿಸಿ ರೈತರಿಗೆ ಸಂಪೂರ್ಣವಾದ ಸಾಲ ಕೊಡುವ ವ್ಯವಸ್ಥೆ ಆಗಬೇಕು. ಈ ವ್ಯವಸ್ಥೆ ಆಗಬೇಕಾದರೆ ಸಿಂಗಲ್ ವಿಂಡೋ ಸಿಸ್ಟಂ ಇರಬೇಕು. ರೈತರು ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ತರುತ್ತಾರೆ, ವೈಶ್ಯ ಬ್ಯಾಂಕಿನಲ್ಲಿ ಸಾಲ ತರುತ್ತಾರೆ, ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಲ ತರುತ್ತಾರೆ. ಆದ್ದರಿಂದ ಸಿಂಗಲ್ ವಿಂಡೋ ಸಿಸ್ಟಂ ಮಾಡಿ ಪಾಸ್‌ಬುಕ್ ಮುಖಾಂತರ ಸಾಲ ಕೊಡುವ ವ್ಯವಸ್ಥೆ ಮಾಡಬೇಕು. ಈಗ ರೈತ ಪ್ರತಿ ದಿವಸ ಹೋಗಿಬಂದು ತನ್ನ ಜಮೀನು ಬರೆದು ಕೊಟ್ಟು ಸಾಲ ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಇದನ್ನು ತಪ್ಪಿಸಬೇಕಾದರೆ ಪಾಸ್ ಬುಕ್ ಮುಖಾತರ ಸಾಲ ಕೊಡುವ ವ್ಯವಸ್ಥೆ ಮಾಡಬೇಕು. ಆಗ ರೈತರಿಗೆ ಅನುಕೂಲ ಆಗುತ್ತದೆ. ಇಲ್ಲದಿದ್ದರೆ ರೈತರಿಗೆ ಅನುಕೂಲ ಆಗುವ ವ್ಯವಸ್ಥೆಯಾಗುವುದಿಲ್ಲ. ಎಲ್ಲಿಯವರೆಗೆ ಈ ವ್ಯವಸ್ಥೆ ಆಗುವುದಿಲ್ಲ ಅಲ್ಲಿಯವರೆಗೆ ರೈತರಿಗೆ ಅನುಕೂಲವಾಗುವುದಿಲ್ಲ. ಕಡ್ಡಾಯವಾಗಿ ಎಲ್ಲರೂ ಸದಸ್ಯರಾಗಬೇಕು ಎಂದು ಹೇಳಬೇಕು. ಸಿಂಗಲ್ ವಿಂಡೋ ಸಿಸ್ಟಂ ಮಾಡಿ ಪಾಸ್ ಬುಕ್ ಮೂಲಕ ಸಾಲ ಕೊಡುವ ವ್ಯವಸ್ಥೆ ಮಾಡಿದರೆ ಎಲ್ಲರೂ ಕಡ್ಡಾಯವಾಗಿ ಸದಸ್ಯರಾಗುತ್ತಾರೆ. ಕೃಷಿಕರ ಸಾಲ ಮತ್ತು ಕೃಷಿ ಸಾಲ-ಎರಡರ ಬಗ್ಗೆಯೂ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಎರಡರಲ್ಲೂ ಸಂಪೂರ್ಣ ಸಾಲ ಕೊಡಬೇಕು. ನಬಾರ್ಡ್‌ನವರ ಸಾಲ ಮಾತ್ರ ನಂಬಿಕೊಂಡರೆ ಆಗುವುದಿಲ್ಲ. ಸರ್ಕಾರ ಇದಕ್ಕೆ ತಿದ್ದುಪಡಿ ಮಾಡಿ ವ್ಯವಸ್ಥೆ ಮಾಡಿದ್ದೇ ಆದರೆ ಅನುಕೂಲವಾಗುತ್ತದೆ. ಸಹಕಾರ ಸಂಘಗಳಲ್ಲಿ ಕೆಲವು ರಾಜ್ಯಮಟ್ಟದ ಸಹಕಾರ ಸಂಘಗಳಾಗಲೀ, ದೊಡ್ಡ ದೊಡ್ಡ ಸಂಘಗಳಾಗಲೀ ಅದರಲ್ಲಿ ನುರಿತಂಥ ಅಧಿಕಾರಿಗಳನ್ನು ಹಾಕಿದರೆ ಒಳ್ಳೆಯದು. ಐ.ಎ.ಎಸ್. ಅಧಿಕಾರಿಗಳನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ಹಾಕುವ ಬದಲು ಅಲ್ಲೇ ನುರಿತಂಥ ಅನುಭವಿ ಅಧಿಕಾರಿಗಳನ್ನು ಹಾಕಿ. ಒಂದು ವರ್ಷ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿ ನಂತರ ಆರು ತಿಂಗಳಲ್ಲೇ ಟ್ರಾನ್ಸ್‌ಫರ್. ಮಾಡುತ್ತೀರಿ. ಇದರಿಂದ ಯಾವ ಕೆಲಸವೂ ಆಗುವುದಿಲ್ಲ. ಅವರು ಕೆಲಸ ಹೇಗೆ ತಿಳಿದುಕೊಳ್ಳುತ್ತಾರೆ? ಅಲ್ಲಿ ಕೆಲಸ ಹೇಗೆ ನಡೆಯಬೇಕು? ಅದರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಸಮಯಬೇಕು. ಒಬ್ಬ ಅಧಿಕಾರಿ ಒಂದು ಕಡೆ ಕನಿಷ್ಠ ಎರಡು ಮೂರು ವರ್ಷಗಳಾದರೂ ಇರುವ ವ್ಯವಸ್ಥೆ ಮಾಡಬೇಕು. ಒಬ್ಬ ಅಧಿಕಾರಿ ಒಂದು ಸ್ವಲ್ಪ ತಿಳಿದುಕೊಳ್ಳುವ ಹೊತ್ತಿಗೆ ಇನ್ನೊಬ್ಬ ಅಧಿಕಾರಿಯನ್ನು ಹಾಕುವುದರಿಂದ ಇನ್ನೊಬ್ಬ ಅಧಿಕಾರಿ ತಿಳಿದುಕೊಳ್ಳುವ ಹೊತ್ತಿಗೆ ಸಂಘವೇ ಇರುವುದಿಲ್ಲ. ಸಂಘವೆಲ್ಲಾ ಹಾಳಾಗಿರುತ್ತದೆ. ದುರುಪಯೋಗದ ಬಗ್ಗೆ ಎಲ್ಲರೂ ಬಹಳ ಹೇಳುತ್ತಾರೆ, ಅವ್ಯವಹಾರ ಎಷ್ಟಾಗಿದೆ? ನನಗನ್ನಿಸಿದ ರೀತಿಯಲ್ಲಿ ಅವ್ಯವಹಾರ ಆಗಿರುವುದು ೨ರಿಂದ ೩ ಪರ್ಸೆಂಟ್ ಮೇಲಿಲ್ಲ. ಆದರೆ ಇದೇ ರೀತಿಯ ಅವ್ಯವಹಾರವನ್ನು ಬೇರೆ ಖಾತೆಗಳಲ್ಲಿ ನೋಡಿದರೆ ೫ರಿಂದ ೧೦ ಪರ್ಸೆಂಟ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮ ಕೋ-ಆಪರೇಟೀವ್ ಜನ ಏನು ಇದ್ದಾರೆ, ಅವರಿಗೆ ಯಾವುದೇ ಜಾತಿ ಇಲ್ಲ. ಪಕ್ಷವಿಲ್ಲ. ಎಲ್ಲಾ ಪಕ್ಷವೂ ಅವರದ್ದೇ. ಆದ್ದರಿಂದ ಅದಕ್ಕೆ ಸರಿಯಾಗಿ ಹೇಳಿ. ನಾವು ಎಲ್ಲರೂ ಕೇಳುತ್ತೇವೆ. ಕನ್ನಡ ಪಕ್ಷ, ಆ ಪಕ್ಷ ಈ ಪಕ್ಷ ಅಲ್ಲ. ಅವರ ಒಂದೇ ಒಂದು ಪಕ್ಷ ಅಂದರೆ ಕೋ-ಆಪರೇಷನ್.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.— ಬಹಳ ಸಂತೋಷ. ಕೋ-ಆಪರೇಷನ್‌ಗೆ ಒಂದು ಜಾತಿ ಇದೆ, ಇವರೇ ಒಂದು ಜಾತಿಯವರು ಎಂಬ ಭಾವನೆ ಏಕೆ ಬರುತ್ತದೆ. ಚೆನ್ನಾಗಿ ಕೆಲಸ ಮಾಡುವವರನ್ನು ನಂಬಿ ಒಳ್ಳೆಯವರೆಂದು ಹೇಳಿ ನೀವೂ ಬನ್ನಿ ಅವರ ಜೊತೆ. ಎಲ್ಲರೂ ಸೇರಿ ಕೆಲಸ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಎಲ್ಲಿ ಸೇರಿಸಿಕೊಳ್ಳುವುದಿಲ್ಲ. ಬಂದರೂ ಸೇರಿಸಿಕೊಳ್ಳುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.— ನಾವು ಸೇರಿಸಿಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಸಹಕಾರ ಕ್ಷೇತ್ರದಲ್ಲಿ ಅನುಭವ ಇರತಕ್ಕ ಅಧಿಕಾರಿಗಳನ್ನು ಹಾಕಬೇಕೆಂಬುದು ನನ್ನ ಉದ್ದೇಶ. ಅವ್ಯವಹಾರದ ಬಗ್ಗೆ ಏನು ಹೇಳುತ್ತಿದ್ದೀರಿ ಅದು ಸಹಕಾರ ಸಂಘಗಳಲ್ಲಿರುವಂತಹದ್ದು ೨ರಿಂದ ೩ ಪರ್ಸೆಂಟ್. ಆದರೆ ಬೇರೆ ಖಾತೆಗಳನ್ನು ನೋಡಿದರೆ ೧೦ ರಿಂದ ೧೫ ಪರ್ಸೆಂಟ್ ಇದೆ. ಇಷ್ಟೊಂದು ಅವ್ಯವಹಾರವಾಗಿದ್ದರೂ ಅದರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಬರೀ ಅವ್ಯವಹಾರವಾಗಿದೆ ಎಂಬುದರ ಬಗ್ಗೆ ಟೀಕೆ ಮಾಡುವುದರ ಬದಲು ಆದನ್ನು ಸರಿಪಡಿಸುವುದು ಹೇಗೆ ಎಂಬುದರ ಬಗ್ಗೆ ಸೂಕ್ತ ಸಲಹೆಗಳನ್ನು ಕೊಡಬೇಕು. ಸಹಕಾರ ಸಂಘದ ವ್ಯವಹಾರದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರತಕ್ಕ ಅಧಿಕಾರಿಗಳನ್ನು ಈ ಸಹಕಾರ ಸಂಘಗಳಿಗೆ ಖಾಯಂ ಆಗಿ ನೇಮಕ ಮಾಡುವ ವಿಚಾರ ಮಾಡಬೇಕು.

ಇದನ್ನು ಸುಧಾರಿಸುವ ದಿಸೆಯಲ್ಲಿ ಮೊದಲು ಪ್ರಯತ್ನ ಮಾಡಬೇಕಾಗುತ್ತದೆ. ಅದನ್ನು ಮೊದಲು ಮಾಡಿದಾಗ ಮಾತ್ರ ಸುಧಾರಣೆಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಕೆ.ಎಚ್. ಪಾಟೀಲರ ನೇತೃತ್ವದಲ್ಲಿ ನೇಮಕ ಮಾಡಿರುವಂತಹ ಸಮಿತಿಯು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಅವರು ವರದಿಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಪರಿಶೀಲನೆ ಮಾಡಬೇಕು. ಅದನ್ನು ಜಾರಿಗೆ ಕೊಟ್ಟರೆ ಇಂತಹ ಅನಾಹುತಗಳಿಗೆ ಅವಕಾಶ ಇಲ್ಲದಂತೆ ಆಗುತ್ತದೆ. ಒಬ್ಬೊಬ್ಬರು ಮಂತ್ರಿಗಳು ಬಂದು ಒಂದೊಂದು ರೀತಿಯಲ್ಲಿ ಮಾಡುವುದಕ್ಕೆ ಹೋಗುತ್ತಾರೆ. ಬಹಳಷ್ಟು ಜನ ಸಹಕಾರ ಚಳುವಳಿಯಿಂದ ಬಂದವರೇ ಮಂತ್ರಿಗಳಾಗುತ್ತಾರೆ. ಆದರೆ ಅವರು ಮಂತ್ರಿಯಾದ ತಕ್ಷಣವೇ ಬದಲಾಯಿಸಿಬಿಡುತ್ತಾರೆ. ಸಹಕಾರ ತತ್ವವನ್ನೆ ಮರೆಯುತ್ತಾರೆ. ಇದು ನಮ್ಮ ದುರ್ದೈವ.

ಒಬ್ಬ ಮಾನ್ಯ ಸದಸ್ಯರು.— ನೀವೂ ಸಚಿವರಾಗಿದ್ದರಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.— ಅದು ನನಗೆ ಗೊತ್ತಿದೆ. ನನಗೆ ಸಹಕಾರ ಇಲಾಖೆಯನ್ನೇ ಕೊಟ್ಟಿರಲಿಲ್ಲ. ಅದೂ ೭ ದಿವಸಗಳ ಮಂತ್ರಿಯಾಗಿದ್ದೆ. ಇದರ ಬಗ್ಗೆ ಪರಿಶೀಲನೆ ಮಾಡಿ ನಿಜವಾದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸಹಕಾರ ಸಂಘಗಳ ಸುಧಾರಣೆ ಕಡೆಗೆ ಹೆಚ್ಚು ಗಮನ ಕೊಡಬೇಕು.

ಶ್ರೀ ಕೆ.ಎಚ್. ಪಾಟೀಲ್‌ರವರ ವರದಿಯನ್ನು ಜಾರಿಗೆ ಕೊಡಬೇಕು.

ಇನ್ನು ಕಾಮನ್ ಕೇಡರ್ ಅಥಾರಿಟಿ ಬಗ್ಗೆ ಹೇಳುವುದಾದರೆ, ಹೋದಸಾರಿ ಕಾರ್ಯದರ್ಶಿಗಳು ಎಷ್ಟೋ ದಿವಸ ಉಪವಾಸ ಕುಳಿತರು. ಸತ್ಯಾಗ್ರಹ ಮಾಡಿದರು. ಅವರ ಬಗ್ಗೆ ಏನಾದರೂ ಮಾಡಬೇಕು. ಮಹಾರಾಷ್ಟ್ರದಲ್ಲಿ ೫೦ ಪರ್ಸೆಂಟ್ ಸಂಬಳ ಕೊಡುತ್ತಾರೆ ಇನ್ನುಳಿದ ೫೦ ಪರ್ಸೆಂಟ್ ಸಂಬಳವನ್ನು ಸರ್ಕಾರ ಕೊಡುತ್ತದೆ. ಆ ಪ್ರಕಾರವಾದರೂ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಸಿ.ಸಿ.ಎ. ಬಗ್ಗೆ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಅಜ್ಜೀಬಾಳ ಹೆಗ್ಗಡೆಯವರೂ ಕೂಡ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿರತಕ್ಕಂತಹದ್ದನ್ನಾದರೂ ಜಾರಿಗೆ ತರಬೇಕು.

ಸಹಕಾರ ಸಂಘಗಳ ಗತಿ ಏನಾಗಿದೆ ಎಂದರೆ, ೪೩, ೪೮,೦೦,೦೦೦—೦೦ ರೂಪಾಯಿಗಳ ಇಂಟ್ರೆಸ್ಟ್ ಸಬ್ಸಿಡಿಯನ್ನು ಕೊಡಬೇಕಾಗಿದೆ ಎಂಬುದಾಗಿ ನೀವೇ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಗೊತ್ತಾಗುತ್ತದೆ. ಇಷ್ಟು ಹಣವನ್ನು ತಾವು ಯಾವಾಗ ಕೊಡುತ್ತೀರಿ? ಇದನ್ನು ಕೇಳಿದರೆ ನಿಮ್ಮ ಸರ್ಕಾರ ಇದ್ದಾಗ ಮಾಡಿದ್ದು. ಇದು ಹಿಂದಿನ ಸರ್ಕಾರದ ಬಳುವಳಿ ಎಂದು ನಮಗೆ ಹೇಳಬಹುದು ನಾವು ತಪ್ಪು ಮಾಡಿದ್ದೇವೆ. ಅದಕ್ಕಾಗಿಯೇ ಇಂದು ನಾವು ವಿರೋಧಪಕ್ಷದಲ್ಲಿ ಕುಳಿತಿದ್ದೇವೆ. ಹಳೆ ಕಂತುಗಳ ಬಾಕಿಯನ್ನು ಕೊಟ್ಟಿಲ್ಲ. ನಮ್ಮ ಬ್ಯಾಂಕ್ ಹಾಗೂ ಸರಕಾರಿ ಸಂಘಗಳ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಈಗ ರೈತನಿಗೆ ಸಾಲ ಇಲ್ಲ. ಬೀಜ ಇಲ್ಲ. ಗೊಬ್ಬರ ಇಲ್ಲ. ಏನನ್ನೂ ರೈತನಿಗೆ ಕೊಡುವ ಸ್ಥಿತಿಯಲ್ಲಿಲ್ಲ. ಸಾಲವನ್ನು ಕೊಡುವ ಪರಿಸ್ಥಿತಿಯಂತೂ ಇಲ್ಲವೇ ಇಲ್ಲ, ತೊಂದರೆ ಜಾಸ್ತಿಯಾಗಿದೆ ಈ ತೊಂದರೆಯನ್ನು ತಪ್ಪಿಸಬೇಕಾದರೆ, ಅನಿಷ್ಟ ಹೇರು ಹಣವನ್ನು ಜಾಸ್ತಿ ಕೊಟ್ಟು ರೈತರಿಗೆ ಪುನಃ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಬೇಕು.

ಇದರ ಬಗ್ಗೆ ತಾವು ಗಂಭೀರವಾಗಿ ವಿಚಾರ ಮಾಡಬೇಕು. ಇವತ್ತು ಪುನಃ ರೈತರಿಗೆ ಸಾಲ ಸಿಗಬೇಕಾಗಿರುವುದರಿಂದ ತಾವು ಈ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ನಮ್ಮ ರೈತರಿಗೆ ಬೀಜ, ಗೊಬ್ಬರ ಸಿಗುತ್ತಾ ಇಲ್ಲ ಅದಕ್ಕೊಂದು ವ್ಯವಸ್ಥೆ ಮಾಡಬೇಕು. ಇದನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು.— ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ತಾವು ಸಹಕಾರ ಕೊಟ್ಟರೆ ಎಲ್ಲರಿಗೂ ಛಾನ್ಸ್ ಸಿಗುತ್ತದೆ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ).— ಇಲ್ಲ, ನನ್ನ ವಿಷಯ ಇನ್ನೂ ಮುಗಿದು ಇಲ್ಲ. ಆದಷ್ಟು ಬೇಗ ನಾನು ಮುಗಿಸುತ್ತೇನೆ, ಇನ್ನು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುತ್ತೇನೆ. ಇವತ್ತು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುವಾಗ ಬೀದರ್‌ನಲ್ಲಿ ಒಂದು ಮಾತ್ರ ಇದೆ. ಬೀದರ್ ಜಿಲ್ಲೆಗೆ ಒಂದೇ ಒಂದು ? ಸಹಕಾರಿ ಸಕ್ಕರೆ ಕಾರ್ಖಾನೆ ಇದೆ. ಹೋದವರ್ಷ ಅಲ್ಲಿ ಎರಡೂವರೆಯಿಂದ ಮೂರೂವರೆ ಲಕ್ಷ ಟನ್ ಕಬ್ಬನ್ನು ಅರೆದಿದ್ದರು. ಈ ವರ್ಷ ೪ ಲಕ್ಷ ಟನ್ ಕಬ್ಬನ್ನು ಅರೆದರು. ಅಲ್ಲಿ ೧೧ ಖಂಡಸಾರಿಗಳು ಇವೆ ಅಲ್ಲಿ ಒಂದೂವರೆ ಲಕ್ಷ ಟನ್ ಕಬ್ಬನ್ನು ಅರೆದಿದೆ ಆ ಮೇಲೆ ಜಾಗರಿ ಮಾಡುತ್ತಾರೆ ಅಲ್ಲಿ ಒಂದೂವರೆ ಲಕ್ಷ ಟನ್ ಕಬ್ಬನ್ನು ಉಪಯೋಗಿಸುತ್ತಾರೆ. ಹೀಗೆ ಒಟ್ಟು ಅಲ್ಲಿ ೧೫ ಲಕ್ಷಟನ್ ಕಬ್ಬನ್ನು ಬೆಳೆಯುತ್ತಾರೆ. ಇಲ್ಲಿ ಬೆಳೆದ ಕಬ್ಬು ಇಲ್ಲಿಗೆ ಆಗಿ ಮಿಕ್ಕಿದ್ದನ್ನು ಮಹಾರಾಷ್ಟ್ರಕ್ಕೂ ಕೊಡುತ್ತಿದ್ದೇವೆ.

ಈ ವರ್ಷ ಎಷ್ಟೋ ಜನ ಸುಟ್ಟು ಬಿಟ್ಟಿದ್ದಾರೆ. ನಾವು ಅಲ್ಲಿ ಶುಗರ್ ಫ್ಯಾಕ್ಟರಿ ಮಾಡಿದ್ದೇವೆ. ೧ಕೋಟಿ ರೂಪಾಯಿ ಶೇರ್ ಕಲೆಕ್ಟ್ ಮಾಡಿದ್ದೇವೆ. ಮತ್ತೆ ಬಸವ ಕಲ್ಯಾಣದಲ್ಲೂ ಶೇರ್ ಕಲೆಕ್ಟ್ ಮಾಡಿದ್ದಾರೆ. ಆದ್ದರಿಂದ ಅದಕ್ಕೆ ತಾವು ಬೇಗ ಗ್ಯಾರಂಟಿ ಕೊಡಬೇಕು. ಒಟ್ಟನಲ್ಲಿ ಎರಡು ಕಾರ್ಖಾನೆಗಳಿಗೆ ತಾವು ಪರ್ಮಿಷನ್ ಕೊಟ್ಟರೆ ಅಲ್ಲಿನ ರೈತರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಆಗುತ್ತದೆ. ಇಲ್ಲ ಅಂದರೆ ಅಲ್ಲಿನ ಪರಿಸ್ಥಿತಿ ಕೆಟ್ಟು ಹೋಗುತ್ತದೆ. ಕೊಳ್ಳುವವರಿಲ್ಲದೇ ಕಬ್ಬನ್ನು ಎಷ್ಟೋ ಮಂದಿ ಸುಟ್ಟು ಬಿಟ್ಟಿದ್ದಾರೆ. ಇನ್ನೊಂದು ಕಾರ್ಖಾನೆಯಾದರೆ ಅವರಿಗೂ ಅನುಕೂಲವಾಗುತ್ತದೆ. ಈ ಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆ.ಎಸ್.ಆರ್.ಟಿ.ಸಿ. ಬಗ್ಗೆ ಒಂದೆರಡು ಮಾತನ್ನಾಡುತ್ತೇನೆ. ಇಲ್ಲಿ ಸಿಟಿಯಲ್ಲಿ ನಾವು ಡಬಲ್ ಬಸ್ ನೋಡಿದ್ದೇವೆ. ಅದೇ ರೀತಿ ಡಬಲ್ ಬಸ್‌ಗಳು ನಮ್ಮ ಬೀದರ್‌ನಲ್ಲೂ ಇವೆ. ಇಲ್ಲಿಯ ಬಸ್‌ಗಳಲ್ಲಿ ಮೇಲೆ ಕೂಡುವವರಿಗೆ ಟಾಪ್ ಇರುತ್ತದೆ. ಆದರೆ ನಮ್ಮ ಕಡೆ ಮೇಲೆ ಕೂರುವವರಿಗೆ ಛತ್ ಇರುವುದಿಲ್ಲವಷ್ಟೇ. ಮೇಲೆ ಕೊಡೆಯನ್ನೋ, ಬಟ್ಟೆಯನ್ನೋ ಬೇರೆ ಏನನ್ನೋ ಹಿಡಿದು ಕುಳಿತಿರುತ್ತಾರೆ. ನಮ್ಮ ಕಡೆ ಬಸ್ ಮೇಲೆ ಅದೇನೋ ಗಾಳಿಗೆ ಜನ ಮೇಲೆ ಕುಳಿತು ಪ್ರಯಾಣಿಸುತ್ತಾರೆ. ಅವರಿಗೆ ಅಭ್ಯಾಸ ಇದೆಯೆಂದು ಮಾನ್ಯ ಸಾರಿಗೆ ಸಚಿವರು ಹೇಳಿದರಂತೆ. ಮಂತ್ರಿಗಳು ಆ ರೀತಿ ಅಭಿಪ್ರಾಯ ಪಡುವುದು ಸರಿಯಲ್ಲ. ಈ ದುರವಸ್ಥೆಯನ್ನೆಲ್ಲಾ ನೋಡಿ ಸಿಂಧ್ಯಾ ಅವರು ಬಸ್ ರಾಷ್ಟ್ರೀಕರಣ ಮಾಡಿದರು. ನಮ್ಮ ಕಡೆ ಒಳಗೆ ಜಾಗ ಇಲ್ಲದ್ದರಿಂದ ಮೇಲೆ ಕೂರುತ್ತಾರೆ. ಮೇಲೆ ಅವರಿಗೆ ಗಾಳಿ ಒಂದೇ ಅಲ್ಲ, ಬಿಸಿಲು, ಮಳೆ, ಧೂಳು ಎಲ್ಲಾ ಹೇರಳವಾಗಿ ಸಿಗುತ್ತದೆ. ಮೇಲೆ ಹವಾ ಧೂಪ್, ಪಾನಿ ಸಬ್ಬೀ ಪಡ್ತಾಹೈ ಇದರ ಅನುಭವ ಮಂತ್ರಿಗಳಿಗೆ ಇಲ್ಲ. ಇವತ್ತು ಬಸ್‌ಗಳ ಗತಿ ಹೇಗಿದೆ ಎಂದರೆ ಅವನ್ನು ದೇವರೇ ಕಾಪಾಡಬೇಕು. ಇವತ್ತು ಬೀದರ್‌ನಲ್ಲಿ ಬಸ್ ಪ್ರಯಾಣ ಮಾಡಿದರೆ ನಾಲ್ಕು ದಿವಸ ರೆಸ್ಟ್ ತೆಗೆದುಕೊಳ್ಳಬೇಕು, ಕಾಲು ಬಿದ್ದುಹೋಗುತ್ತದೆ. ಆ ಭಾಗದ ಬಸ್ಸುಗಳಲ್ಲಿ ಗಾಳಿ, ಮಳೆ, ಬಿಸಿಲಿನ ಎಲ್ಲಾ ಅನುಕೂಲತೆಗಳೂ ಇವೆ. ರಾಷ್ಟ್ರೀಕರಣ ಆದಮೇಲೆ ಹಳ್ಳಿಗಳ ಕಡೆ ಬಸ್‌ಗಳು ಹೇಗೆ ಓಡುತ್ತಿವೆ ಎಂದು ನೋಡಬೇಕು. ಇವತ್ತು ೧೦ ಹಳ್ಳಿಗಳ ಮಧ್ಯೆ ಓಡಾಡುವ ಬಸ್‌ಗಳು ಮಧ್ಯೆ ೪ ಹಳ್ಳಿಗಳನ್ನು ಬಿಟ್ಟು ಶಾರ್ಟ್‌ಕಟ್‌ನಲ್ಲಿ ಕೊನೇ ಹಳ್ಳಿಗೆ ಬಂದು ಬಿಡುತ್ತವೆ. ಮಧ್ಯದ ಹಳ್ಳಿಗಳವರಿಗೆ ದೇವರೇ ಗತಿ. ನಮ್ಮ ತಾಲ್ಲೂಕಿನಲ್ಲಿ ೨೧ ಸರ್ವೀಸಸ್‌ಗೆ ಕೇವಲ ೫ ಬಸ್‌ಗಳು ಮಾತ್ರ ಇವೆ. ದಯವಿಟ್ಟು ಇವನ್ನೆಲ್ಲಾ ಯಾವಾಗ ಸರಿ ಮಾಡುತ್ತೀರಿ? ಬೀದರ್‌ನಲ್ಲಿ ಇವತ್ತು ಬಸ್‌ಗಳಲ್ಲಿ ಕುಳಿತುಕೊಳ್ಳಲಾಗದ ಪರಿಸ್ಥಿತಿ ಇದೆ. ಇನ್ನು ಬಸ್‌ನಿಲ್ದಾಣಗಳಲ್ಲಿರುವ ಶೌಚಾಲಯದಲ್ಲಿನ ಅವಸ್ಥೆ ಬಗ್ಗೆ ಹೇಳುವುದಕ್ಕೇ—ಅಸಹ್ಯವಾಗುತ್ತದೆ. ಆ ಶೌಚಾಲಯದೊಳಕ್ಕೆ ಮನುಷ್ಯರಂತೂ ಹೋಗಲು ಸಾಧ್ಯವಿಲ್ಲ. ಅದರ ಒಳಗೆ ಹೋಗಬೇಕಾದರೆ ಪಟ್ಟಿಯನ್ನು ಬಿಗಿಯಾಗಿ ಕಟ್ಟಿಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು:—ತಾವು ಭಾಷಣವನ್ನು ಮುಗಿಸಿ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ):—ಇದರ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ಗಮನ ಹರಿಸಬೇಕು. ಇನ್ನು ಕಂಡಕ್ಟರ್‌ಗಳು ಲಂಚ ತಿಂದರೆ ತಾವು ಸಸ್ಪೆಂಡ್ ಮಾಡುತ್ತೀರಿ. ಇನ್ನು ಚೆಕಿಂಗ್ ಮಾಡುವವರೇ ಕಂಡಕ್ಟರ್‌ರಿಂದ ದುಡ್ಡು ತೆಗೆದುಕೊಳ್ಳುತ್ತಾರಲ್ಲಾ ಇವರ ಬಗ್ಗೆ ಏನು ಮಾಡಿದ್ದೀರಿ? ಇವರು ಪಾರ್ಟ್‌ನರ್‌ಗಳಾಗಿ—ಹಣ ಕಬಳಿಸುತ್ತಾರೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ನಮ್ಮ ಭಾಗದಲ್ಲಿ ಜಾಸ್ತಿ ಬಸ್‌ಗಳನ್ನು ಬಿಡಬೇಕು. ಇನ್ನು ಔರಾದ್ ತಾಲ್ಲೂಕಿನಲ್ಲಿ ಬಸ್ ಡಿಪೋ ಇಲ್ಲ. ನಮ್ಮ ಸರ್ಕಾರ ಇದ್ದಾಗ ಎರಡು ಸಾರಿ ಮಂಜೂರು ಆಗಿತ್ತು. ಆದರೆ ಅದು ಹಾಗೇ ಉಳಿದಿದೆ. ದಯಮಾಡಿ ಅಲ್ಲಿ ಡಿಪೋ ಯಾವಾಗ ಮಾಡುತ್ತೀರಿ ? ಯಾವಾಗ ಅಲ್ಲಿಗೆ ಬಸ್ ಡಿಪೋ ಮಂಜೂರು ಮಾಡುತ್ತೀರಿ, ಅದರ ಉದ್ಘಾಟನೆಗೆ ತಾವು ಎಂದು ಬರುತ್ತೀರಿ ಎನ್ನುವುದನ್ನು ಹೇಳಬೇಕು. ಇವತ್ತು ಆಹಾರ ಖಾತೆಯಲ್ಲಿ ಏನಾಗಿದೆ ಎಂದರೆ ಬಡವರಿಗೆ ಏನು ಹಸಿರು ಕಾರ್ಡ್‌ಗಳನ್ನು ಕೊಡುತ್ತಿದ್ದಾರೆ ಅದರ ಬಗೆ ನಿನ್ನೆ ಇಲ್ಲಿ ಚರ್ಚೆ ನಡೆಯಿತು. ಕೆಲವರು ಮಾತನಾಡುತ್ತಿದ್ದಾಗ ಹೇಳಿದರು, ಹತ್ತು ಎಕರೆ ಇದ್ದವರಿಗೂ ಕೂಡ ಹಸಿರು ಕಾರ್ಡ್ ಸಿಕ್ಕಿದೆ, ಒಂದು ಎಕರೆ ಇದ್ದವರಿಗೂ ಕೂಡ ಹಸಿರು ಕಾರ್ಡ್ ಸಿಕ್ಕಿದೆ ಎಂದು ಹೇಳಿದರು. ನಾವು ಹಳ್ಳಿಗೆ ಹೋದಾಗ ಅಲ್ಲಿ ಏನಾಗುತ್ತದೆಂದರೆ, ನಾನೇನಾದರೂ, ಅವರಿಗೆ ಹೇಳುವುದಕ್ಕೆ ಹೋದರೆ ದೊಡ್ಡ ಜಗಳವಾಗುತ್ತದೆ. ಯಾರು ದೊಡ್ಡವರಿಗೆ ಹಸಿರು ಕಾರ್ಡ್ ಏನು ಸಿಕ್ಕಿದೆ ಅದನ್ನು ಕ್ಯಾನ್ಸಲ್ ಮಾಡಿಸಿ ಎಂದು ನಾವು ಹೇಳಿದರೆ ನಿಮ್ಮ ಅಪ್ಪನ ಗಂಟೇನು ಹೋಗುತ್ತದೆ. ಸರ್ಕಾರದವರು ಕೊಡುತ್ತಾರೆ ನಾವು ತೆಗೆದುಕೊಳ್ಳುತ್ತೇವೆ ಎಂದು ದೊಡ್ಡ ಜಗಳ ಪ್ರಾರಂಭವಾಗುತ್ತದೆ. ಇದನ್ನು ಪರಿಶೀಲನೆ ಮಾಡಿ ಇದನ್ನು ಸರಿಪಡಿಸಬೇಕು. ಇನ್ನು ಗೋದಾಮುಗಳಿಂದ ಸಕ್ಕರೆಯನ್ನು ತೂಗಿ ಕೊಡುತ್ತಾರೆ ಅಲ್ಲಿ ಸರಿಯಾಗಿ ತೂಕ ಮಾಡುತ್ತಿಲ್ಲ ಸರಿಯಾಗಿ ತೂಕ ಮಾಡಿ ಕೊಡಬೇಕು. ಅದರ ಬದಲಾಗಿ ಯಾವ ಹಳ್ಳಿ ಪಾಯಿಂಟ್‌ನಲ್ಲಿ ಸಕ್ಕರೆಯನ್ನು ಕೊಡುತ್ತಾರೆ ಅಲ್ಲಿ

ತೂಕ ಮಾಡಿ ಕೊಡಬೇಕು. ಇಲ್ಲದಿದ್ದರೆ ಇಲ್ಲಿಂದ ತೂಗಿ ಲಾರಿಯಲ್ಲಿ ಹಾಕಿ ಕಳಿಸಿದರೆ ಅವನ್ನು ಅಲ್ಲಿಗೆ ಹೋಗುವಷ್ಟರಲ್ಲಿ ಶಾರ್ಟೇಜ್ ಆಗಿ ಅಲ್ಲಿ ಕಡಿಮೆ ಬರುತ್ತದೆ; ಇದರಿಂದಾಗಿ ಅಲ್ಲಿ ಕೆಲವು ಸಂಘಗಳು ಮುಳುಗಿ ಹೋಗಿದೆ. ಆದ್ದರಿಂದ ತಾವು ಎಲ್ಲಿ ಕೊಡುತ್ತೀರಿ ಅಲ್ಲೇ ತೂಕ ಮಾಡಿ ಕೊಡುವ ವ್ಯವಸೆ ಮಾಡಬೇಕು.

ಉಪಾಧ್ಯಕ್ಷರು.—೨೫ ನಿಮಿಷವಾಯಿತು. ನಾನು ಬೇರೆಯವರನ್ನು ಕರೆಯುತ್ತೇನೆ. ದಯವಿಟ್ಟು ಮುಗಿಸಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಎ. ಪಿ. ಎಂ. ಸಿ. ಬಗ್ಗೆ ಬಹಳ ಸಂಕ್ಷಿಪ್ತವಾಗಿ ಹೇಳುತ್ತೇನೆ. ೧೯೭೭ರಲ್ಲಿ ೭೪ವೀಕ್ ಎಪಿ ಎಂ ಸಿಗಳಿಗೆ ವಿಶ್ವಬ್ಯಾಂಕ್‌ನವರು ಹಣ ಕೊಟ್ಟು ಅದನ್ನು ಅಭಿವೃದ್ಧಿ ಮಾಡುತ್ತಿದ್ದು ಈಗ ಅದನ್ನು ನಿಲ್ಲಿಸಿದ್ದಾರೆ. ೧೯೮೪-೮೫ ರ ವರೆಗೆ ವಿಶ್ವಬ್ಯಾಂಕ್‌ನಿಂದ ನೆರವನ್ನು ತೆಗೆದುಕೊಂಡು ಅಲ್ಲಲ್ಲಿ ಮಾರ್ಕೆಟ್‌ಗಳನ್ನು ಅಭಿವೃದ್ಧಿ ಮಾಡುತ್ತಿದ್ದರು ಅದು ಈಗ ನಿಂತಿದೆ. ಇನ್ನೊಂದು ಸಾರಿ ವೀಕ್ ಮಾರ್ಕೆಟ್ ಸಂಘಗಳು ಏನು ಇವೆ ಆ ಎ ಪಿ ಎಂ ಸಿ ಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಇನ್ನು ಎ. ಪಿ. ಎಂ. ಸಿ. ಗೆ ಮೂರು ರೂಪಾಯಿ ಕಮೀಷನನ್ನು ಖರೀದಿದಾರರೇ ಕೊಡಬೇಕೆಂದು ಹೇಳುತ್ತಿದ್ದಾರೆ ರೈತರ ಕಡೆಯಿಂದ ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ತನಿಖೆ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕು. ತಾವು ಇಷ್ಟು ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಹೊಸ ಪದ್ಧತಿ ಯಾವಾಗ ಪ್ರಾರಂಭವಾಯಿತೋ ಗೊತ್ತಿಲ್ಲ. ಈ ಕಡೆ ಬೇರೆ ರಾಜಕೀಯ ಪಕ್ಷಗಳೂ ಕೂಡ ಇವೆ. ಈ ಕಡೆಯಿಂದ ಒಬ್ಬಿಬ್ಬರು ಮಾತನಾಡಿದ ಮೇಲೆ ಆ ಕಡೆಯಿಂದ ಮಾತನಾಡುವಂತಹ ಪದ್ಧತಿ ಇತ್ತು. ಈಗ ಬೇರೆ ಪಕ್ಷಗಳು ಇಲ್ಲ. ಅವನ್ನು ಗುರುತಿಸಿಲ್ಲ ಎನ್ನುವುದಾದರೆ ನಾವು ಯಾವುದೇ ಡಿಬೇಟ್‌ನಲ್ಲಿ ಭಾಗವಹಿಸುವುದಕ್ಕೆ ಸಿದ್ಧರಿಲ್ಲ. ಇದರ ಉದ್ದೇಶ ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ, ಸಂಬಂಧಪಟ್ಟವರು ಸಭಾ ನಾಯಕರು ಸೂಕ್ತ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಹೊಸ ಪದ್ಧತಿ ಈಗ ಪ್ರಾರಂಭವಾಗಿದೆ.

† ಡಾ. ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ).—ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದಿವಸ, I am speaking on the Demands for Grants for 1990-91 in respect of Food and Civil Supplies, Taxation and Vehicles, Road Transport, Co-operation, and Regulated markets. ಇದರ ಮೇಲೆ ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾನು ಹೆಚ್ಚಿಗೆ ಕಾಲವನ್ನು ವ್ಯಯ ಮಾಡದೆ ಕೆಲವು ಅಂಶಗಳ ಬಗ್ಗೆ ಕೊ-ಆಪರೇಟೀವ್ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಸಹಕಾರ ಇಲಾಖೆ ಬಹಳ ಪುರಾತನವಾದದ್ದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ, ಈ ಹ್ಯೂಮನ್ ಬೀಯಿಂಗ್ ಕೋ-ಆಪರೇಷನ್ ಬಹಳ ಹಿಂದಿನದು.

4-20. P.M.

Human being is an animal with a brain. Human co-operation that can be found in any functioning society that human beings have survived as a species is not simply because of our super brainial capacity but also because of our superior capacity for social co-operation. From time immemorial, human beings have been found in groups, in villages, in towns, in clans and like that. ಹೀಗೆ time immemorial ನಿಂದ ಈ ಸಹಕಾರ ಬಂದಿದೆ.

Aristotle said once : "Man is a social animal". He has got a social nature also. It is by birth. So our ability to co-operate is essential to our survival itself. So the co-operative movement has to go with the democracy and also this public sector. Co-operative movement and public sector, without that the democracy itself cannot survive. ಆದ್ದರಿಂದ ಇಷ್ಟೊಂದು ಬಹಳ ಮುಖ್ಯವಾದ ವಿಷಯವನ್ನು, ಇದು ಇಷ್ಟು

ಚೆನ್ನಾಗಿ ಇದ್ದರೂ ಕೂಡ ಸ್ವಾತಂತ್ರ್ಯ ಬಂದಾಗಿನಿಂದ ಈ ಕೋ–ಆಪರೇಟಿವ್ ಮೂವ್‌ಮೆಂಟ್ ಬಗ್ಗೆ ಗಾಂಧೀಜಿಯವರ ಏನು ಆಶೋತ್ತರಗಳಿದ್ದವೋ ಅವನ್ನು ಈಡೇರಿಸುವುದಕ್ಕೆ ಪ್ರಾರಂಭ ಮಾಡಿದರೂ ಕೂಡ, ಬಹಳ ಚೆನ್ನಾಗಿ ಇದ್ದ ಕೋ–ಆಪರೇಟಿವ್ ಮೂವ್‌ಮೆಂಟ್ ಬರುಬರುತ್ತ, ದಿನೇ ದಿನೇ ಹಾಳಾಗಿ ಅದು ಪೂರ್ತಿಯಾಗಿ ನೆಲಸಮವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕಳೆದ ಹತ್ತು ವರ್ಷಗಳಿಂದ ಕರ್ನಾಟಕ ರಾಜ್ಯದ ಸಹಕಾರ ಚಳುವಳಿಯ ಚರಿತ್ರೆಯನ್ನು ತೆಗೆದುಕೊಂಡರೆ, ದಕ್ಷಿಣಭಾರತದಲ್ಲಿ ಸಹಕಾರ ಚಳುವಳಿ ಬಹಳ ಚೆನ್ನಾಗಿಯೇ ಇತ್ತು. ಕೇರಳ, ತಮಿಳುನಾಡು, ಆಂಧ್ರ ಮತ್ತು, ಕರ್ನಾಟಕದಲ್ಲಿ ಇದು ಬಹಳ ಚೆನ್ನಾಗಿ ಪ್ರಾರಂಭವಾಯಿತು. ಪ್ರತಿ ತಾಲ್ಲೂಕಿನಲ್ಲಿ ಸುಮಾರು ನೂರಾರು ಕೋ–ಆಪರೇಟಿವ್ ಸೊಸೈಟಿಗಳು ಉದ್ಭವವಾದವು. ಆದರೆ ಅವುಗಳ ಗತಿ ಇವತ್ತು ಏನಾಗಿದೆ? ಈ ಸೊಸೈಟಿಗಳನ್ನು ಕಳೆದ ಎಳೆಂಟು ವರ್ಷಗಳಲ್ಲಿ ನೆಲಸಮ ಮಾಡಿದರು. ಇದಕ್ಕೆ ಕಾರಣಕರ್ತರು ಯಾರು ? ಈ ಕೋ–ಆಪರೇಟಿವ್ ಮೂವ್‌ಮೆಂಟ್‌ನ್ನು ರಾಜಕೀಯವಾಗಿ ನೋಡುವುದಲ್ಲ. ಕೋ–ಆಪರೇಷನ್ ಹೇಗೆ ಎಂದರೆ ರಾಜಕೀಯ ಇದ್ದರೂ ಕೂಡ ಅದನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು, ರಾಜಕೀಯವನ್ನು ಉಪಯೋಗಿಸಿ ಅದನ್ನು ನೆಲಸಮ ಮಾಡುವುದಕ್ಕೆ ಪ್ರಯತ್ನ ಮಾಡುವುದಲ್ಲ. ಆದರೆ ಹಾಗೆ ಪ್ರಯತ್ನ ನಡೆಸಿದ್ದರಿಂದ ಈ ಕೋ–ಆಪರೇಟಿವ್ ಮೂವ್‌ಮೆಂಟ್‌ಗೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಗತಿ ಬಂದಿದೆ. ಉದಾಹರಣೆಗೆ, ನನ್ನ ತಾಲ್ಲೂಕಿನಲ್ಲಿ ಸುಮಾರು ೭೨–೭೩ ಕೋ–ಆಪರೇಟಿವ್ ಸೊಸೈಟಿಗಳು ಎಳೆಂಟು ವರ್ಷದವರೆಗೆ ಬಹಳ ಚೆನ್ನಾಗಿ ನಡೆಯುತ್ತಿದ್ದವು. ಇವತ್ತಿನ ದಿವಸ ಕೇವಲ ಆರು ಸೊಸೈಟಿಗಳು ಮಾತ್ರ ಚೆನ್ನಾಗಿ ನಡೆಯುತ್ತಿವೆ. ಈ ಆರು ಸೊಸೈಟಿಗಳು ಬಹಳ ಕಷ್ಟಪಟ್ಟು ನಡೆಯುತಕ್ಕಂಥ ಒಂದು ಸ್ಥಿತಿ ಬಂದಿದೆ. ಇದಕ್ಕೆ ಈ ಎಲ್ಲಾ ಕೋ–ಆಪರೇಟಿವ್ ಸೊಸೈಟಿಗಳು ಡಿಫೆಕ್ಟ್ ಆಗುವುದಕ್ಕೆ, ಓವರ್‌ಥ್ರೋ ಮಾಡುವುದಕ್ಕೆ ಕಳೆದ ರಾಜ್ಯ ಸರ್ಕಾರವೇ ಕಾರಣವೆಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಯಾವುದೇ ಕೋ–ಆಪರೇಟಿವ್ ಮೂವ್‌ಮೆಂಟ್ ಬೆಳೆಯಬೇಕಾದರೆ, essential commodities ಏನು ಇವೆಯೋ it must be distributed through these co-operative societies ಅದನ್ನು ಪೂರ್ತಿ ತೆಗೆದುಹಾಕಿದ್ದರಿಂದ ಬರತಕ್ಕಂಥ ಆದಾಯ ಕುಗ್ಗಿತು. ಅಲ್ಲಿರತಕ್ಕಂಥ ಅಧಿಕಾರಿಗಳು, ಸೆಕ್ರೆಟರಿಯವರು ಷೇರನ್ನೇ ಸಂಬಳವಾಗಿ ಉಪಯೋಗಿಸಿಕೊಂಡರು. ಷೇರ್ ಹಣ ಎಲ್ಲಾ ಮುಗಿದ ಮೇಲೆ ಅದನ್ನು ಲಿಕ್ವಿಡೇಟ್ ಮಾಡಿದರು. ಹೀಗೆ ಲಿಕ್ವಿಡೇಟ್ ಮಾಡಿದ್ದರಿಂದ ತಾಲ್ಲೂಕು ಲೆವಲ್‌ನಲ್ಲಿ ಸೊಸೈಟಿಗಳು ನೆಲಸಮವಾದವು. ಆಮೇಲೆ Co-operative institutions like so many small industries ಏನಿದ್ದವು ಅದರಲ್ಲಿ ರಾಜಕೀಯವನ್ನು ಬೆರೆಸಿದರು. ಆ ಡೈರೆಕ್ಟರ್ಸ್ ಆಯ್ಕೆಯಾಗತಕ್ಕಂಥ ಸಂದರ್ಭದಲ್ಲಿ ಇದು ಆಯಿತು. ಒಂದು ಕಡೆ ಅಧಿಕಾರಿಗಳ ಗೊಂದಲಗಳಾಯಿತು. ಅದರ ಬಗ್ಗೆ ನಾನು ವಿವರವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಷಯ. How it has been destroyed ; Crores of rupees worth of sugar factories come up all over.

ನಮಗೂ ಕೂಡ ಒಂದು ಷುಗರ್ ಫ್ಯಾಕ್ಟರಿ ಇದೆ. ಅದಕ್ಕೆ ೧೦ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಎರಡು ವರ್ಷಕ್ಕೆ ಆಗತಕ್ಕ ಸಾಮಾನುಗಳನ್ನು ಪರ್ಚೇಸ್ ಮಾಡಿ, ಈಗಾಗಲೇ ಎರಡು ವರ್ಷದಿಂದ ಆ ಯಾರ್ಡ್‌ನಲ್ಲಿ ಬಿದ್ದಿದೆ. ಇದನ್ನು ಕೇಳುವುದಕ್ಕೂ, ಹೇಳುವುದಕ್ಕೂ ಯಾರೂ ಇಲ್ಲ. ಅಧಿಕಾರಿಗಳ ನಿಶ್ಶಕ್ತಿ ಇದರಲ್ಲಿದೆ. ಒಂದು ಕಡೆ ಅಧಿಕಾರಿಗಳು, ಇನ್ನೊಂದು ಕಡೆ ಯಾರು ಅದನ್ನು ಮ್ಯಾನೇಜ್ ಮಾಡುತ್ತೇವೆಂದು ಸೇರಿಕೊಳ್ಳುತ್ತಾರೋ, The bandicoots they have destroyed the whole iostitutions. ಇವತ್ತು ಎರಡೂವರೆ, ಮೂರು ಕೋಟಿ ನಷ್ಟದಲ್ಲಿ ಸಕ್ಕರೆ ಕಾರ್ಖಾನೆ ನಡೆಯುತ್ತಿದೆ. ೧೦ ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡಿದಂಥ ಸಕ್ಕರೆ ಫ್ಯಾಕ್ಟರಿ ಚೆನ್ನಾಗಿ ಕಬ್ಬು ಇದ್ದರೂ, ಕೆಲಸ ಮಾಡುವುದಕ್ಕೆ ಜನ ಇದ್ದರೂ ಕೂಡ, ಅವರೆಲ್ಲರೂ ಸಂಬಳ ತೆಗೆದುಕೊಂಡು ಖರ್ಚು ಮಾಡುತ್ತಾ ಇದ್ದರೂ ಸಹ ಈ ರೀತಿ ಕೋ–ಆಪರೇಟಿವ್ ಮೂವ್‌ಮೆಂಟ್ ಹಾಳಾಗಿ ಹೋಗಿದೆ. ಆದ್ದರಿಂದ ನಾವು ಇಂಡಿವಿಜುಯಲ್ ಡಿಫೆಕ್ಟ್ಸ್ ಯೋಚನೆ ಮಾಡುವುದಕ್ಕೆ ಮುಂಚೆ. anywhere in this world have you seen the president has sold through a private agency essential commodities, that too a party worker? ಎಲ್ಲಿಯಾದರೂ ಪ್ರಪಂಚದಲ್ಲಿ ಇದನ್ನು ಕೇಳಿದ್ದೀರಾ? ಪಾರ್ಟಿ ವರ್ಕರ್, ಒಂದು ಲಕ್ಷ ರೂಪಾಯಿಗಳ ಜೀವನಾವಶ್ಯಕ ವಸ್ತುಗಳನ್ನು ಒಡವನಿಗೆ ಗ್ರೀನ್ ಕಾರ್ಡ್ ಇರುವವನಿಗೆ ಕೊಡುವುದನ್ನು ಅಲ್ಲೇ, ಟೌನ್‌ನಲ್ಲಿ ಮಾರಿ, ಒಂದು ತಿಂಗಳಿಗೆ ೧೦–೧೫ ಸಾವಿರ ರೂಪಾಯಿಗಳ ಲಾಭ ಸಂಪಾದನೆ

ಮಾಡುತ್ತಿದ್ದಾನೆ. ಚಪ್ಪಲಿ ಇಲ್ಲದೆ ಇದ್ದಂತಹವನು ಇವತ್ತು ಮೋಟಾರು ಬೈಕು, ಜೀಪು ಇಟ್ಟುಕೊಂಡು ಓಡಾಡುವಂಥ ಸ್ಥಿತಿಗೆ ಬಂದಿದ್ದಾನೆ. ನಾನು ಮಾನ್ಯ ರಾಜ್ಯಪಾಲರಿಗೂ ಮೆಮೊರ್ಯಾಂಡವನ್ನು ಕೊಟ್ಟೆ. ನಾವು ಚುನಾಯಿತರಾಗಿ ಬಂದಮೇಲೂ ಈ ಸರ್ಕಾರಕೂ ದೂರು ಕೊಟ್ಟಿದ್ದೇನೆ. ಇದರ ಬಗ್ಗೆ ಯಾರು ಚಿಂತನೆ ಮಾಡುತ್ತಾ ಇಲ್ಲ. ಗ್ರೀನ್ ಕಾರ್ಡ್ ವಿತರಣೆಯಲ್ಲೂ ಬಹಳಷ್ಟು ಅನ್ಯಾಯವಾಗಿದೆ ಎಂದು ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ಇವೆಲ್ಲವನ್ನು ಸರ್ಕಾರ ಆದಷ್ಟು ಬೇಗ ಹಿಡಿತವನ್ನು ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿಗಳ ಅಧೀನಕ್ಕೆ ಹೋಗಿರತಕ್ಕ ಜವಾಬ್ದಾರಿಗಳಲ್ಲೂ ಸರ್ಕಾರದ ಹಿಡಿತ ಇರಬೇಕು. ಇವತ್ತು ಒಬ್ಬ ರೈತ ಸೀಮೆ ಎಣ್ಣೆ ತರುವುದಕ್ಕೆ ಬಾಟಲ್ ಹಿಡಿದುಕೊಂಡು ತಾಲ್ಲೂಕು ಹೆಡ್‌ಕ್ವಾಟರ್‌ಗೆ ಬರುವಂಥ ಸ್ಥಿತಿ ಇದೆ. Is it correct on our part after 40 years after Independence, even today we have to carry a bottle to get kerosene. Is not it an essential commodity to distribute then and there at their door-steps? If we do not do these things, what is the use of talking about co-operation ? ಸಾರಿಗೆ ಆದೂ, ಇದೂ ಎಂದು ಮಾತನಾಡುವುದರಲ್ಲಿ ಅರ್ಥ ಇಲ್ಲ. ಆದ್ದರಿಂದ ಸರ್ಕಾರದಲ್ಲಿರತಕ್ಕ ಅಧಿಕಾರಿಗಳಾಗಲೀ ಅಥವಾ ಜವಾಬ್ದಾರಿ ಹೊತ್ತಿರತಕ್ಕಂಥವರು ಕೋ-ಆಪರೇಟಿವ್ ಮೂವ್‌ಮೆಂಟು ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದರ ಜೊತೆಗೆ ತೆಂಗಿನಕಾಯಿ, ಕೊಬ್ಬರಿ ಇವುಗಳ ಧಾರಣೆ ಏನಾಗಿದೆ ಎಂದರೆ, ೩-೪ ಸಾವಿರ ರೂಪಾಯಿಗಳಿಗೆ ಮಾರುತ್ತಿದ್ದ ಈ ಅವಶ್ಯಕ ವಸ್ತುಗಳು ರೆಗ್ಯುಲೇಟೆಡ್ ಮಾರ್ಕೆಟ್‌ಗಳನ್ನು ಸರಿಯಾಗಿ ಮ್ಯಾನೇಜ್ ಮಾಡದೆ, ಅನೇಕ ಜನರು ಲೂಟಿ ಹೊಡೆದರು. ಇವತ್ತು ತೆಂಗಿನಕಾಯಿ, ಕೊಬ್ಬರಿ ಬೆಲೆ ಬಾಟಮ್‌ಗೆ ಮುಟ್ಟಿದೆ. ಇದರ ಬಗ್ಗೆಯೂ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ನನಗೆ ಗೊತ್ತಿರುವ ಹಾಗೆ ಇದರ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಸರ್ಕಾರವೂ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ, ಆದರೂ ಕೂಡ ಕೊಬ್ಬರಿ ಒಂದು ಕ್ವಿಂಟಾಲ್‌ಗೆ ೧,೮೦೦ ರೂಪಾಯಿ ಮಾತ್ರ ಬಂದಿದೆ. ಇದರಿಂದ ಅನೇಕ ಜನ ರೈತರಿಗೆ ತೊಂದರೆಯಾಗಿದೆ. ಅಲ್ಲದೆ ನಮ್ಮ ಕಡೆ ವ್ಯವಸಾಯ ಒಂದು ಕಡೆ ಇದೆ. ಇನ್ನೊಂದು ಕಡೆ ಕುಡಿಯುವ ನೀರಿನ ಅಭಾವ ಇದೆ, ಮೂರು ವರ್ಷಗಳಿಂದ ಮಳೆ ಇಲ್ಲ. Last year only 11 inches of rainfal was there, ಅದಕ್ಕಿಂತ ಮುಂಚೆ ೮ ತಿಂಗಳಿಂದ ಮಳೆ ಇಲ್ಲ. ಈ ವರ್ಷ ಇಲ್ಲಿಯವರೆಗೂ ಮಳೆ ಇಲ್ಲ. ಆದ್ದರಿಂದ ಅವಶ್ಯಕ ವಸ್ತುಗಳ ವಿತರಣೆ ಬಗ್ಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರ ಯಾವುದೇ ಚಿಂತನೆ ಮಾಡುವುದಿಲ್ಲ. ಇದರ ಬಗ್ಗೆ ಪ್ರತಿಯೊಬ್ಬರೂ ಚಿಂತನೆ ಮಾಡಬೇಕು. ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಹಿಂದಿನ ಸರ್ಕಾರದಲ್ಲಿ ಚೆನ್ನಾಗಿ ನಡೆಯುತ್ತಿದ್ದ ಸಕ್ಕರೆ ಕಾರ್ಖಾನೆಗಳನ್ನು ಪ್ರೈವೇಟ್ ಜನಗಳಿಗೆ ಮಾರಾಟ ಮಾಡಿದ್ದನ್ನು ನೋಡಿದ್ದೇವೆ. ಅರಸೀಕೆರೆಯಲ್ಲಿ ಒಂದು ಕಾರ್ಬನ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿ, ಅದು ಇನಾಗ್ಯುರೇಟ್ ಆದಮೇಲೆ ನಡೆಯಲೇ ಇಲ್ಲ. ಅದು ಹಾಗೆಯೇ ಬಿದ್ದಿದೆ. ಅದರಲ್ಲಿರತಕ್ಕ ಎಕ್ಯುಪ್‌ಮೆಂಟ್ಸ್ ಎಲ್ಲಿ ಹೋಯಿತೋ ಗೊತ್ತಿಲ್ಲ. ಆದ್ದರಿಂದ ದಯಮಾಡಿ ಕೋ-ಆಪರೇಟಿವ್ ಮಿನಿಸ್ಟರು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಫುಡ್ ಅಂಡ್ ಸಿವಿಲ್ ಸಪ್ಲೈ, ಇದು ನಮ್ಮ ದೇಶದಲ್ಲಿ ಪ್ರಾರಂಭವಾದಂದಿನಿಂದ ಹೇಗೆ ನಡೆಯುತ್ತಿದೆ ಎನ್ನುವುದರ ಬಗ್ಗೆ ಯಾವ ಮಾತನ್ನು ಉಪಯೋಗಿಸಬೇಕೋ ಗೊತ್ತಿಲ್ಲ. ಈ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ನಡೆಯತಕ್ಕ ಅನ್ಯಾಯ, ಅಧರ್ಮ. ಯಾವ ಇಲಾಖೆಯಲ್ಲೂ ನಡೆಯುವುದಿಲ್ಲ. ಆದರೆ ಅದರಲ್ಲಿ ನಡೆಯುತ್ತಿರತಕ್ಕಂಥಾದ್ದನ್ನು ನಾನು ನನ್ನ ಕಣ್ಣಿನಿಂದ ನೋಡಿದ್ದೇನೆ. ಕಾರ್ಬನ್ ಮಿಕ್ಸ್ ಆಗಿರತಕ್ಕಂಥ ಅಕ್ಕಿಯನ್ನು ವಿತರಣೆ ಮಾಡಿದಂಥವನು ನನಗೆ ಬಂದಿರುವುದು ಈ ತರಹದ ಅಕ್ಕಿ ಬೇಕಾದರೆ ತೆಗೆದುಕೊಳ್ಳಿ, ಬೇಡವಾದರೆ ಹೋಗಿ ಎಂದು ಹೇಳತಕ್ಕಂಥ ಒಂದು ಮನೋದಾರ್ಢ್ಯವನ್ನು ಈ ಡಿಪಾರ್ಟ್‌ಮೆಂಟ್‌ನಲ್ಲಿರುವವರು ಹೊಂದಿದ್ದಾರೆ. ಇದೂ ಕೂಡಾ ಸರಿ ಹೋಗಬೇಕು. ಕಾಲಾವಕಾಶ ಇಲ್ಲದಿರುವುದರಿಂದ ನಾನು ಅದರ ಮೇಲೆ ಡೀಟೆಲ್ ಆಗಿ ಡಿಸ್ಕಸ್ ಮಾಡುವುದಕ್ಕೆ ಹೋಗುವುದಿಲ್ಲ. ಬಡವರಿಗೆ ಗ್ರೀನ್ ಕಾರ್ಡ್‌ನಿಂದ ಆಗಿರತಕ್ಕಂಥ ಅನ್ಯಾಯವನ್ನು ಮೊದಲು ಸರಿ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೆ. ಎಸ್. ಆರ್. ಟಿ. ಸಿ. ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಬ್ಯಾಂಕ್ ನ್ಯಾಷನಲೈಸೇಷನ್ ಆದ್ದರಿಂದ ಈ ದೇಶದಲ್ಲಿ ಏನೊಂದು ಬದಲಾವಣೆ ಆಯಿತು ಎಂಬುದನ್ನು ಎಲ್ಲರೂ ಕೂಡ ತಿಳಿದುಕೊಳ್ಳಬೇಕು. ಅದೇ ರೀತಿ ಎಸೆನ್ಷಿಯಲ್ ಸರ್ವೀಸ್ ಎಂದು ಏನು

ಕೆ. ಎಸ್. ಆರ್. ಟಿ. ಸಿ. ಇದೆಯೋ ಅದು ಟೋಟಲ್ ನ್ಯಾಷನಲೈಸೇಷನ್ ಆಗಬೇಕು. ಯಾರು ಏನು ಬೇಕಾದರೂ ವಾದ ಮಾಡಲಿ, ಇದು ಆಗಬೇಕು, ಏತಕ್ಕೆ ಆಗಬೇಕೆಂದರೆ, ಕೆ.ಎಸ್.ಆರ್.ಟಿ.ಸಿ. ಅಸ್ತಿತ್ವಕ್ಕೆ ಬಂದಮೇಲೆ ಮಾತ್ರ ನಾವು ಹಳ್ಳಿಗಾಡಿನಲ್ಲಿ ಅಥವಾ ಪಟ್ಟಣಗಳಲ್ಲಿ ಒಳ್ಳೆಯ ಬಸ್‌ಗಳನ್ನು ನೋಡುತ್ತಿದ್ದೇವೆ, ಬಸ್‌ಸ್ಟ್ಯಾಂಡ್ ನೋಡುತ್ತಿದ್ದೇವೆ ಒಂದು ಲ್ಯಾವೆಟರಿ ನೋಡುತ್ತಿದ್ದೇವೆ, ಜನಗಳಿಗೆ ಕುಳಿತುಕೊಳ್ಳತಕ್ಕಂಥ ಷಲ್ಟರ್ ಸೌಲಭ್ಯ ಕಲ್ಪಿಸತಕ್ಕಂಥ ಒಂದು ಸದವಕಾಶ ದೊರಕಿದೆ ಜಾಬ್ ಸೆಕ್ಯೂರಿಟಿ ದೊರಕಿದೆ, ಲಕ್ಷಾಂತರ ಜನರು ಅದರ ನೆರಳಿನಲ್ಲಿ ವಾಸ ಮಾಡುತ್ತಿದ್ದಾರೆ. ಅದರಲ್ಲಿರುವ ಡಿಫೆಕ್ಟ್ ತೆಗೆದುಹಾಕುವ ವಿಚಾರ ಬೇರೆ. That is different. We should not mix both together. ಅದನ್ನು ಕ್ಲೀನ್ ಮಾಡತಕ್ಕದ್ದು ಮತ್ತು ಅದರ ಜವಾಬ್ದಾರಿ ಹೊತ್ತಿರತಕ್ಕಂಥವರು it is left of them. They are ment for it. It is not a Dharma that they are doing ಅಲ್ಲಿರತಕ್ಕಂಥ ಅವ್ಯವಹಾರ, ಅಲ್ಲಿ ಆಗತಕ್ಕಂಥ ಮೋಸವನ್ನು ತೆಗೆಯಿರಿ. ಆದರೆ ಟೋಟಲ್ ನ್ಯಾಷನಲೈಸೇಷನ್ ಆಗಬೇಕು ಇದು ಬಹಳ ಮುಖ್ಯ. ಇವತ್ತು ಡೆಮಾಕ್ರಸಿಯಲ್ಲಿ ಹೆಲ್ತ್ ಅಥವಾ ಎಜುಕೇಷನ್ ಇವುಗಳನ್ನು ಪ್ರೈವೆಟೈಸೇಷನ್ ಮಾಡಿದರೂ ಮಾಡಬಹುದು. ಆದರೆ not essential services like K. S. R. T. C. Total nationalisation. ಆಗಬೇಕೆಂಬ ವಾದ ಇಟ್ಟುಕೊಂಡಿದ್ದೇನೆ. ಅದರ ಬಗ್ಗೆ ಬಹಳಷ್ಟು ಹೇಳುವುದಕ್ಕೆ ನನಗೆ ಶಕ್ತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ನನ್ನ ಅಭಿಪ್ರಾಯದ ಪ್ರಕಾರ, ಯಾವುದೇ essential service is an earning proportion. ಆದುದರಿಂದ ಡೆಮಾಕ್ರಸಿಯಲ್ಲಿ ಅರ್ನಿಂಗ್ ಪ್ರಪೋರ್ಷನ್ ಇರತಕ್ಕ ಯಾವುದೇ ಒಂದು ಡಿಪಾರ್ಟ್‌ಮೆಂಟ್ ನ್ಯಾಷನಲೈಸ್ ಆಗಬೇಕೆ ಹೊರತು, ಅದು ಸಾಹುಕಾರರ ಹಿಡಿತಕ್ಕೆ ಹೋದರೆ ಮತ್ತೆ ನಮ್ಮ ಡೆಮಾಕ್ರಸಿಗೆ ಕೊಡಲಿಪೆಟ್ಟು ಬೀಳತಕ್ಕಂಥ ಒಂದು ಸಂದರ್ಭ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಈ ಸಂದರ್ಭದಲ್ಲಿ ಮಾತನಾಡಲು ಮಾನ್ಯ ಉಪಾಧ್ಯಕ್ಷರು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೂ ಕೂಡಾ I would like to express to the Chair one thing. ನಾನು ಬಂದಾಗಿನಿಂದಲೂ ಅಬ್‌ಸರ್ವ್ ಮಾಡುತ್ತಿದ್ದೇನೆ. ಯಾವುದಾದರೂ ಒಂದು ಸಬ್ಜೆಕ್ಟ್ ತೆಗೆದುಕೊಂಡರೆ ಒಂದೂವರೆ ಗಂಟೆ ಮಾತನಾಡುತ್ತಾರೆ. without any stuff. They must restrict themselves. ಇದರಿಂದ ನಮಗೆ ತೊಂದರೆಯಾಗುತ್ತದೆ. ಅನೇಕ ಜನಗಳಿಗೆ ತೊಂದರೆಯಾಗುತ್ತದೆ. ನಮಗೆ ೧೦–೧೫ ನಿಮಿಷ ಟೈಮ್ ಸಿಕ್ಕಿದರೂ ಸಾಕು ಮತ್ತು ಅದರಲ್ಲಿ ಎರಡು ಮೂರು ನಿಮಿಷ ಐದು ನಿಮಿಷ ಯಾರಾದರೂ ತೆಗೆದುಕೊಳ್ಳಲಿ. ಮಾನ್ಯ ಗುರುಪಾದಪ್ಪನವರು ೧೫ ನಿಮಿಷ ತೆಗೆದುಕೊಂಡರು. ಯಾರೋ ಒಬ್ಬರು ತೆಗೆದುಕೊಳ್ಳಲಿ. ಆದರೆ You must prescribe time limit. ನಮಗೆ ಅಟ್ ಲೀಸ್ಟ್ ಟೈಮಿಂಗ್ಸ್ ಕೊಡಬೇಕು ಇಷ್ಟು ಹೊತ್ತಿಗೆ ನೀನು ಮಾತನಾಡತಕ್ಕ ಸರದಿ ಬರುತ್ತದೆ ಎಂದು ಹೇಳಬೇಕು. ೪೦–೪೫ ವರ್ಷವಾದರೂ ಈ ಸ್ಥಿತಿಗೆ ನಾವು ಬರದೇ ಹೋದರೆ ಹೇಗೆ, ಎಷ್ಟು ಹೊತ್ತಿಗೆ ಸರದಿ ಬರುತ್ತದೆ ನಿಮಗೆ ಇಷ್ಟು ಟೈಮ್ ಪ್ರಿಸ್ಕ್ರೈಬ್ ಆಗಿದೆ ಎಂದು ಈ ಮನೆಯಲ್ಲಿ ಒದಗಿಸದೇ ಹೋದರೆ ಸರಿಯಲ್ಲ ಎಂಬ ಭಾವನೆ ನಾನು ಹೊಂದಿದ್ದೇನೆ. ಆದುದರಿಂದ ಮಾನ್ಯ ಅಧ್ಯಕ್ಷರು ಅದರ ಬಗ್ಗೆ ವಿಚಾರ ಮಾಡಬೇಕು. ಯಾರಾದರೂ ಒಬ್ಬ ಅಸೆಂಬ್ಲಿ ಮೆಂಬರ್‌ಗೆ ಮಾತನಾಡಲು ೩ ರಿಂದ ೪ ಗಂಟೆಯೊಳಗೆ ತಮ್ಮ ಸರದಿ ಬರುತ್ತದೆ ಎಂದು ಗೊತ್ತಾಗಬೇಕು. What is the time fixed for me? ...ಎಂದು ಗೊತ್ತಾಗಬೇಕು ಎಂದು ಈ ಸಂದರ್ಭದಲ್ಲಿ ರಿಕ್ವೆಸ್ಟ್ ಮಾಡಿಕೊಂಡು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಉಪಾಧ್ಯಕ್ಷಿಣಿಯವರ ಬೇಡಿಕೆ ಸಂಖ್ಯೆ ೨೩, ೨೬, ೩೦, ೫೫ ಮತ್ತು ೫೭ ಇವುಗಳನ್ನು ನಾನು ವಿರೋಧ ಮಾಡುತ್ತಾ ವಿಶೇಷವಾಗಿ ಸಹಕಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ಸಂಗತಿಗಳನ್ನು ತಮ್ಮ ಮೂಲಕ ಮಾನ್ಯ ಸಹಕಾರ ಸಚಿವರಲ್ಲಿ ವಿನಂತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಈ ಸಹಕಾರ ಸಂಘಗಳಿಗೂ, ವಿಶೇಷವಾಗಿ ಈ ರಾಜ್ಯದ ರೈತರಿಗೂ ತುಂಬಾ ಹೆಚ್ಚಿನ ಸಂಬಂಧ ಇದೆ. ಸಹಕಾರ ಸಂಘಗಳ ಮೂಲಕ ರೈತರ ಒಂದು ಕ್ರಾಂತಿಯಾಗುತ್ತದೆ, ಕೃಷಿ ಅಭಿವೃದ್ಧಿಯಾಗುತ್ತದೆ, ಕೃಷಿ ಕಾರ್ಮಿಕರ ಅಭಿವೃದ್ಧಿಯಾಗುತ್ತದೆ. ಇದರ ಮೂಲಕ ಈ ರಾಜ್ಯದ ರೈತರು, ಕೃಷಿ ಕಾರ್ಮಿಕರು ನೆಮ್ಮದಿಯಾಗಿ ಬಾಳಿ ಬದುಕುತ್ತಾರೆ ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೆವು. ಅದೇ ರೀತಿಯಲ್ಲಿ ಸಹಕಾರ ಸಂಘದಲ್ಲಿ ಒಂದು ಕ್ರಾಂತಿ ಆಗಬೇಕಾಗಿತ್ತು ಎನ್ನುವಂತಹ ಭಾವನೆಯನ್ನು ಈ ಸದನದ ಎಲ್ಲಾ ಮಾನ್ಯ ಸದಸ್ಯರು ಹೊಂದಿದ್ದರು. ಆದರೆ ಈ ಸಹಕಾರ ಕ್ಷೇತ್ರದಲ್ಲಿ ಹಿಡಿಯಷ್ಟು

ದೊಡ್ಡ ದೊಡ್ಡ ಜನರು ಅಧಿಕಾರದಲ್ಲಿದ್ದರು. ಬೆರಳೆಣಿಕೆಯಷ್ಟು ಕೆಲವೇ ಕೆಲವು ಸಹಕಾರ ಕ್ಷೇತ್ರಗಳನ್ನು ಬಿಟ್ಟರೆ ಉಳಿದ ಕಡೆ ವ್ಯಾಪಕವಾದ ಭ್ರಷ್ಟಾಚಾರದಿಂದ ಯಾವ ಒಂದು ಉದ್ದೇಶದಿಂದ ಈ ಒಂದು ಸಹಕಾರ ಕ್ಷೇತ್ರದ ಮೂಲಕ ರಾಜ್ಯದ ರೈತರ ಹಿತ ಕಾಪಾಡಬೇಕಾಗಿತ್ತೋ. ಎಲ್ಲಿ ಕ್ರಾಂತಿಯಾಗಬೇಕಾಗಿತ್ತೋ, ಅವರ ನೆಮ್ಮದಿಯ ಜೀವನಕ್ಕೆ ದಾರಿಯಾಗಬೇಕಾಗಿತ್ತೋ ಅದು ಇವತ್ತು ಆಗಲಿಲ್ಲ ಎನ್ನುವ ಮಾತನ್ನು ನಾನು ಬಹಳ ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ. ಬಹುಶಃ ಅದು ನನ್ನ ಸೌಭಾಗ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಕಳೆದ ೫-೬ ತಿಂಗಳುಗಳಿಂದ ಈ ರಾಜ್ಯದ ಉದ್ದಗಲಕ್ಕೂ ಓಡಾಟ ಮಾಡುತ್ತಾ ಹಳ್ಳಿಗಳಲ್ಲಿ ವಾಸಮಾಡತಕ್ಕಂಥ ರೈತರನ್ನು ಕೃಷಿ ಕಾರ್ಮಿಕರನ್ನು ಕೂಲಿಕಾರರನ್ನು ಹರಿಜನ ಗಿರಿಜನ ಬಂಧುಗಳ ನೈಜ ಸ್ಥಿತಿಯನ್ನು ತಿಳಿದುಕೊಳ್ಳುವಂತಹ ಒಂದು ಅವಕಾಶ ನನಗೆ ಸಿಕ್ಕಿತ್ತು. ಈ ಸದನದಲ್ಲಿ ಅನೇಕ ಬಾರಿ ಚರ್ಚೆ ಆಯಿತು. ಸ್ವಾತಂತ್ರ್ಯ ಬಂದ ನಂತರ ಮೊದಲ ಬಾರಿಗೆ ಕೇಂದ್ರ ಸರ್ಕಾರದ ಒಂದು ಹೊಸ ಯೋಜನೆಯಂತೆ ಈ ರಾಜ್ಯದ ರೈತರಿಗೆ ಏನು ಅನ್ಯಾಯವಾಯಿತು. ರೈತರು ಬೆಳೆದ ಬೆಳೆಗೆ ಸರಿಯಾದ ಯೋಗ್ಯವಾದ ಬೆಲೆ ಸಿಗದೆ ಅವನು ಸಾಲಗಾರನ ಮಗನಾಗಿದ್ದಾನೆ, ಅವನನ್ನು ಸಾಲದಿಂದ ಋಣಮುಕ್ತನನ್ನಾಗಿ ಮಾಡಿ ಅವನೂ ಸಹ ಈ ಸಮಾಜದಲ್ಲಿ ಗೌರವದಿಂದ, ನೆಮ್ಮದಿಯಿಂದ ವಿಶ್ವಾಸದಿಂದ ಕೃಷಿ ಕ್ಷೇತ್ರದಲ್ಲಿ ಕಾಲಿಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಂದು ನಾನು ಭಾವಿಸಿದ್ದೆ. ಆ ಒಂದು ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅತಿರಥ ಮಹಾರಥರು ಕೊಟ್ಟಂತಹ ಆಶ್ವಾಸನೆಯಂತೆ ರಾಜ್ಯ ಸರ್ಕಾರ ಸಹ ಆ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುತ್ತದೆ. ಅವನಿಗೆ ದೊಡ್ಡ ಉಪಕಾರ ಅಲ್ಲದಿದ್ದರೂ ಕೊನೆಯ ಪಕ್ಷ ಅವನು ಪಡೆದಂಥ ಬೆಳೆ ಸಾಲ ೧೦ ಸಾವಿರ ರೂಪಾಯಿಗಳವರೆಗೆ ಮನ್ನಾ ಆಗಿ ಸಣ್ಣಪುಟ್ಟ ರೈತರು ಮತ್ತೆ ಸಾಲ ಪಡೆದು ಕೃಷಿ ಕ್ಷೇತ್ರದಲ್ಲಿ ಒಂದು ಒಳ್ಳೆಯ ಸಾಧನೆಯನ್ನು ಮಾಡಬಹುದು ಎಂದು ನಾನು ಭಾವಿಸಿದ್ದೆ. ಈ ಸಂದರ್ಭದಲ್ಲಿ ಸನ್ಮಾನ್ಯ ಕೆ. ಎಚ್. ಪಾಟೀಲ್‌ರವರು ಹಿರಿಯ ಸಚಿವರು ಇದ್ದಾರೆ. ಅದೇ ರೀತಿ ಅಜೀಜ್ ಸೇಠ್‌ರವರು ಸಹ ಹಿರಿಯ ಸಚಿವರು ಇದ್ದಾರೆ. ಅವರಿಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಈ ರಾಜ್ಯದ ರೈತರ ದೌರ್ಭಾಗ್ಯವೋ ಏನೋ ಗೊತ್ತಿಲ್ಲ. ನಾವು ಈಗ ಜೂನ್ ಕೊನೆಯ ಭಾಗದಲ್ಲಿದ್ದೇವೆ. ಜುಲೈ ತಿಂಗಳಲ್ಲಿ ರಾಜ್ಯದ ಎಲ್ಲಾ ಕೆರೆ ಕಟ್ಟೆಗಳು ತುಂಬಿ ಹರಿಯಬೇಕಾಗಿತ್ತು. ಆದರೆ ಮಲೆನಾಡು ಭಾಗದಲ್ಲೂ ಸಹ ಇವತ್ತು ಮಳೆ ಇಲ್ಲ. ಚಿತ್ರದುರ್ಗ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕೆಂದು ಹೇಳುತ್ತಾರೆ ಬೆಳಗಾಂ, ಧಾರವಾಡ, ಶಿವಮೊಗ್ಗ, ಶಿಕಾರಿಪುರ, ಮಂಡ್ಯ, ಮದ್ದೂರು-ಇಂತಹ ಅನೇಕ ಭಾಗಗಳಲ್ಲಿ ಇವತ್ತಿಗೂ ಬಿತ್ತನೆ ಕೆಲಸ ಸಹ ಪ್ರಾರಂಭವಾಗಿಲ್ಲ. ಸನ್ಮಾನ್ಯ ಸಹಕಾರ ಸಚಿವರು ಈ ಬಗ್ಗೆ ಉತ್ತರ ಕೊಡುವಂತಹ ಸಂದರ್ಭದಲ್ಲಿ, ಕೊನೆಯ ಪಕ್ಷ, ಕಳೆದ ೫ ವರ್ಷಗಳಿಂದ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಈ ಒಂದು ಬಿತ್ತನೆ ಸಂದರ್ಭದಲ್ಲಿ ಎಷ್ಟು ಮಳೆ ಆಗಿದೆ, ಎಷ್ಟರ ಮಟ್ಟಿಗೆ ಬಿತ್ತನೆಯಾಗಿದೆ ಎನ್ನುವ ಅಂಕಿಅಂಶಗಳನ್ನು ಕೊಟ್ಟರೆ ಸ್ವಲ್ಪ ಅನುಕೂಲವಾಗಬಹುದು ಎಂದು ನಾನು ಭಾವಿಸಿದ್ದೇನೆ, ಇವತ್ತು ಮಳೆ ಬಾರದೆ, ಬಿತ್ತನೆ ಕೆಲಸ ಪ್ರಾರಂಭವಾಗದೆ ಬರಗಾಲದ ಛಾಯೆ ಎಲ್ಲಾ ಕಡೆ ಮೂಡಿದೆ. ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಹುಶಃ ಈ ಸಾರಿಯಾದರೂ ಬರಗಾಲದಿಂದ ರೈತ ಪಾರಾಗಿ, ಗೌರವದಿಂದ, ನೆಮ್ಮದಿಯಿಂದ ಜೀವನ ಮಾಡುವಂತಹ ಅವಕಾಶ ಸಿಗಬೇಕು ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಸದನದ ಮೂಲಕ ಈ ರಾಜ್ಯದ ರೈತರಲ್ಲಿ ನಾನು ಕ್ಷಮಾಪಣೆ ಕೇಳುವುದಕ್ಕೂ ಸಹ ಇಷ್ಟಪಡುತ್ತೇನೆ. ಯಾವುದೇ ಒಂದು ಪ್ರಚಾರಕ್ಕಾಗಿ ಹೊರಟ ವ್ಯಕ್ತಿ ನಾನಲ್ಲ. ರಾಜಕಾರಣ ಮಾಡಿ ರೈತರ ಪರ ಹೋರಾಟ ಮಾಡಿ ಚಳುವಳಿ ಮಾಡಿ ರಾಜಕೀಯ ಲಾಭ ಪಡೆದುಕೊಳ್ಳಲು ಹೊರಟಂತಹ ವ್ಯಕ್ತಿ ನಾನಲ್ಲ. ಒಬ್ಬ ಸಾಮಾನ್ಯ ರೈತನ ಮಗನಾಗಿ ಹೊಲ ಗದ್ದೆಗಳಲ್ಲಿ ಕೆಲಸ ಮಾಡಿ ಅದರ ಕಷ್ಟಕಾರ್ಪಣ್ಯಗಳು ನನಗೆ ಗೊತ್ತಿದ್ದರಿಂದ ಈ ರೀತಿ ರೈತರ ಆಶೀರ್ವಾದ ಪಡೆದು ಒಬ್ಬ ಶಾಸಕನಾಗಿದ್ದೇನೆ. ಈ ಸಂದರ್ಭದಲ್ಲಿ ಕಿಂಚಿತ್ತು ಅವರ ಸೇವೆ ಮಾಡುವುದಕ್ಕೆ ಆಗಬಹುದು. ಈ ಒಂದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ರೈತರಿಗೆ ತಲುಪಿಸಿ, ಅವರಿಗೆ ನೆಮ್ಮದಿಯ ಜೀವನಕ್ಕೆ ದಾರಿ ಮಾಡಿಕೊಡುವುದಕ್ಕೆ ಆಗಬಹುದು. ಅಕಸ್ಮಾತ್ ನಾಳೆ ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಮಾಡಿದರೆ ಬಡಪಾಯಿ ರೈತ ಕಟ್ಟಿದಂತಹ ಸಾಲ ಪುನಃ ಮರುಪಾವತಿ ಆಗುವುದಿಲ್ಲ. ಅವನು ದನಕರುಗಳನ್ನು ಮಾರಾಟ ಮಾಡಿ ಅವನಲ್ಲಿರುವಂತಹ ಬೆಂಡೋಲೆ, ತಾಳಿ ಮಾರಿ ಸಾಲ ಕಟ್ಟುವಂತಹ ಪರಿಸ್ಥಿತಿ ನಮ್ಮ ರೈತನಿಗೆ ಬರಬಾರದು ಎಂಬ ದೃಷ್ಟಿಯಿಂದ ಕೊನೆಪಕ್ಷ ೧೦ ಸಾವಿರ ರೂಪಾಯಿಗಳವರೆಗೆ ಪಡೆದಿರುವಂಥ ಬಡರೈತರು ಸಾಲವನ್ನು ವಾಪಸ್ ಕಟ್ಟಬೇಡಿ, ಖಂಡಿತವಾಗಿ ಸಾಲ ಮನ್ನಾ ಕಾರ್ಯರೂಪಕ್ಕೆ ಬರುತ್ತದೆಂದು ಈ ರಾಜ್ಯದ ಉದ್ದಗಲಕ್ಕೂ ಕಳೆದ ೫ ತಿಂಗಳುಗಳಿಂದ ಸತತವಾಗಿ ಹೋರಾಟ ಮಾಡಿದೆ. ಲಕ್ಷಾಂತರ ರೈತರು

ಬಂದು ನಮ್ಮ ಸಾಲ ಮನ್ನಾ ಮಾಡುತ್ತಾರೆಂದು ತುಂಬಾ ಆಸೆಯಿಂದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳನ್ನು ನೋಡುತ್ತಿದ್ದರು. ನಾನು ಸನ್ಮಾನ್ಯ ಸಹಕಾರ ಸಚಿವರಲ್ಲಿ ವಿನಂತಿ ಮಾಡುವುದಿಷ್ಟೆ. ತಾವು ಅಂಕಿ ಅಂಶಗಳನ್ನು ಕೊಡುವಂತಹ ಸಂದರ್ಭದಲ್ಲಿ ದಯಮಾಡಿ ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು, ೧೯೮೯-೯೦ನೇ ಸಾಲಿನಲ್ಲಿ ತಾವು ೯೧ ಕೋಟಿ ೮೧ ಲಕ್ಷ ರೂಪಾಯಿಗಳ ಸಾಲ ಕೊಟ್ಟಿದ್ದೀರಿ. ಈಗ ೨೫ ಕೋಟಿ ೫೦ ಲಕ್ಷ ರೂಪಾಯಿಗಳು ವಸೂಲಾಗಿದೆ, ಅಂದರೆ ೧೩.೭೯ ಪರ್ಸೆಂಟ್ ವಸೂಲಾಗಿದೆ. ಈ ಅಂಕಿ ಅಂಶಗಳನ್ನು ತಾವು ಕೊಟ್ಟಿದ್ದೀರಿ. ಇದು ಅಲ್ಪಾವಧಿ ಸಾಲವಾಯಿತು. ಇನ್ನು ಮಧ್ಯಮಾವಧಿ ಸಾಲದಲ್ಲಿ ೩೯.೪೪ ಲಕ್ಷ ರೂಪಾಯಿಗಳಲ್ಲಿ ೨.೪ ಲಕ್ಷ ರೂಪಾಯಿಗಳು ಮಾತ್ರ ವಸೂಲಾಗಿದೆ. ಅಂದರೆ ೬.೮ ಪರ್ಸೆಂಟ್ ವಸೂಲಾಗಿದೆ. ಈ ಅಂಕಿ ಅಂಶಗಳನ್ನು ತಾವೇ ಕೊಟ್ಟಿದ್ದೀರಿ. ತಮಗೆ ಗೊತ್ತಿದೆ, ಈ ಸಾರಿ ರೈತ ಇಷ್ಟೊಂದು ಕಡಿಮೆ ಪ್ರಮಾಣದಲ್ಲಿ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಕಾರಣ ಏನೆಂದು. ಹೇಗೋ ಸಾಲ ಸೋಲ ಮಾಡಿ ಕಟ್ಟುತ್ತಿದ್ದ ರೈತ ಈ ಸಾರಿ ಸಾಲ ಮನ್ನಾ ಆಗಬಹುದೆನ್ನುವ ನಂಬಿಕೆಯಿಂದ, ವಿಶ್ವಾಸದಿಂದ ಸಾಲವನ್ನು ಮರುಪಾವತಿ ಮಾಡಲಿಲ್ಲ. ನಾನು ಇವತ್ತು ಯೋಚನೆ ಮಾಡುತ್ತಿದ್ದೇನೆ, ಈ ಪಾಪಕ್ಕೆ ನಾವು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾ? ಕಳೆದ ಒಂದು ವಾರದಿಂದ ನನ್ನ ಮನಸ್ಸಿಗೆ ಸಮಾಧಾನ ಇಲ್ಲ. ಶಾಸನ ಸಭೆಯಲ್ಲಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆನ್ನುವ ಉತ್ಸಾಹ ನಾನು ಕಳೆದುಕೊಳ್ಳುತ್ತಿದ್ದೇನೆ. ಇದಕ್ಕೆ ಕಾರಣ ಇಷ್ಟೆ. ನಾನು ರಾಜ್ಯದ ಉದ್ದಗಲಕ್ಕೂ ಓಡಾಟ ಮಾಡಿದ ಮೇಲೆ ಸಾವಿರಾರು ಕಡು ಬಡವರಿಂದ ಪತ್ರಗಳು ಏನು ಬರುತ್ತಿವೆ, ಮಾನ್ಯ ಯಡಿಯೂರಪ್ಪನವರೇ, ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಆಶ್ವಾಸನೆ ಕೊಟ್ಟಿದ್ರಿ, ಹೋರಾಟ ಮಾಡುತ್ತೇನೆಂದು ಹೇಳಿದ್ರೀ, ಅದಕ್ಕೆ ನಾವು ನಿಮ್ಮ ಹಿಂದೆ ಬಂದೆವು, ನಾವು ನಿಮ್ಮಿಂದಿಯಿಂದ ಜೀವನ ಮಾಡಬಹುದೆಂದು ಅಂದುಕೊಂಡಿದ್ದೆವು. ೧೯೮೯-೯೦ನೇ ಸಾಲಿನಲ್ಲಿ ಸಾವಿರ ಎರಡು ಸಾವಿರ ರೂಪಾಯಿ ಏನು ಬೆಳೆ ಸಾಲವನ್ನು ತೆಗೆದುಕೊಂಡಿದ್ದೆವೋ ಅದೂ ಸಹಾ ಮನ್ನಾ ಆಗುತ್ತದೋ ಇಲ್ಲವೋ ಎಂದು ಭಯ ಬಂದಿದೆ. ಈಗಾಗಲೇ ಸಹಕಾರ ಸಂಘಗಳಿಂದ, ಬ್ಯಾಂಕುಗಳಿಂದ ನೋಟೀಸ್‌ಗಳು ಬರುತ್ತಿವೆ. ಮುಂದೆ ನಮ್ಮ ಗತಿ ಏನೆಂದು ಅವರು ಪತ್ರಗಳನ್ನು ಬರೆಯುತ್ತಿದ್ದಾರೆ. ಅದಕ್ಕೆ ಉತ್ತರವನ್ನು ಕೊಡುವ ಸ್ಥಿತಿಯಲ್ಲಿ ಇವತ್ತು ನಾವು ಇಲ್ಲ. ನಾನು ಸಹಕಾರ ಸಚಿವರಲ್ಲಿ ಒತ್ತಾಯ ಮಾಡುವುದಿಷ್ಟೇ, ಇವತ್ತು ರೈತನ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕರ್ನಾಟಕ ಸರ್ಕಾರದ ಒಂದು ಪ್ರಕಟಣೆಯನ್ನು ನಾನು ತಮ್ಮ ಕಡೆಗೆ ಕಳುಹಿಸಿಕೊಡುತ್ತೇನೆ. ೧೯೮೩ ರಿಂದ ೧೯೮೭ರ ಅವಧಿಯಲ್ಲಿ ರೈತನಿಗೆ ಆಗಿರುವಂಥ ಬೆಳೆ ನಷ್ಟ ೧೧೯೮ ಕೋಟಿ ರೂಪಾಯಿಗಳು ಎಂದು ಸರ್ಕಾರದ ಪ್ರಕಟಣೆಯಲ್ಲೇ ತಿಳಿಸಲಾಗಿದೆ. ಏತಕ್ಕೋಸ್ಕರ ೧೯೮೩ ರಿಂದ ೮೭ ರವರೆಗೆ ೧೧೯೮ ಕೋಟಿ ರೂಪಾಯಿಗಳ ರೈತನ ಬೆಳೆ ನಷ್ಟವಾಯಿತು ? ಬಿತ್ತನೆ ಮಾಡಲಿಲ್ಲವೇ ? ಗೊಬ್ಬರ ಹಾಕಲಿಲ್ಲವೆ ? ಕಳೆ ಕೀಳಲಿಲ್ಲವೆ ? ಕೆಲಸ ಮಾಡಲಿಲ್ಲವೆ ? ಈ ರೀತಿ ಮಾಡಿದ ಮೇಲೂ ಸಹಾ ಅತಿವೃಷ್ಟಿಯಿಂದ, ಅನಾವೃಷ್ಟಿಯಿಂದ ರೈತನಿಗೆ ನಷ್ಟವಾಯಿತು. ರೈತನಿಗೆ ಯೋಗ್ಯವಾದ ಬಿತ್ತನೆ ಬೀಜ ಗೊಬ್ಬರಗಳು ಸಿಕ್ಕಲಿಲ್ಲ. ರಾಸಾಯನಿಕ ಗೊಬ್ಬರದ ಬೆಲೆ ಗಗನಕ್ಕೇರಿದೆ. ಕ್ರಿಮಿನಾಶಕಗಳ ಬೆಲೆ ಗಗನಕ್ಕೇರುತ್ತಿದೆ. ಕೃಷಿಗೆ ಅವಶ್ಯಕತೆ ಇರತಕ್ಕಂಥ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಕ್ರಿಮಿನಾಶಕಗಳನ್ನು ಕೊಂಡು ಔಷಧ ಸಿಂಪಡಿಸುವ ಸ್ಥಿತಿಯಲ್ಲಿ ರೈತರುಗಳಿಲ್ಲ. ಹೀಗಾಗಿ ಬರಗಾಲಕ್ಕೆ, ಅತಿವೃಷ್ಟಿಗೆ ಸಿಕ್ಕಿ, ರೈತರು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಸಿಗದೆ ಅವರು ತತ್ತರಿಸಿ ಹೋಗುತ್ತಿರುವಂಥ ಈ ಸಂದರ್ಭದಲ್ಲಿ ಅವರಿಗೆ ಸರ್ಕಾರ ಸಹಾಯ ಮಾಡಬೇಕು. ರೈತರು ತೆಗೆದುಕೊಂಡಿರತಕ್ಕ ಸಾಲವನ್ನು ವಾಪಸ್ ಕೊಡಬೇಡಿ ಎಂದು ಹೇಳಿ, ಆ ರೀತಿಯ ಪ್ರವೃತ್ತಿಯನ್ನು ಬೆಳೆಸಬೇಕೆಂದು ನನಗೆ ಎಂದೂ ಆಸೆ ಇಲ್ಲ. ಅಥವಾ ದೊಡ್ಡ ಸಾಧನೆ ಮಾಡುತ್ತಿದ್ದೇವೆ, ರೈತನ ಸಾಲ ಮನ್ನಾ ಮಾಡಿಸುತ್ತಿದ್ದೇವೆ, ಸಾಲ ಮನ್ನಾ ಆಗಬೇಕು. ಈ ತರಹ ಕೂಗನ್ನು ಎಬ್ಬಿಸಬೇಕೆನ್ನುವ ಇಚ್ಛೆಯೂ ನನಗಿಲ್ಲ. ಇದು ಅಗೌರವ ನಾವು ತಲೆ ತಗ್ಗಿಸುವಂಥ ಸಂಗತಿ. ಹಗಲು ರಾತ್ರಿ ದುಡಿದಂಥ ರೈತ. ಈ ದೇಶದ ಜನತೆಗೆ ಅನ್ನ ಕೊಡುವಂಥ ರೈತ ಇವತ್ತು ಸಾಲವನ್ನು ಕೊಡುವುದಕ್ಕೆ ಆಗದೇ, ಇರುವಂಥ ಒಂದು ದುಸ್ಥಿತಿಗೆ ಬಂದಿರುವ ಈ ಸಂದರ್ಭದಲ್ಲಿ ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ. ಕೇಂದ್ರ ಸರ್ಕಾರದ ಈ ಯೋಜನೆ ಪ್ರಕಾರ ನಮ್ಮ ರಾಜ್ಯದಲ್ಲಿ ಎಷ್ಟು ಜನ ರೈತರಿಗೆ ಅನುಕೂಲವಾಗುತ್ತದೆ ? ನಮ್ಮ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಎಷ್ಟು ಕೋಟಿ ರೂಪಾಯಿಗಳ ಭಾರ ಬೀಳುತ್ತದೆ ? ಇದರಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ನೆರವು ಬರುತ್ತದೆ ? ತಾವು ದಯಮಾಡಿ ಈ ಅಂಕಿ ಅಂಶಗಳನ್ನು ಕೊಡಬೇಕಾಗುತ್ತದೆ. ನನಗೆ ಗೊತ್ತಿದೆ. ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿ ಅನೇಕ ಸಂದರ್ಭಗಳಲ್ಲಿ ನಡೆದುಕೊಳ್ಳತಕ್ಕಂಥ ರೀತಿ, ಅವರು ಮಾಡುತ್ತಿರುವ ಕಾರ್ಯಕ್ರಮಗಳನು

ನೋಡಿದಾಗ, ರಾಜ್ಯದ ಜನತೆಗೆ ಮುಂದೆ ಒಳ್ಳೆಯ ದಿವಸಗಳು ಬರುತ್ತಿವೆ ಎನ್ನುವ ಭಾವನೆ ಬರುತ್ತಿದೆ. ಆದರೆ ಈ ರಾಜ್ಯದ ರೈತನ ಪ್ರಶ್ನೆ ಬಂದಾಗ, ಏಕೆ ಈ ಸರ್ಕಾರ ರೀತಿ ನಡೆದುಕೊಳ್ಳುತ್ತದೆ ಎಂದು ಅನಿಸುತ್ತದೆ. ನಾವು ರೈತರ ಬಗ್ಗೆ ಚರ್ಚೆ ಮಾಡುತ್ತಿರುವುದು ಬಹುಶಃ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗುತ್ತಿದೆಯೇ? ಏಕೆ ಈ ರೈತನ ಬಗ್ಗೆ ಆಕ್ರೋಶ ? ಸರ್ಕಾರದ ಬದಲಾವಣೆಯನ್ನು ತಂದ ಈ ರಾಜ್ಯದ ರೈತ, ಕೂಲಿ ಕಾರ್ಮಿಕ, ಮುಂದೆ ಏನೋ ಒಳ್ಳೆಯ ದಿವಸಗಳನ್ನು ಕಾಣಬಹುದೆಂದು ಬಹುಮತವನ್ನು ತಮಗೆ ಕೊಟ್ಟಿದ್ದಾನೆ. ಕೇಂದ್ರ ಸರ್ಕಾರವು ಅಲ್ಲಿ ಕುಳಿತುಕೊಂಡು ರೈತರ ಪರವಾದ ಕೆಲವು ಯೋಜನೆಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದಾಗ ನಾನು ಕಳೆದ ೩ ತಿಂಗಳುಗಳಿಂದ ಈ ರೀತಿ ಕೂಗುವುದಕ್ಕೆ ಕಾರಣ ಏನು ಸ್ವಾಮಿ, ಪ್ರಚಾರಕ್ಕಲ್ಲ. ಒಂದು ಯೋಜನೆ ಬರುವುದಕ್ಕೆ ಮುಂಚೆ ಸಂಬಂಧಪಟ್ಟ ಮಂತ್ರಿಗಳು ಕೇಂದ್ರ ಸರ್ಕಾರದ ಮನವೊಲಿಸಿ ಈ ರಾಜ್ಯದ ರೈತ ಏನು ಕಳೆದ ೫-೬ ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿ ಕಷ್ಟಕಾರ್ಪಣ್ಯಗಳ ಮಧ್ಯೆ ಸಾಯುತ್ತಿದ್ದಾನೆ, ಈ ಪರಿಸ್ಥಿತಿ ಇದೆಯೆಂಬ ಅರಿವನ್ನು ಅವರಲ್ಲಿ ಮೂಡಿಸಿ, ಕೇಂದ್ರ ಸರ್ಕಾರದ ಯೋಜನೆಯಿಂದ ಈ ರಾಜ್ಯದ ರೈತರುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸುವುದರಲ್ಲಿ ಯಶಸ್ವಿಯಾಗಬೇಕು ಎಂದು ಒತ್ತಡ ತರಬೇಕೆನ್ನುವುದಕ್ಕೋಸ್ಕರ ಕಳೆದ ೫-೬ ತಿಂಗಳುಗಳಿಂದ ನಾವು ಹೋರಾಟ ಮಾಡಿದೆವು. ಆದರೆ ಫಲ ಸಿಗಲಿಲ್ಲ. ಆ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಇದರ ಪರಿಣಾಮದಿಂದ, ಕೇಂದ್ರ ಸರ್ಕಾರದ ಯೋಜನೆಯಿಂದ ಈ ರಾಜ್ಯದಲ್ಲಿರುವಂಥ ಕಡು ಬಡವ ರೈತರುಗಳಲ್ಲಿ ನೂರಕ್ಕೆ ೫ ಜನರಿಗೂ ಲಾಭವಾಗುತ್ತಿಲ್ಲ. ೫೦ ಕೋಟಿ ರೂಪಾಯಿ ಕೂಡಾ ನಮ್ಮ ಸರ್ಕಾರದ ಬೊಕ್ಕಸದ ಮೇಲೆ ಭಾರ ಬೀಳುತ್ತಿಲ್ಲ. ಈ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದ ರೈತನಿಗೆ ಇರುವ ಸಂದರ್ಭದಲ್ಲಿ ನಾನು ತಮಗೆ ಒತ್ತಾಯ ಮಾಡುತ್ತೇನೆ. ತಮಗೆ ಬಹುಮತ ಇರಬಹುದು, ೧೮೦ ಜನ ತಾವು ಇರಬಹುದು. ಆದರೆ ಜನ ಇಷ್ಟೊಂದು ನಿರೀಕ್ಷೆ ಮಾಡಿ, ನಿಮಗೆ ಅಧಿಕಾರ ಕೊಟ್ಟಾಗ ಸುಮಾರು ಎರಡೂ ಮುಕ್ಕಾಲು ಕೋಟಿ ರೈತರು ಮತ್ತು ಕೃಷಿ ಕಾರ್ಮಿಕರು ನಿಮ್ಮನ್ನು ನಂಬಿಕೊಂಡಿರುವಂಥ ಈ ಸಂದರ್ಭದಲ್ಲಿ ಅವರ ನೆರವಿಗೆ ನೀವು ಬರುವಂಥಾದ್ದು ಅತ್ಯಂತ ಅಗತ್ಯ ಇದೆ. ನಾನು ಹೇಳುತ್ತೇನೆ. ನಿಮ್ಮ ಸರ್ಕಾರ ೫ ವರ್ಷ ಪೂರ್ಣ ಅಧಿಕಾರದಲ್ಲಿ ಮುಂದುವರಿಯಬೇಕು. ನಿಮಗೆ ಬಹುಮತ ಇದೆ, ಅದನ್ನು ನೀವು ಉಳಿಸಿಕೊಳ್ಳಿ. ಗ್ರಾಮೀಣ ಜನತೆಯ ಹಿತದ ಬಗ್ಗೆ ತಾವು ಯೋಚನೆ ಮಾಡಿ. ರೈತನ ನೆರವಿಗೆ ಬನ್ನಿ. ನಾನು ಇದನ್ನು ಪದೇ ಪದೇ ಸದನದಲ್ಲಿ ಹೇಳಿದ್ದೇನೆ. ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ ಅದು ಜನತೆಯ ಸರ್ಕಾರ. ಜನತೆಯ ಪರವಾಗಿ ಇರತಕ್ಕಂಥ ಸರಕಾರವು ಜನರ ಪರವಾದ ಅವರ ಏಳಿಗೆಗೆ ಪೂರಕವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅಂಥ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸಬೇಕು. ಲೋಪದೋಷಗಳನ್ನು ಕಂಡ ಕೂಡಲೇ ನಾವು ವಿರೋಧಿ ಪಕ್ಷದವರಾಗಿ ತಮ್ಮ ಮೇಲೆ ಒತ್ತಡವನ್ನು ತರಬೇಕಾಗುತ್ತದೆ. ವಿವಿಧ ಇಲಾಖೆಗಳಲ್ಲಿ ಹಣ ಸೋರಿ ಹೋಗುವ ವಿಚಾರದಲ್ಲಿ ತಾವುಗಳೆಲ್ಲರೂ ಒಳ್ಳೆಯ ಪ್ರಯತ್ನಪೂರ್ವಕ ಕ್ರಮಗಳನ್ನು ಹಾಕಿಕೊಂಡು ಅದನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದೀರಿ. ಇಂಥ ಸಂದರ್ಭದಲ್ಲಿ ಇವತ್ತು ೧೯೮೯-೯೦ರ ಸಾಲಿನಲ್ಲಿ ನೀವು ಕೊಟ್ಟಿರುವಂಥ ಅಲ್ಪಾವಧಿ ಸಾಲ ಕೇವಲ ೧೯೧ ಕೋಟಿ ೮೧ ಲಕ್ಷ ರೂಪಾಯಿಗಳು. ಇದು ಬೆಳೆ ಸಾಲ. ಮಧ್ಯಮಾವಧಿ ಸಾಲ ೩೯ ಕೋಟಿ ೪೪ ಲಕ್ಷ ರೂಪಾಯಿಗಳು. ಈಗಾಗಲೇ ಎರಡೂ ಸೇರಿಸಿ ೧೯.೩೭ ಪರ್ಸೆಂಟ್‌ನಷ್ಟು ವಸೂಲಿ ಆಗಿದೆ. ಹೀಗಿರಬೇಕಾದರೆ ಉಳಿದಂಥ ರೈತರ ೧೦ ಸಾವಿರದವರೆಗಿನ ಎಲ್ಲಾ ಸಾಲವನ್ನು ಮನ್ನಾ ಮಾಡಿದರೂ ಸಹ ನಿಮ್ಮ ಸರಕಾರದ ಬೊಕ್ಕಸಕ್ಕೆ ೭೫-೮೦ ಕೋಟಿ ರೂಪಾಯಿಗಳ ಮೇಲೆ ಭಾರ ಬರುವುದಿಲ್ಲ. ಅದನ್ನು ಕೂಡ ಕೇಂದ್ರ ಸರಕಾರದವರು ರಿಸರ್ವ್ ಬ್ಯಾಂಕ್‌ನ ಮೂಲಕ ಬೇರೆ ಬೇರೆ ರೂಪದಲ್ಲಿ ಸಹಾಯ ಮಾಡುವುದಕ್ಕೆ ಮುಂದೆ ಬಂದಿರುವಂಥ ಈ ಸಂದರ್ಭದಲ್ಲಿ ಕೇಂದ್ರ ಸರಕಾರದ ಕಾರ್ಯಕ್ರಮವನ್ನು ಉಪಯೋಗಿಸಿಕೊಂಡು ರಾಜ್ಯದ ರೈತರಿಗೆ ಅನುಕೂಲವಾಗುವಂಥ ಒಂದು ಕಾರ್ಯವನ್ನು ಮಾಡಬೇಕೆಂದು ಮಾನ್ಯ ಸಹಕಾರ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸೂಕ್ತ ಯೋಚನೆ ಮಾಡಿ ರೈತರ ನೆರವಿಗೆ ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಹಿಂದೆ ಇದ್ದಂಥ ಸರಕಾರ ಇಂಟ್ರೆಸ್ಟ್ ಸಬ್ಸಿಡಿಯನ್ನು ಕೊಡುತ್ತಾ ಇತ್ತು.

ಶ್ರೀ ಕೆ. ಹೆಚ್. ಹನುಮೇಗೌಡ.—ಕೇಂದ್ರ ಸರಕಾರದವರು ಈಗ ರೂಪಿಸಿರತಕ್ಕಂಥ ಸಾಲ ಮನ್ನಾ ಯೋಜನೆಯ ಪ್ರಕಾರ ಪೂರ್ಣವಾಗಿ ನಡೆದುಕೊಂಡರೆ, ರಾಜ್ಯದ ರೈತರಿಗೆ ಅವರಲ್ಲೂ ಕಡು ಬಡವರು ಯಾರಿದ್ದಾರೆ ಅವರಿಗೆ ಯಾವ ವಿಧವಾದ ಸಹಾಯವೂ ಆಗುವುದಿಲ್ಲ. ೫೦ ಕೋಟಿ ರೂಪಾಯಿಗಳ ಭಾರವೂ ಕೂಡ ಈ ಸರ್ಕಾರದ ಮೇಲೆ ಬೀಳುವುದಿಲ್ಲ ಎಂದು ತಾವು ಹೇಳಿದಿರಿ. ಆದರೆ ಮಾನ್ಯ ಮುಖ್ಯಮಂತ್ರಿಯವರು ಸುಮಾರು ೨೫೦ ಕೋಟಿ ರೂಪಾಯಿಗಳ ಭಾರ ಬೀಳುತ್ತದೆ ಎಂದು

ಹೇಳಿದರು. ತಾವುಗಳು ೫೦ ಕೋಟಿಗಿಂತ ಹೆಚ್ಚಿಗೆ ಆಗುವುದಿಲ್ಲ ಎಂದು ಹೇಳಿದಿರಿ. ಇದನ್ನು ಸ್ವಲ್ಪ ವಿವರಿಸುತ್ತೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೇಂದ್ರ ಸರಕಾರದ ಯೋಜನೆಯ ಪ್ರಕಾರ ೨–೧೦–೮೯ಕ್ಕೆ ಯಾರು ಡಿಫಾಲ್ಟರ್ ಆಗಿರುತ್ತಾನೆ ಅವನಿಗೆ ಇದು ಅನ್ವಯವಾಗುತ್ತದೆ. ಅಂದರೆ ೧೯೮೯–೯೦ನೇ ಸಾಲಿನಲ್ಲಿ ಹೋದ ವರ್ಷ ಚಾಲ್ತಿ ಸಾಲ ೫೦೦ ರೂಪಾಯಿಗಳಿಂದ ೧೦ ಸಾವಿರದವರೆಗೆ ಪಡೆದಿದ್ದರೂ ಅವನು ೨–೧೦–೮೯ಕ್ಕೆ ಮುಂಚೆ ಸುಸ್ತಿದಾರ ಆಗುವುದಿಲ್ಲ. ಇದರಿಂದ ಪ್ರಾಮಾಣಿಕವಾಗಿ ಯಾರು ಋಣವನ್ನು ತೀರಿಸಿ ಬದುಕಬೇಕು. ಬಾಳಬೇಕೆಂದಿದ್ದಾನೊ ಅಂತಹ ಒಬ್ಬನಿಗೂ ಸಹ ಈ ಸೌಲಭ್ಯದಿಂದ ಲಾಭ ಆಗುವುದಿಲ್ಲ. ಅಂತೆಯೇ ನಮ್ಮ ರಾಜ್ಯದಲ್ಲಿ ಆಣೆವಾರು ಪಹಣಿ ಬರೆಯುವಂಥ ಪದ್ಧತಿಇಲ್ಲ. ಅನೇಕ ಕಡೆಗಳಲ್ಲಿ ಇದು ಇಲ್ಲ. ಪಹಣಿಗಳು ಇನ್ನೂ ಖಾಲಿ ಇವೆ ಮಾನ್ಯ ಅಜೀಜ್ ಸೇಠ್‌ರವರೆ ನಾಳೆ ನಿಮಗೆ ಒಂದು ಸಾವಿರ ಪಹಣಿಗಳನ್ನು ಕೊಡುತ್ತೇನೆ. ಎರಡನೆಯದು ಪಹಣಿ ಬರೆಯಬೇಕಾದರೆ ೮ ಆಣೆಯೊಳಗೆ ಬೆಳೆಯಾಗಿದ್ದರೆ ಮಾತ್ರ ಇದು ಅನ್ವಯವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ಹೇಳಿದಂತೆ ಕೇಂದ್ರ–ರಾಜ್ಯ ಸರಕಾರಗಳು ೨೫೦–೨೬೦ ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಸಿದ್ಧರಿದ್ದರೆ ನನಗೆ ಧೈರ್ಯವಿದೆ. ಅಂಕಿ ಅಂಶಗಳನ್ನು ನಾನು ಕೊಡುತ್ತೇನೆ. ೧೯೮೯–೯೦ನೇ ಸಾಲಿನ ೧೦ ಸಾವಿರದ ವರೆಗಿನ ಎಲ್ಲ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ರಾಜ್ಯ ಸರಕಾರ ೧೫೦ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧವಾದರೆ, ಕೇಂದ್ರ ಸರಕಾರದ ೧೫೦ ಕೋಟಿ ರೂಪಾಯಿಗನ್ನು ಕೊಡುವುದಕ್ಕೆ ಸಿದ್ಧವಾದರೆ, ಈ ೩೦೦ ಕೋಟಿ ರೂ. ಗಳಿಂದ ಈ ರಾಜ್ಯದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ಇರುವಂಥ ಎಲ್ಲ ರೈತರ ಸಾಲ ಮನ್ನಾ ಮಾಡುವುದಕ್ಕೆ ಸಾಧ್ಯವಿದೆ. ಸಂಬಂಧಪಟ್ಟ ಎಲ್ಲಾ ಅಂಕಿಅಂಶಗಳನ್ನು ತಾವು ತರಿಸಿ ನೋಡಬಹುದು. ಈ ಸದನ ಪ್ರಾರಂಭವಾದಾಗಿನಿಂದ ಸಾಲಗಾರರ ಸ್ಥಿತಿಗತಿಗಳ ಬಗ್ಗೆ ಪಟ್ಟಿ ಮಾಡಿ ಎಂದು ಒತ್ತಾಯ ಹಾಕುತ್ತಾ ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ಕಳುಹಿಸಿ ಎಂದು ಹೇಳಿದ್ದ. ಬ್ಯಾಂಕ್‌ಗಳಲ್ಲಿ ಸಾಲ ಪಡೆದವರು ಈಗ ಕಟ್ಟಲೇಬೇಕು.

೪–೫೦ ಪಿ. ಎಂ.

ಕಟ್ಟಿಲ್ಲವಾದರೆ ಯಾರ ಜಮೀನು ತೆಗೆದುಕೊಂಡಿರುತ್ತಾರೊ ಅವರಿಂದ ಬಡ್ಡಿ ಸಮೇತ ಅವರು ಮುಲಾಜಿಲ್ಲದೆ ವಸೂಲಾತಿ ಮಾಡುವ ಕ್ರಮ ತೆಗೆದುಕೊಳ್ಳುತ್ತಾರೆ. ಹೀಗಾಗಿ ಬ್ಯಾಂಕಿನ ಸಾಲ ಪಡೆದಿರುವ ಕಡು ಬಡವರಿಗಾಗಲಿ ಸಹಕಾರಿ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿರುವ ರೈತನಿಗಾಗಲಿ ಸಾಲ ಮನ್ನಾದಿಂದ ಉಪಯೋಗವಾಗುವುದಿಲ್ಲ. ಯಾರು ಡಿಫಾಲ್ಟರ್ ಆಗಿದ್ದಾರೋ ಅಂತಹವರಲ್ಲಿ ಶೇಕಡ ೫ ಜನರಿಗೆ ಇದರ ಫಲ ಸಿಗಬಹುದು ಅಷ್ಟೆ. ನಮ್ಮ ಸರ್ಕಾರಕ್ಕೆ ೨೫ ಕೋಟಿ ರೂಪಾಯಿಗಳ ಹೊರೆ ಬೀಳುತ್ತದೆ ಎಂದಿಟ್ಟುಕೊಳ್ಳಿ, ಅದು ದೊಡ್ಡ ಭಾರವಲ್ಲ. ಹಾಗಿಯೇ ಕೇಂದ್ರದವರೂ ಕೂಡ ಯೋಜನೆ ರೂಪಿಸುವಾಗ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳನ್ನು ಸಂಬಂಧಪಟ್ಟ ಸಚಿವರನ್ನು ಕರೆಸಿಕೊಂಡು ಎಷ್ಟರಮಟ್ಟಿನ ಸೌಲಭ್ಯ ಕೊಟ್ಟರೆ ಯಾವ ರೈತರಿಗೆ ಅನುಕೂಲವಾಗುತ್ತದೆ ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕಾಗಿತ್ತು, ಅಂಕಿ ಅಂಶಗಳನ್ನು ತರಿಸಿಕೊಳ್ಳಬೇಕಾಗಿತ್ತು ಇದ್ಯಾವುದನ್ನೂ ಮಾಡದೆ ಸುಮ್ಮನೆ ೧೦ ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಎಂದು ಹೇಳಿಬಿಟ್ಟಿದ್ದರಿಂದ ನಾವು ಹಳ್ಳಿಗಳ ರೈತರಿಗೆ ನೀವ್ಯಾರೂ ಸಾಲ ಹಿಂತಿರುಗಿಸಬೇಡಿ, ಮನ್ನಾ ಆಗುತ್ತದೆ ಎಂದು ಹೇಳಿಕೊಂಡು ಬಂದದು ನಿಜ. ಚುನಾವಣೆ ಇನ್ನೂ ನಾಲ್ಕೂವರೆ ವರ್ಷ ಇದೆ. ಬೇರೆ ಯಾರೂ ಮಧ್ಯೆ ಬರುವ ಭಯವಿಲ್ಲ ಅಥವಾ ಕೇಂದ್ರ ಸರ್ಕಾರ ಈ ಯೋಜನೆ ಮಾಡಿದ್ದರೂ ಸಹ ರಾಜ್ಯ ಸರ್ಕಾರ ತನ್ನ ಬೊಕ್ಕಸದಿಂದ ಹಣ ಕೊಟ್ಟ ಕೀರ್ತಿ ನಿಮಗೆ ಬರುತ್ತದೆ. ಇನ್ನೂ ಐದು ವರ್ಷ ಅಧಿಕಾರದಲ್ಲಿ ಮುಂದುವರಿಯುವಂಥ ಸದವಕಾಶ ನಿಮಗೆ ಸಿಗುತ್ತದೆ. ಇವತ್ತು ರೈತನ ಆಕ್ರೋಶ ಏನಿದೆ ಎಂದು ನಾನು ನೋಡಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ಸಾಲ ಮನ್ನಾ ಯೋಜನೆಯ ಉಪಯುಕ್ತತೆ ಅಥವಾ ನಿರುಪಯುಕ್ತತೆ ಬಗ್ಗೆ ನಾನು ಮಾತನಾಡುವುದಿಲ್ಲ. ಏಕೆಂದರೆ, ಅದು ಎಲ್ಲರೂ ಬೇಕು ಎನ್ನುವಾಗ ನಾನು ಆ ಸಮೂಹದ ಜೊತೆ ಇರುತ್ತೇನೆ. ಆದರೆ ಕೇಂದ್ರದವರು ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಇರತಕ್ಕಂಥ ಹತ್ತು ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮಾಫ್ ಮಾಡುತ್ತೇವೆಂದು ಹೇಳಿದರು. ಇದು ನಿರ್ವಿವಾದ. ನಮ್ಮ ರಾಜ್ಯದಲ್ಲೂ ಸಹ ಅನೇಕ ಸಂದರ್ಭಗಳಲ್ಲಿ ರೈತರು ಸಹಕಾರ ಸಂಘಗಳನ್ನು ಬಿಟ್ಟು ರಾಷ್ಟ್ರೀಯ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಿದ್ದಾರೆ. ಅಂದ ಮೇಲೆ ಕೇಂದ್ರದವರು ಸಹಕಾರಿ ಸಂಘಗಳ ಸಾಲವನ್ನೂ ಏಕೆ ಮನ್ನಾ ಮಾಡಬಾರದು ? ಕೇಂದ್ರ ಸರ್ಕಾರದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ೧೦ ಸಾವಿರ ರೂಪಾಯಿಗಳವರೆಗಿನ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ:

ರಾಜ್ಯ ಸರ್ಕಾರ ನಾವು ಬರೀ ಶಿಫಾರಸ್ ಮಾಡುತ್ತೇವೆಂದು ಹೇಳಿದ್ದೆವು. ನಾವು ಶಿಫಾರಸ್ ಮಾಡಿದ್ದೆವು, ಹತ್ತು ಸಾವಿರದವರೆಗಿನ ರೈತರು ಸಾಲವನ್ನು ಸೂಟ್ ಬಿಡುವುದಕ್ಕೆ ನೀವು ಹಣ ಕೊಡಿ, ಸೂಟ್ ಬಿಡುತ್ತೇವೆಂದು ಹೇಳಿದ್ದೇವೆ. ಒಂದು ವೇಳೆ ರೈತರ ಸಾಲ ಸೂಟ್ ಬಿಡಬೇಕು, ರೈತರ ಕಲ್ಯಾಣ ಮಾಡಬೇಕೆಂಬ ಅಭಿಪ್ರಾಯ ಇದ್ದರೆ ಇವತ್ತು ಆ ಹಣವನ್ನು ಕೊಟ್ಟು ಬಿಟ್ಟರೆ ಸೂಟ್ ಬಿಡಲಿಕ್ಕೆ ನಾವು ಅಡ್ಡ ಬರುವುದೇ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಕೆ. ಹೆಚ್. ಪಾಟೀಲರ ಅಭಿಪ್ರಾಯಗಳೊಂದಿಗೆ ನನ್ನ ಸಂಪೂರ್ಣ ಸಹಮತ ಇದೆ, ನಾನು ವಿನಂತಿಸುವುದೇನೆಂದರೆ, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾಲ ಮನ್ನಾ ಮಾಡಿದರೂ ಶೇಕಡ 8 ಜನ ಯೋಗ್ಯ ರೈತರಿಗೆ ಅದರ ಉಪಯೋಗ ಸಿಗುತ್ತಿಲ್ಲ ಐ.ಆರ್.ಡಿ.ಪಿ ಅಂತ್ಯೋದಯ, ಪೂಜಾರಿ ಲೋನ್–ಹೀಗೆ ಒಂದೆರಡನ್ನು ಬಿಟ್ಟರೆ ನಿಜವಾದ ರೈತರಿಗೆ ಸವಲತ್ತು ಸಿಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಈ ಯೋಜನೆಯಿಂದ ಲಾಭವಾಗುತ್ತಿಲ್ಲ, ಸಹಕಾರಿ ಸಂಘಗಳಿಗೂ ನೀವು ಪೂರ್ಣವಾದ ಹಣವನ್ನು ಕೊಡಿ ಎಂದು ಒತ್ತಾಯ ತರುವುದಕ್ಕೆ ನಮ್ಮ ಕಡೆಯಿಂದ ಆದಂಥ ಪ್ರಯತ್ನ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.— ಆಗಲೇ ಕೇಂದ್ರವನ್ನು ದೂಷಿಸಲು ನಾನು ತಯಾರಿಲ್ಲ ಎಂದಿರಿ, ಈಗ ಕೇಂದ್ರದ ಯೋಜನೆ ಏನೂ ಪ್ರಯೋಜನಕರವಾಗಿಲ್ಲ ಎಂದು ಹೇಳುತ್ತಿದ್ದೀರಿ ಇದರಲ್ಲಿ ಯಾವುದು ಸರಿ?

ಶ್ರೀ ಬಿ. ಎಸ್. ಯಡಿಯೂರಪ್ಪ — ಸದನದಲ್ಲಿ ನಾನು ಸ್ಪಷ್ಟವಾಗಿ ಹೇಳಿದೆ. ನಾವೂ ಕೂಡ ಮೂರು ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದ್ದೇವೆ. ಈ ರಾಜ್ಯದ, ಈ ದೇಶದ ರೈತನ ಪ್ರಶ್ನೆ ಬಂದಾಗ ಪಕ್ಷದಿಂದ ಹೊರಗೆ ನಿಂತು ಮಾತಾಡಲು ನಾನು ಸಿದ್ಧವಾಗಿದ್ದೇನೆ. ಈ ದೇಶದಲ್ಲಿ ಇವತ್ತು ಕೇಂದ್ರ ಸರ್ಕಾರ ಇರಬಹುದು ರಾಜ್ಯ ಸರ್ಕಾರಗಳಿರಬಹುದು, ಚುನಾವಣ ಪ್ರಣಾಳಿಕೆಯಲ್ಲಿ ಹೇಳಿದಿರಿ ಅದೊಂದೇ ಕಾರಣಕೋಸ್ಕರ ನೀವು ಮಾಡಿ ಎಂದು ನಾನು ಹೇಳುತ್ತಿಲ್ಲ. ಇವತ್ತು ಈ ರಾಜ್ಯದಲ್ಲಿ ರೈತರಿಗೆ ಸಾಲ ಮನ್ನಾ ಮಾಡುವಂತಹ ಅನಿವಾರ್ಯ ಪರಿಸ್ಥಿತಿ ಒದಗಿ ಬಂದಿದೆ ಅವನು ಸಾಲಗಾರ ನಾಗುವುದಕ್ಕೆ ಕಾರಣವೇನೆಂದು ಹುಡುಕಬೇಕಾಗಿದೆ. ಬರಗಾಲಕ್ಕೆ, ಅತಿವೃಷ್ಟಿಗೆ ತುತ್ತಾಗಿ ರೈತ ಈ ಸ್ಥಿತಿಗೆ ಬಂದಾಗ ರಾಜ್ಯ ಸರ್ಕಾರ ಈ ರಾಜ್ಯದ ರೈತರ ಹಿತವನ್ನು ಕಾಪಾಡಬೇಕು ಎಂದು ಇದ್ದರೆ ಸಾಲ ಮನ್ನಾ ಮಾಡುವುದು ಸರಿಯೋ ಅಲ್ಲವೋ ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ ಅದನ್ನು ನಾನು ಒಪ್ಪುತ್ತೇವೆ. ಆದರೆ ಈ ಪ್ರವೃತ್ತಿ ಇವತ್ತು ರೈತರಲ್ಲಿ ಏನೂ ಇಲ್ಲ. ಮತ್ತೊಮ್ಮೆ ಸಾಲ ಮನ್ನಾ ಮಾಡಿ ಎಂದು ಕೇಳುವಂಥ ಸ್ಥಿತಿ ನಮ್ಮ ರಾಜ್ಯದ ರೈತನಿಗೆ ಬರಬಾರದು ಎಂದು ವಿನಂತಿ ಮಾಡಿಕೊಳ್ಳುವವನು ನಾನು ಇವತ್ತು ಕೇಂದ್ರ ಸರ್ಕಾರದವರನ್ನು ರಾಜ್ಯ ಸರ್ಕಾರ ತೋರಿಸಿಕೊಂಡು ಕುಳಿತುಕೊಳ್ಳುವುದರಿಂದ ಈ ರಾಜ್ಯದ ರೈತನ ಹಿತವನ್ನು ಕಾಪಾಡಿದಂತೆ ಆಯಿತೇನು? ಇವತ್ತು ರೈತನಿಗೆ ಅನೇಕ ಸಮಸ್ಯೆಗಳು ಇರಬೇಕಾದರೆ ಅದರಲ್ಲಿ ರಾಜ್ಯ ಸರ್ಕಾರದ ಸಹ ಭಾಗಿತ್ವ ಇಲ್ಲವೇನು? ರಾಜ್ಯ ಸರ್ಕಾರಕ್ಕೆ ಅವನು ತೆರಿಗೆಯನ್ನು ಕೊಡುವುದಿಲ್ಲವೇ? ಕೇಂದ್ರ ಸರ್ಕಾರಕ್ಕೆ ಒತ್ತಡ ತರೋಣ, ಅದಕ್ಕೆ ಬೇಕಾದಂಥ ಎಲ್ಲಾ ಪ್ರಯತ್ನವನ್ನು ಮಾಡೋಣ, ಆದರೆ ನೀವು ಏನು ಮಾಡಬೇಕು ಎಂದು ಇದ್ದೀರಿ ಎಂದು ನಾನು ಆವತ್ತಿನಿಂದ ಕೇಳುತ್ತಿದ್ದೇನೆ: ಈ ನಿಮಿಷಕ್ಕೆ ಸಹಕಾರಿ ಸಚಿವರು ಬೇಕಾದರೆ ಎದ್ದು ನಿಂತುಕೊಂಡು ಹೇಳಲಿ. ಈ ಕೇಂದ್ರ ಸರ್ಕಾರದ ಹೊಸ ಯೋಜನೆಯ ಪ್ರಕಾರ ಈ ರಾಜ್ಯದಲ್ಲಿ ಯಾವ ರೈತನಿಗೆ ಲಾಭವಾಗುತ್ತದೆ ಎಷ್ಟು ಜನರಿಗೆ ಲಾಭವಾಗುತ್ತದೆ ನಮ್ಮ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಎಷ್ಟು ಭಾರ ಬೀಳುತ್ತದೆ ಎನ್ನುವುದನ್ನು ಹೇಳುತ್ತೀರ ಅಂಕಿ ಅಂಶಗಳು ಇವೆಯೇ? ಇಲ್ಲ ಏಕೆಂದರೆ ರೈತರಲ್ಲಿ ಒಗ್ಗಟ್ಟಿಲ್ಲ. ರೈತನ ಸ್ಥಿತಿಗತಿಗಳ ಬಗ್ಗೆ ಅಂಕಿ ಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ತಾವು ಸಿದ್ಧವಿಲ್ಲ. ಈ ಪರಿಸ್ಥಿತಿ ಒದಗಿರುವಂಥ ಈ ಸಂದರ್ಭದಲ್ಲಿ ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಈ ರಾಜ್ಯದ ರೈತರ ಪರವಾಗಿ ನಾನು ವಿನಂತಿಮಾಡುತ್ತೇನೆ

ಶ್ರೀ ಹೆಚ್. ಆರ್. ರಾಜು (ಸಹಕಾರಿ ಸಚಿವರು).— ಎಷ್ಟು ಜನರಿಗೆ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ವರ್ಕ್‌ಔಟ್ ಮಾಡಲಿಕ್ಕೆ ಈಗ ಅಧಿಕಾರಿಗಳಿಗೆ ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಕಳೆದ ಐದು ತಿಂಗಳಿಂದ ಸತತವಾಗಿ ಕೇಂದ್ರ ಸರ್ಕಾರದಲ್ಲಿ ರೈತನ ಸಾಲದ ಮನ್ನಾದ ಬಗ್ಗೆ ಚರ್ಚೆಯಾಗುತ್ತಿರಬೇಕಾದರೆ ನೀವು ಈಗ ವರ್ಕ್‌ಔಟ್ ಮಾಡುವುದಕ್ಕೆ ಹೇಳುತ್ತಿದ್ದೇವೆ ಎಂದರೆ ನೂರಕ್ಕೆ ಐದು ಜನ ಬಡವರಿಗೆ ಏನು ಫಲ ಸಿಗುತ್ತದೆ ಎಂದು ನಾವು ಅಂದು ಕೊಂಡಿದ್ದೆವು ಅದರ ಬಗ್ಗೆಯೂ ಅಂಕಿ ಅಂಶಗಳು ನಿಮ್ಮ ಸರ್ಕಾರದಲ್ಲಿ ಇಲ್ಲ. ಎಂದರೆ. ಈ ರಾಜ್ಯದ ರೈತನ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆ ಎಷ್ಟರಮಟ್ಟಿಗೆ ತಾವು ಇದರ ಬಗ್ಗೆ ಯೋಜನೆಯನ್ನು ಮಾಡಿದ್ದೀರಿ.

(ಗೊಂದಲ)

ಶ್ರೀ ಎಂ. ಮಹದೇವ್.—ಅಂಕಿಅಂಶಗಳು ಸರ್ಕಾರದಲ್ಲಿ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಉಪಾಧ್ಯಕ್ಷಿಣಿಯವರೆ, ನನಗೆ ಸ್ವಾತಂತ್ರ್ಯ ಇದೆ. ನನ್ನ ಅಭಿಪ್ರಾಯವನ್ನು ಹೇಳುವುದಕ್ಕೋಸ್ಕರ ನನಗೆ ಸ್ವಾತಂತ್ರ್ಯ ಇದೆ. ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ನನಗೆ ಅಧಿಕಾರ ಇದೆ. ನಾನು ಇವತು ಎರಡನೇ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುವಂಥದ್ದು...

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ.—ರೈತರ ಬಗ್ಗೆ ಕಣ್ಣೀರು ಸುರಿಸಬೇಡಿ, ನೀವು ಹೇಳುವುದನ್ನು ನಾವು ಒಪ್ಪುತ್ತೇವೆ. ಆದರೆ ನಿಮ್ಮ ಕೇಂದ್ರ ಸರ್ಕಾರದ ಜೊತೆಯಲ್ಲಿ ಸೇರಿ ಮೊಸಳೆ ಕಣ್ಣೀರು ಸುರಿಸಬೇಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ನೀವು ಏತಕ್ಕೆ ನಿಮ್ಮ ಕೇಂದ್ರ ಸರ್ಕಾರ ಎಂದು ಹೇಳುತ್ತೀರಿ. ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾತಂತ್ರ್ಯ ಬಂದ ೪೩ ವರ್ಷಗಳಿಂದ ಈ ದೇಶದ ಮತದಾರ ಬದಲಾವಣೆ ತಂದು ಇವತ್ತು ಬೇರೆ ಸರ್ಕಾರ ಬಂದಿರುವಂಥ ಸಂದರ್ಭದಲ್ಲಿ ಈ ದೇಶದ ಜನತೆಯ ಮನಸ್ಸಿನಲ್ಲಿ ಭಾವನೆಗಳು ಏನು ಇದೆ, ನಮ್ಮ ಹಿಂದೆ ಇದ್ದಂಥ ಸರ್ಕಾರಗಳು ಇವತ್ತಿನವರೆಗೆ ಅಧಿಕಾರದಲ್ಲಿ ಇದ್ದಂಥ ಸರ್ಕಾರಗಳು ಜನಹಿತ ಮಾಡಲಿಲ್ಲ ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈಗ ಇರುವಂಥ ಸರ್ಕಾರದ ಮೂಲಕವಾದರೂ ಒಂದು ಬದಲಾವಣೆಯನ್ನು ತರಬೇಕು ಎಂದು ಮಹತ್ವವಾದ ಆಕಾಂಕ್ಷೆಯನ್ನು ಇಟ್ಟುಕೊಂಡು ಬೆಂಬಲವನ್ನು ಕೊಡುತ್ತಿದ್ದೇವೆ. ಕೊನೆಯ ಪಕ್ಷ ಈ ಟಿಕ್ಕಿನಲ್ಲಿ ಯೋಚನೆ ಪ್ರಾರಂಭ ಆದಾಗ ಈ ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ವಿರೋಧಪಕ್ಷದ ನಾಯಕರ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ ರಾಜ್ಯದ ರೈತನ ಪರಿಸ್ಥಿತಿ ಏನು ಇದೆ, ಅದನ್ನು ಮನದಟ್ಟು ಮಾಡುವುದರಲ್ಲಿ ಏಕೆ ಯಶಸ್ವಿಯಾಗಲಿಲ್ಲ, ಏಕೆ ಆ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ಇದರ ಬಗ್ಗೆ ನಿಮಗೆ ಜವಾಬ್ದಾರಿ ಇಲ್ಲವೇ? ಯಡಿಯೂರಪ್ಪ ಈ ರಾಜ್ಯದ ಉದ್ದಗಲಕ್ಕೆ ರೈತರ ಸಾಲ ಮನ್ನಾ ಆಗಬೇಕೆಂದು ಹೋದಾಗ...

(ಗೊಂದಲ)

ಉಪಾಧ್ಯಕ್ಷಿಣಿಯವರು.—ಈಗ ಇನ್ನೂ ಆರು ಜನರು ಮಾತನಾಡುವವರು ಇದ್ದಾರೆ ದಯವಿಟ್ಟು ತಾವು ಸಬ್ಜೆಕ್ಟ್‌ಗೆ ಬಂದು ಮುಗಿಸಿಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಎರಡು ಸಂಗತಿಗಳ ಬಗ್ಗೆ ಸ್ಪಷ್ಟ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಒಂದು ಈ ಕೇಂದ್ರ ಸರ್ಕಾರದ ಯೋಜನೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಭಾರ ಬೀಳುತ್ತದೆ. ಆ ಅಂಕಿಅಂಶಗಳನ್ನು ತಾವು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಪ್ರಕಟ ಮಾಡಬೇಕು ಎರಡನೆಯದು. ೨೫೦–೩೦೦ ಕೋಟಿ ರೂಪಾಯಿಗಳಲ್ಲಿ ಅರ್ಧ ೧೫೦ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆ. ರಾಜ್ಯ ಸರ್ಕಾರ ಅರ್ಧ ಹೊರೆಯನ್ನು ಹೊರುವುದಕ್ಕೆ ಸಿದ್ಧವಿದ್ದರೆ ೧೯೮೯–೯೦ನೇ ಸಾಲಿನಲ್ಲಿ ಪಡೆದಿರುವಂಥ ಬೆಳೆ ಸಾಲದಲ್ಲಿ ಹತ್ತು ಸಾವಿರ ರೂಪಾಯಿಗಳವರಗೆ ಮನ್ನಾ ಮಾಡುವುದಕ್ಕೆ ಸಾಧ್ಯ ಇದೆ ಅದು ಅಲ್ಲವೆಂದರೆ ಅಂಕಿಅಂಶಗಳನ್ನು ತಂದು ಮುಂದಿಡಬೇಕು. ಈ ಸರ್ಕಾರದಲ್ಲಿ ಅಂಕಿಅಂಶಗಳು ಇದೆ. ಯಾವ ಒಂದು ರಿಯಾಯಿತಿ ಇಂಟರೆಸ್ಟ್ ಸಬ್ಸಿಡಿ ಸ್ಕೀಮ್ ಇತ್ತು ಈ ಸ್ಕೀಮನ್ನು ೧-೭-೧೯೮೯ ರಿಂದ ತಾವು ರದ್ದು ಮಾಡಿದ್ದೀರಿ ಅಂದರೆ ಹಿಂದೆ ಸರ್ಕಾರ ಅದನ್ನು ರದ್ದುಮಾಡಿದೆ.

ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇವೊತ್ತು ಇಂಡರಸ್ಟ್ ಸಬ್ಸಿಡಿಯನ್ನು ನಬಾರ್ಡ್‌ನವರು ಕೊಡುವುದಕ್ಕೆ ಹಿಂದೆ ಮುಂದೆ ನೋಡಿದರ ಬೇರ ಸ್ಕೀಮ್ ಅನ್ನು ಬೇಕಾದರೆ ಹಿಡಿಯಿರಿ. ಪ್ರೊಡಕ್ಟೀವ್ ಇನ್‌ಸೆಂಟೀವ್ ಸ್ಕೀಮ್ ಎಂದು ಕರೆಯುತ್ತೀರೋ ಅಥವಾ ಇದಕ್ಕೆ ಮತ್ತೊಂದು ಹೆಸರನ್ನು ಕರೆಯುತ್ತೀರೋ, ಯಾವುದಾದರೂ ಒಂದು ಸ್ಕೀಮ್ ಹೆಸರು ಇಟ್ಟು ಯಾವ ರೈತ ಸಮಯಕ್ಕೆ ಸರಿಯಾಗಿ ಸಾಲ ಮರು ಪಾವತಿ ಮಾಡುತ್ತಿದ್ದ ಆ ರೈತನಿಗೆ ಶೇಕಡಾ ೭ ರಷ್ಟು ಬಡ್ಡಿ ಸಾಲವನ್ನು ಮರು ಪಾವತಿ ಮಾಡುವಂಥ ಅವಕಾಶವನ್ನು ಹಿಂದಿನ ಸರ್ಕಾರ ಮಾಡಿ ಅದನ್ನು ರದ್ದು ಮಾಡಿದೆ. ಅದಕ್ಕೆ ಬೇರೆ ಒಂದು ರೂಪವನ್ನು ಕೊಟ್ಟು ಮುಂದೆ ಬರುವ ದಿವಸಗಳಲ್ಲಿ ಸಮಯಕ್ಕೆ ಸರಿಯಾಗಿ ಸಾಲ ಮರು ಪಾವತಿ ಮಾಡುವಂತಹ ವ್ಯವಸ್ಥೆ ಮಾಡುವ ದೃಷ್ಟಿಯಿಂದ ಶೇಕಡಾ ೭ ಪರ್ಸೆಂಟ್ ಬಡ್ಡಿ ಯೋಜನೆಯನ್ನು ತಾವು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಇದು ಆಗದೇ ಇದ್ದರೆ, ಬಹುಶಃ ಈ ರಾಜ್ಯದ ರೈತ ಬೀದಿ ಪಾಲು ಆಗುತ್ತಾನೆ. ಬಹುಶಃ ಆ ಪಾಪಕ್ಕೆ ಈ ಸದನದ ಮೂಲಕ ರಾಜ್ಯದ ರೈತರಲ್ಲಿ ನಾನು ಕ್ಷಮಾಪಣೆ ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಈ ಹೋರಾಟದಿಂದ ರಾಜ್ಯದ ರೈತ ಜಾಗೃತನಾದುದರ ಮೇಲಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಮ್ಮ ನೆರವಿಗೆ ಬರಬಹುದು ಎಂಬ ನಂಬಿಕೆಯಿಂದ ನಾವು ಹೋರಾಟ ಮಾಡಿದೆವು. ಇದರಿಂದ ನಮ್ಮಿಂದ ಏನಾದರೂ ಅನ್ಯಾಯ ಆಗಿದ್ದರೆ ಸದನದ ಮೂಲಕ ಈ ರಾಜ್ಯದ ರೈತರಲ್ಲಿ ನಾನು ಕ್ಷಮಾಪಣೆ ಕೇಳುತ್ತೇನೆ. ಈ ರೀತಿ ಬಹುಮತದಿಂದ ಅಧಿಕಾರಕ್ಕೆ ಬಂದಂತಹ ಸರ್ಕಾರಗಳು ಯಾವ ರೀತಿ ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿವೆ. ಇದಕ್ಕೆ ಯಾವ ರೀತಿ ಪ್ರಾಯಶ್ಚಿತ್ತ ಮಾಡಬೇಕು. ಯಾವ ರೀತಿ ಬುದ್ಧಿ ಕಲಿಸಬೇಕು ಎನ್ನುವುದು ಈ ರಾಜ್ಯದ ರೈತ ಸಮೂಹಕ್ಕೆ ಬಿಟ್ಟಿದ್ದು. ಎಂದು ಮಾತ್ರ ನಾನು ಹೇಳುವುದಕ್ಕೆ ಇಚ್ಛೆಪಟ್ಟು, ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡನೆಯ ಸಂಗತಿ ಏನೆಂದರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಲ್ಕಿ ಸೇವಾ ಸಹಕಾರ ಸಂಘ ಇದೆ. ಸಹಕಾರಿ ಸಂಘಗಳು ಯಾವ ರೀತಿ ನಡೆಯುತ್ತಾ ಇವೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಈಗಾಗಲೇ ಇದು ತಮ್ಮ ಗಮನಕ್ಕೆ ಬಂದಿರಬಹುದು. ಆ ಮುಲ್ಕಿ ಸಹಕಾರ ಸಂಘದಲ್ಲಿ ಕೂಲಿ ಕಾರ್ಮಿಕರು, ಹಿಂದುಳಿದ ಜನಾಂಗದವರು, ಮೀನುಗಾರರು. ದೊಡ್ಡ ಪ್ರಮಾಣದಲ್ಲಿ ಮಹಿಳೆಯರು, ಸದಸ್ಯರು, ಹೆಣ್ಣು ಮಕ್ಕಳು, ಅದರಲ್ಲೂ ಸುಮಾರು ೧೮೦–೯೦ ಜನ ಮಾಂಗಲ್ಯ, ತಾಳಿ, ಬೆಂಡೋಲೆ, ಮೂಗುತಿ ಮುಂತಾದ ಆಭರಣಗಳನ್ನು ಅಡವಿಟ್ಟು ಸಾಲ ಪಡೆದರು. ಇವರ ಒಟ್ಟು ಬಂಗಾರದ ತೂಕ ಸುಮಾರು ಏಳುಕಾಲು ಕೆ.ಜಿ. ಆಗುತ್ತದೆ, ಸುಮಾರು ಏಳುನೂರು ಜನ ತಮ್ಮ ಕಷ್ಟ ಕಾರ್ಪಣ್ಯಗಳನ್ನು ನೀಗಿಸಿಕೊಳ್ಳುವುದರ ಸಲುವಾಗಿ ಸಾಲವನ್ನು ಪಡೆದರು ೧೦ ತಿಂಗಳ ಹಿಂದೆ ಆ ಕೋ–ಆಪರೇಟೀವ್ ಸೊಸೈಟಿಯಲ್ಲಿ ಕಳ್ಳತನ ಆಗಿದೆ. ಇದರ ಬಗ್ಗೆ ತನಿಖೆ ಮಾಡಿದರ ಯಾರ್ಯಾರು ಶಾಮೀಲಾಗಿದ್ದಾರೆ ಎನ್ನುವುದು ಹೊರಗಡೆ ಬರಬಹುದು. ಆದರೆ ಏಳೂ ಕಾಲು ಕೆ. ಜಿ. ತೂಕದ ಸುಮಾರು ೨೩ ಲಕ್ಷ ರೂಪಾಯಿ ಬೆಲೆ ಬಾಳುವಂತಹ ಬಂಗಾರದ ಕಳ್ಳತನ ಆದ ಒಂದು ವರ್ಷದ ನಂತರ, ಚಿನ್ನ ಪೂರ್ಣ ಕಳ್ಳತನ ಆಗಿರುವುದರ ಬಗ್ಗೆ ಇವೊತ್ತು ಆಭರಣಗಳು ಪತ್ತೆ ಆಗಿಲ್ಲ ಎಂದು. ಪೋಲೀಸ್ ಅಧಿಕಾರಿಗಳು ವರದಿಯನ್ನು ಕೊಡುತ್ತಾರೆ. ನಾನು ಇಷ್ಟೇ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು; ಇವೊತ್ತು ಒಂದು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್‌ನಲ್ಲಿ ಬಂಗಾರ ಇಟ್ಟು ಸಾಲ ತೆಗೆದುಕೊಂಡಾಗ ನನಗೆ ಗೊತ್ತಿರುವ ಪ್ರಕಾರ, ಇದಕ್ಕೆ ಇನ್‌ಷ್ಯೂರೆನ್ಸ್ ಮಾಡಿಸಬೇಕಾಗುತ್ತದೆ. ಈಗಿರುವ ಪ್ರಕಾರ ವಿಮಾ ಹಣ ಸುಮಾರು ೮ ಲಕ್ಷ ರೂಪಾಯಿಗಳನ್ನು ಪಡೆಯುವುದಕ್ಕೆ ಅವಕಾಶ ಇದೆ. ಉಳಿದ ಹಣವನ್ನು ತುಂಬಿಕೊಟ್ಟು ಸರ್ಕಾರ ಮಧ್ಯೆ ಪ್ರವೇಶ ಮಾಡಿ ಇದರ ಬಗ್ಗೆ ಸರಿಯಾದ ತನಿಖೆ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳುವುದು ಒಂದು ಕಡೆ ಇದ್ದರೆ, ಮತ್ತೊಂದು ಕಡೆ ಆ ಕಡು ಬಡವರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಇನ್‌ಷ್ಯೂರೆನ್ಸ್ ಹಣ ಪಡೆದು ಉಳಿದ ಹಣವನ್ನು ಸಹಕಾರದಿಂದ ಆ ಸಹಕಾರ ಸಂಘಕ್ಕೆ ಕೊಟ್ಟು ಆ ಬಡವರಿಗೆ ಚಿನ್ನವನ್ನು ವಾಪಸ್, ಕೊಡುವುದಕ್ಕೆ ಆಗದಿದ್ದರೂ ಸಹ ಕೊನೆಯ ಪಕ್ಷ ಹಣದ ರೂಪದಲ್ಲಾದರೂ ತಕ್ಷಣ ಮರು ಪಾವತಿ ಮಾಡಿ ಅವರು ಬದುಕುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಕೊನೆಯದಾಗಿ, ರಾಜ್ಯದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳು ಏನು ಆಗಿವೆ. ಅವುಗಳಲ್ಲಿ ಇವತ್ತಿನ ದಿವಸ ಮ್ಯಾನೇಜ್‌ಮೆಂಟ್ ಕಮಿಟಿ ಎಂದು ಮಾಡಿಕೊಂಡಿದ್ದಾರೆ. ನಾನು ಎಲ್ಲರ ಬಗ್ಗೆ ಹೇಳುವುದಿಲ್ಲ. ಇದರಲ್ಲಿ ಅನೇಕ ಜನ ಲೂಟಿ ಮಾಡುತ್ತಿದ್ದಾರೆ. ಸರ್ಕಾರ ಈ ಒಂದು ಕಾನೂನಿಗೆ ತಿದ್ದುಪಡಿ ತರಬೇಕು ಆ ಮ್ಯಾನೇಜ್‌ಮೆಂಟ್ ಕಮಿಟಿಗೆ ರಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಿ. ಅಲ್ಲಿ ಲಾಸ್ ಆದರೆ, ಲೂಟಿ ಆದರೆ ಅಲ್ಲಿರುವವರು ಏನು ತಿಂದು ತೇಗುತ್ತಿದ್ದಾರೆ ಅವರ ಮೇಲೆ ಜವಾಬ್ದಾರಿ ಇಲ್ಲದೇ ಇದ್ದರೆ, ಸಹಕಾರಿ ಕ್ಷೇತ್ರ ಉಳಿಯುತ್ತದೆಯೇ ? ಒಂದು ಉದಾಹರಣೆ ಕೊಡುತ್ತೇನೆ, ತಾವು ಅಂಕಿ ಅಂಶ ಕೊಡಿ. ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಾ ಇವೆ. ಬಹಿರಂಗ ಮಾರುಕಟ್ಟೆಯಲ್ಲಿ ಆರು ನೂರು, ಏಳು ನೂರು ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಹತ್ತಿಯನ್ನು ಕೇಳುವವರಿಲ್ಲ. ಕಳೆದ ಐದು ವರ್ಷಗಳಿಂದ ಮಧ್ಯದಲ್ಲಿ ದಲ್ಲಾಳಿಗಳನ್ನು ಇಟ್ಟುಕೊಂಡು ೧೮೦೦ ರಿಂದ ೨೦೦೦ ರೂಪಾಯಿಗಳವರೆಗೆ ಹತ್ತಿ ಖರೀದಿ ಮಾಡಿದ್ದಾರೆ ರೈತನಿಗೆ ಆ ದುಡ್ಡು ಹೋಗಲಿಲ್ಲ. ಅಲ್ಲಿರುವಂತಹ ಮ್ಯಾನೇಜ್‌ಮೆಂಟ್ ಕಮಿಟಿಯವರು. ದಲ್ಲಾಳಿಗಳು ಸೇರಿ ಕೋಟಿಗಟ್ಟಲೆ ಲೂಟಿ ಮಾಡಿದ್ದಾರೆ ಹಾಗಿದ್ದರೆ ಅವರಿಂದ ರೈತನಿಗೆ ನ್ಯಾಯ ಸಿಕ್ಕಿತೆ ? ಸ್ಪಿನ್ನಿಂಗ್ ಮಿಲ್ ಉಳಿಯಿತೆ ? ಈ ರೀತಿ ಸಹಕಾರಿ ಕ್ಷೇತ್ರಗಳಲ್ಲಿ ಸಕ್ಕರೆ ಕಾರ್ಖಾನೆಗಳಲ್ಲಿ, ಸಹಕಾರಿ ಸ್ಪಿನ್ನಿಂಗ್ ಮಿಲ್‌ಗಳಲ್ಲಿ ಲೂಟಿ ಆಗುತ್ತಿರುವ ಸಂದರ್ಭದಲ್ಲಿ ಇದನ್ನು ಸರಿಯಾಗಿ ಮಾಡುವಂಥ ಪ್ರಯತ್ನ ಮಾಡಿ, ಇದರ ಅಂಕಿ ಅಂಶಗಳನ್ನು ತಾವು ಕೊಡುವಂತಹ ಪ್ರಯತ್ನ ಮಾಡಿ. ಮೂರನೆಯದಾಗಿ ತಮಗೆ ಗೊತ್ತಿರುವ ಹಾಗೆ

ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ರೈತ ಬೋರ್‌ವೆಲ್‌ಗಳನ್ನು ತೆಗೆಸುತ್ತಾನೆ. ಹರಿಜನ–ಗಿರಿಜನರಿಗೆ ಸಾಮಾನ್ಯ ಬಡ ರೈತನಿಗೆ ಅನೇಕ ಸ್ಕೀಮ್‌ಗಳಿವೆ. ನೋ ವಾಟರ್ ನೋ ಮನಿ ಸ್ಕೀಮ್‌ನಲ್ಲಿ ಆಗ್ರೋ ಇಂಡಸ್ಟ್ರೀಸ್‌ನವರು ಬೋರ್‌ವೆಲ್‌ಗಳನ್ನು ತೆಗೆಯುತ್ತಿದ್ದಾರೆ. ಸನ್ಮಾನ್ಯ ಸಹಕಾರಿ ಸಚಿವರಿಗೆ ಗೊತ್ತಿದೆ. ನಾವು ಹೊರಗಡೆ ಒಂದು ಬೋರ್‌ವೆಲ್ ತೆಗೆಸಬೇಕಾದರೆ, ನಮಗೆ ಒಂದು ಮೀಟರ್ ಆಳದ ಬಾವಿ ತೆಗೆಯುವುದಕ್ಕೆ ಛಾರ್ಜ್ ತೆಗೆದುಕೊಳ್ಳುವಂಥಾದ್ದು ೧೦೦ ರಿಂದ ೧೧೦ ರೂಪಾಯಿ ಆದರೆ ಆಗ್ರೋ ಇಂಡಸ್ಟ್ರೀಸ್‌ನವರು ನೋ ವಾಟರ್ ನೋ ಮನಿ ಸ್ಕೀಮಿನಲ್ಲಿ ತೆಗೆಯುತ್ತಾ ಇರುವುದು ಒಂದು ಮೀಟರ್‌ಗೆ ೧೮೦ ರಿಂದ ೧೯೦ ರೂಪಾಯಿ ಛಾರ್ಜ್ ಮಾಡಿ ಇದರ ಹೆಸರಿನಲ್ಲಿ ಲೂಟಿ ಮಾಡುತ್ತಿದ್ದಾರೆ. ನಾನು ತಮಗೆ ಹೇಳುವುದೇನೆಂದರೆ ದಯಮಾಡಿ ಬೇರೆ ಯಾವುದಾದರೂ ಒಂದು ಹೊಸ ವ್ಯವಸ್ಥೆ ಮಾಡಿ, ನೇರವಾಗಿ ರೈತರಿಗೆ ಕೊಟ್ಟು ಬೋರ್‌ವೆಲ್ ತೆಗೆದ ಮೇಲೆ ಅವನಿಗೆ ಪೇಮೆಂಟ್ ಮಾಡುವಂತಹ ವ್ಯವಸ್ಥೆ ಮಾಡಿ, ಅವನು ಆಳ ೨೦೦ ಅಡಿ ತೆಗೆಯುತ್ತಾನೊ, ೩೦೦ ಅಡಿ ತೆಗೆಯುತ್ತಾನೊ ಲೂಟಿ ಮಾಡುವುದಕ್ಕೆ ಇರುವಂತಹ ವ್ಯವಸ್ಥೆ ಇದು. ಆದಕ್ಕೋಸ್ಕರ ಸ್ಪಿನ್ನಿಂಗ್ ಮಿಲ್ ಈ ಒಂದು ಕೋ–ಆಪರೇಟಿವ್ ಶುಗರ್ ಫ್ಯಾಕ್ಟರಿ ಆಗ್ರೋ ಇಂಡಸ್ಟ್ರೀಸ್ ಮೂಲಕ ರೈತರಿಗೆ, ಬಡವರಿಗೆ ಶೋಷಣೆ ಆಗುತ್ತಿದೆ. ಇದನ್ನು ತಪ್ಪಿಸುವ ದೃಷ್ಟಿಯಿಂದ ಈ ಒಂದು ಕೆಲಸ ಮಾಡಬೇಕು. ನಾನು ಒಂದೆರಡು ಸಲಹೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ನನಗೆ ಇನ್ನು ಐದು ನಿಮಿಷ ಸಾಕು. ಹಿಂದೆ ರೈತರಿಗೆ ವಿಫಲವಾದ ಬಾವಿಗಳಿಗೆ ಹಣ ತುಂಬಿಕೊಡುವಂತಹ ಒಂದು ಯೋಜನೆ ಇತ್ತು.

ಈಗ ಅದು ನಿಂತಿದೆ ಎಂದು ನಾನು ಕೇಳಿದ್ದೇನೆ. ಯಾವ ರೈತ ಬಾವಿ ತೆಗೆಸಿ ನೀರು ಬರದೆ ಇದ್ದರೆ ಅಂತಹ ಬಡವ ಏನು ಮಾಡಬೇಕು ಎಂದು ನಾನು ಕೇಳುತ್ತೇನೆ. ಹಿಂದಿನ ಸರ್ಕಾರಗಳವರು ಬಾವಿಗಳನ್ನು ವಿಫಲವಾದಾಗ ಹಣವನ್ನು ತುಂಬಿಕೊಡುವ ಒಂದು ಕಾರ್ಯಕ್ರಮವನ್ನು ರೂಪಿಸಿದರು ಇವತ್ತು ಬೇರೆ ಬೇರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇರಬಹುದು. ಬೇರೆ ಬೇರೆ ಇಂಡಸ್ಟ್ರೀಸ್ ಇರಬಹುದು. ಅವುಗಳಿಗೆ ಎಲ್ಲ ರೀತಿಯ ಸಬ್ಸಿಡಿ ನಾವು ಕೊಡುತ್ತೇವೆ. ಇವತ್ತು ಒಬ್ಬ ರೈತ ಟ್ರ್ಯಾಕ್ಟರ್ ತೆಗೆದುಕೊಂಡು ಬರುತ್ತಾನೆ. ಟಿಲ್ಲರ್ ತೆಗೆದುಕೊಂಡು ಬರುತ್ತಾನೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಜಾರಿಗೆ ಬಂದ ಮೇಲೆ ದೊಡ್ಡ ಶ್ರೀಮಂತ ರೈತರು ಬಹಳ ಕಡಿಮೆ ಇದ್ದಾರೆ. ಇವತ್ತು ದೊಡ್ಡ ದೊಡ್ಡವರಿಗೆ ಅಂದರೆ ೫೦ ಲಕ್ಷ, ಒಂದು ಕೋಟಿ, ಎರಡು ಕೋಟಿ ರೂಪಾಯಿಗಳ ಕಾರ್ಖಾನೆ ಮಾಡುವಂಥವರಿಗೆ ಮಿಷನರೀಸ್ ಕೊಳ್ಳಬೇಕಾದರೆ, ಸಬ್ಸಿಡಿ ಕೊಡಬೇಕಾದರೆ ಈ ರಾಜ್ಯದ ರೈತ, ರೈತಾಪಿ ಕೆಲಸಗಳಿಗೆ ಉಪಯೋಗ ಮಾಡುವುದಕ್ಕೆ ಟ್ರ್ಯಾಕ್ಟರ್, ಟಿಲ್ಲರ್‌ಗಳನ್ನು ತೆಗೆದುಕೊಂಡರೆ ಅವರಿಗೆ ಸಬ್ಸಿಡಿ ಏಕೆ ಇಲ್ಲ. ಆ ಒಂದು ಯೋಜನೆಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿ. ಈ ರೀತಿ ರೈತನ ನೆರವಿಗೆ ಬರುವಂಥ ಒಂದು ಪ್ರಯತ್ನ ತಾವು ಮಾಡಬೇಕು. ಸನ್ಮಾನ್ಯ ಆಹಾರ ಸಚಿವರು ಇದ್ದಾರೆ. ಅವರಿಗೆ ಒಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾವು ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಜಿಲ್ಲಾಪರಿಷತ್ತುಗಳನ್ನು ಮಾಡಿದೆವು. ನಿಮಗೆ ಪ್ರಾಮಾಣಿಕವಾಗಿ ಹೇಳಬೇಕಾದರೆ, ಈ ಜಿಲ್ಲಾಪರಿಷತ್ತಿನಲ್ಲಿರುವಂಥ ರಾಜಕೀಯ ಗೊಂದಲದಿಂದ ನ್ಯಾಯಬೆಲೆ ಅಂಗಡಿಗಳ ಹತೋಟಿ ಅವರ ಕೈಯಲ್ಲಿರುವುದರ ಪರಿಣಾಮವಾಗಿ ಜನ ಕಂಗಾಲಾಗಿದ್ದಾರೆ. ಮನಬಂದಂತೆ ಅಧಿಕಾರ ದುರುಪಯೋಗವಾಗುತ್ತಾ ಇದೆ. ನ್ಯಾಯಬೆಲೆ ಅಂಗಡಿಗಳನ್ನು ಹೇಳುವವರು, ಕೇಳುವವರು ಯಾರೂ ಇಲ್ಲದ ಸ್ಥಿತಿಗೆ ಬಂದಿದೆ. ಇದನ್ನು ಹೇಳಬಾರದು. ಅಧಿಕಾರ ವಿಕೇಂದ್ರೀಕರಣ ಆಗಿರಬೇಕಾದರೆ ಅದನ್ನು ಕಂಟ್ರೋಲ್ ಮಾಡುವಂಥ ಶಕ್ತಿ ನಮಗೆ ಬರಬೇಕಾಗಿತ್ತು. ಅದು ಆಗುತ್ತಾ ಇಲ್ಲ. ಅಲ್ಲಿ ರಾಜಕೀಯ ಬೆರೆತುಕೊಂಡು ಕುಳಿತಿದೆ ಬೇಕಾದವರಿಗೆ ನ್ಯಾಯಬೆಲೆ ಅಂಗಡಿ ಕೊಟ್ಟು, ಬೇಡದವರಿಗೆ ಕ್ಯಾನ್ಸಲ್ ಮಾಡಿದರು. ಈ ರೀತಿ ಮಾರಕ್ಕೊಂದು ಸಾರಿ ವ್ಯಾಪಾರ ನಡೆದಿದೆ. ನಾನು ನೂರಾರು ಉದಾಹರಣೆ ಕೊಡಬಲ್ಲೆ. ಅದಕ್ಕೋಸ್ಕರ ತಕ್ಷಣ ಈ ನ್ಯಾಯಬೆಲೆ ಅಂಗಡಿಗಳನ್ನು ನೇರವಾಗಿ ನಿಮ್ಮ ಹತೋಟಿಗೆ ತೆಗೆದುಕೊಳ್ಳುವಂಥ ಪ್ರಯತ್ನ ಮಾಡಿಬಿಡಿ. ಈ ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಜನರಿಗೆ ದ್ರೋಹ ಮಾಡುವುದು ಬೇಡ. ಈ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವ್ಯವಸ್ಥೆಯಲ್ಲಿ ಸಾಕಷ್ಟು ದೋಷ ಇದೆ, ಪ್ರಾಮಾಣಿಕವಾಗಿ ನಡೆಯುತ್ತಾ ಇಲ್ಲ. ಹಿಂದೆ ಇತ್ತು, ತಮಗೂ ಆ ಶಕ್ತಿ ಇದೆ ಎಂದು ನಾನು ಅಂದುಕೊಂಡಿದ್ದೇನೆ. ತಾವು ಸರ್‌ಪ್ರೈಸ್ ವಿಸಿಟ್ ಮಾಡಿ. ಆ ಸೊಸೈಟಿಗಳ ಬುಕ್ ಇದೆಯೋ, ಲೆಕ್ಕ ಇದೆಯೋ, ಸಕ್ಕರೆ ಇದೆಯೋ, ಅಕ್ಕಿ ಇದೆಯೆ, ಪಾಮೋಲಿನ್ ಆಯಿಲ್ ಇದೆಯೆ, ಎಲ್ಲಿ ಬಂತು, ಎಲ್ಲಿ ಹೋಯಿತು ಎನ್ನುವುದನ್ನು ನೋಡಬೇಕು. ತಾಲ್ಲೂಕು ಕೇಂದ್ರದಲ್ಲಿ ಕೊಳ್ಳುವಂಥ ಸಂದರ್ಭದಲ್ಲಿ ವ್ಯಾಪಕ ಭ್ರಷ್ಟಾಚಾರ ಏನು ನಡೆದಿದೆ ಈ ಸ್ಥಿತಿಯನ್ನು ಸರಿಪಡಿಸುವಂಥ ಪ್ರಯತ್ನ ಮಾಡಿ.

ಇನ್ನು ಸಾರಿಗೆ ಬಗ್ಗೆ ಹೇಳುವುದಾದರೆ, ಬಹುಶಃ ಸಮಯವಿಲ್ಲ. ಹೆಚ್ಚು ಮಾತನಾಡುವಂಥ ಅಗತ್ಯವೂ ಇಲ್ಲ. ಏಕೆಂದರೆ, ಮಾತನಾಡುವುದರಿಂದ ಉಪಯೋಗವೂ ಆಗುವುದಿಲ್ಲ ಎಂದು ನನಗೆ ಮನದಟ್ಟಾಗಿದೆ. ನನ್ನದು ಒಂದೇ ಒಂದು ವಿನಂತಿ. ಇವತ್ತು ರಾಷ್ಟ್ರೀಕರಣದ ಹೆಸರಿನಲ್ಲಿ ಸಾರಿಗೆ ಇಲಾಖೆಯನ್ನು ಲಾಭದಾಯಕವಾಗಿ ನಡೆಸಿಕೊಳ್ಳುವುದಕ್ಕೆ ಆಗದೇ ಇರುವಂಥ ಈ ಸಂದರ್ಭದಲ್ಲಿ ರಾಷ್ಟ್ರೀಕರಣ ಮಾಡುವುದು ತಪ್ಪು ಎಂದು ನಾನು ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಹೊಸದಾಗಿ ಒಂದು ದಾರಿಯನ್ನೂ ರಾಷ್ಟ್ರೀಕರಣ ಮಾಡಬೇಡಿ. ಯಾವ ತಾಲ್ಲೂಕಿಗೂ ಪ್ರವೇಶ ಮಾಡಬೇಡಿ. ಇರುವುದನ್ನು ಸ್ವಚ್ಛವಾಗಿ ನಡೆಸಿ. ಎರಡನೆಯದು. ಎಲ್ಲಿ ಕೆಂಪು ಬಸ್ ಓಡಿಸುತ್ತೀರೋ ಅಲ್ಲಿ ಖಾಸಗಿ ಮಾಲೀಕರು ಕಾಂಪಿಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಖಾಸಗಿ ಮಾಲೀಕರ ಜೊತೆ ತರನ್ನು ಓಡಿಸುವವರನ್ನು [illegible] ದರದಲ್ಲಿ ಬಸ್‌ಗಳನ್ನು [illegible] ಪ್ರವೇಶ [illegible] ಅವಕಾಶ ಕೊಟ್ಟು. ಇವತ್ತು [illegible] ಬಸ್‌ಗಳನ್ನು ಕ್ರಮೇಣ [illegible] ಬರಬಹುದು. ಏಕೆಂದರೆ ಯಾವುದನ್ನು [illegible] ವುದಕ್ಕೆ ನಾವು [illegible] ಜನರಿಂದ [illegible] ಬರುವುದಿಲ್ಲವೋ ಅದನ್ನು ಸರ್ಕಾರ ಮಾಡಬೇಕು, ನಡೆಸಬೇಕು. ರಾಷ್ಟ್ರೀಕರಣದ ಹೆಸರಿನಲ್ಲಿ ಇವತ್ತು ಕೋಟಿಗಟ್ಟಲೆ ಲೂಟಿ ಮಾಡುವಂಥ ಅಗತ್ಯವಿಲ್ಲ; ಇವತ್ತು ಲಾಸ್ ಮಾಡುವಂಥ ಅಗತ್ಯವಿಲ್ಲ. ಎಲ್ಲಿ ಖಾಸಗಿ ಬಸ್ ಓಡಿಸುವುದಕ್ಕೆ ಮುಂದೆ ಬರುವುದಿಲ್ಲ ಅದರ ಬಗ್ಗೆ ಬೇರೆ ಬೇರೆ ಖಾಸಗಿ ಮಾಲೀಕರ ಮೀಟಿಂಗ್ ಕರೆಯಿರಿ. ಪ್ರತಿಯೊಂದು ರೂಟ್‌ನಲ್ಲಿ ಬೆಲೆ ನಿಗದಿ ಮಾಡಿ ೫ ವರ್ಷಗಳ ಕಾಂಟ್ರಾಕ್ಟ್ ಮೇಲೆ ನೀವು ಬಸ್ ಓಡಿಸಬೇಕೆಂದು ಹೇಳಿ. ಅವರು ಬಸ್ ಓಡಿಸುವುದಕ್ಕೆ ಸಿದ್ಧವಿದ್ದರೆ ನಿಮ್ಮ ೯೦೦೦ ಬಸ್‌ಗಳಲ್ಲಿ ಒಂದೆರಡು ಸಾವಿರ ಬಸ್‌ಗಳನ್ನು ಕೊಟ್ಟು ನೋಡಿ. ಇದೇ ಕಂಡಕ್ಟರ್, ಇದೇ ಡ್ರೈವರ್ ನಿನ್ನ ಮ್ಯಾನೇಜ್‌ಮೆಂಟ್, ಆದರೆ ಈ ರೇಟ್ ಮೇಲೆ ನೀನು ವಸೂಲಿ ಮಾಡುವ ಹಾಗಿಲ್ಲ ಎಂದು ಹೇಳಬೇಕು. ಈ ರೀತಿ ನಿಮ್ಮ ಜೊತೆಗೆ ಅವರು ಕಾಂಪಿಟ್ ಮಾಡುವಂಥ ಅಥವಾ ಅವರ ಜೊತೆಗೆ ನೀವು ಕಾಂಪಿಟ್ ಮಾಡುವಂಥ ವ್ಯವಸ್ಥೆ ತಂದು, ಕ್ರಮೇಣ ಈ ಜವಾಬ್ದಾರಿಯಿಂದ ದೂರ ಹೋಗಿ. ಏಕೆಂದರೆ, ಈ ರಾಜ್ಯದ ರೈತನ ಶ್ರೀಸಾಮಾನ್ಯನ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಅನೇಕ ಕೆಲಸ ಕಾರ್ಯಗಳು ಸರ್ಕಾರದ ಮೇಲಿದೆ. ಆ ಭಾರವನ್ನು ಹೊತ್ತು ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ರಾಷ್ಟ್ರೀಕರಣದ ಹೆಸರಿನಲ್ಲಿ ಸಾರಿಗೆ ದರವನ್ನು ಜಾಸ್ತಿ ಮಾಡಿದಿರಿ. ಇದರ ಪರಿಣಾಮ ಯಾರ ಮೇಲೆ ಆಗುತ್ತದೆಯೆಂದರೆ, ಕಡುಬಡವನ ಮೇಲೆ, ರೈತನ ಮೇಲೆ ಆಗುತ್ತದೆ, ಕೂಲಿ ಕಾರ್ಮಿಕನ ಮೇಲೆ ಆಗುತ್ತದೆ. ೫ ರೂಪಾಯಿ ತರಕಾರಿ ತೆಗೆದುಕೊಳ್ಳುವವರು ೩ ರೂಪಾಯಿ ಬಸ್ ಚಾರ್ಜ್ ಕೊಟ್ಟು ಹೋಗಬೇಕಾಗುತ್ತದೆ. ಹೀಗಾದರೆ ಅವನು ಬದುಕುವುದಕ್ಕೆ ಸಾಧ್ಯವೇ. ರೈತ ಹಳ್ಳಿಗಳಲ್ಲಿ ನಡೆಯುವ ಸಂತೆಗೆ, ಸಣ್ಣ ವ್ಯಾಪಾರಕ್ಕೆ ಬರುತ್ತಾನೆ. ರೈತ ಬುಟ್ಟಿಯಲ್ಲಿ ಹಣ್ಣು ತರಕಾರಿ ತೆಗೆದುಕೊಂಡು ಇಷ್ಟು ಬಸ್‌ದರ ಕೊಟ್ಟು ಸಂತೆಗಳಿಗೆ ಬಂದು ವ್ಯಾಪಾರ ಮಾಡಿ ಬರುವುದಕ್ಕೆ ಸಾಧ್ಯವೆ. ದಯಮಾಡಿ ಮೊದಲು ಇದ್ದಂತೆ ಸಾರಿಗೆ ದರವನ್ನು ಏರಿಸಬೇಡಿ. ಸಾರಿಗೆದರ ಏರಿಸುವುದಕ್ಕೆ ಕಾರಣ ಲಾಸ್‌ನಲ್ಲಿ ನಡೆಯುತ್ತಿದೆ ಎಂದು ಹೇಳುತ್ತೀರಿ, ಸಾರಿಗೆ ಸಂಸ್ಥೆ ಏಕೆ ಲಾಸ್ ನಡೆಯುತ್ತಿದೆ. ಇದಕ್ಕೆ ಕಾರಣವೇನೆಂದು ಹುಡುಕಿದಿರ, ಒಂದು ಭಾಗದಲ್ಲಿ, ಒಂದು ಡಿವಿಜನ್‌ನಲ್ಲಿ ಲಾಭದಾಯಕವಾಗಿ ನಡೆಯುತ್ತಿರಬೇಕಾದರೆ ಇನ್ನೊಂದು ಭಾಗದಲ್ಲಿ ಲಾಭದಾಯಕವಾಗಿ ನಡೆಯದೆ ಇರುವುದಕ್ಕೆ ಕಾರಣವೇನೆಂದು ಹುಡುಕಿದಿರ. ನಾವು ಶಿವಮೊಗ್ಗದಿಂದ ಬರುತ್ತೇವೆ ದಕ್ಷಿಣ ಕನ್ನಡ ಜಿಲ್ಲೆಯವರು ಮಾತ್ರ ಸೂಪರ್ ಡೀಲಕ್ಸ್ ಬಸ್‌ನಲ್ಲಿ ಓಡಾಡುತ್ತಾರೆ. ಅವರ ಬಗ್ಗೆ ನಾನು ದೂಷಣೆ ಮಾಡುವುದಿಲ್ಲ. ಇದು ಸರ್ಕಾರದ ಕರ್ತವ್ಯವಲ್ಲವೆ? ಪ್ರತಿಯೊಂದು ಜಿಲ್ಲೆಯಿಂದ ೩-೪ ಸೂಪರ್ ಡೀಲಕ್ಸ್ ಬಸ್‌ಗಳನ್ನು ಏಕೆ ಹಾಕಬಾರದು. ನೀವು ನಿಗದಿ ಮಾಡುವಂಥ ದುಡ್ಡನ್ನು ಕೊಡುವುದಕ್ಕೆ ಸಿದ್ಧವಿರಬೇಕಾದರೆ ಪ್ರತಿಯೊಂದು ಜಿಲ್ಲಾ ಕೇಂದ್ರದಿಂದ ಬೆಂಗಳೂರು ಮಹಾನಗರಕ್ಕೆ ಬಸ್ ಬೇಡವೆ. ತಾಲ್ಲೂಕು ಕೇಂದ್ರದಿಂದ ಸಾರಿಗೆ ಬಸ್‌ಗಳನ್ನು ಬಿಡುತ್ತೇವೆಂದಿರಿ ಬಿಡಲಿಲ್ಲ. ಶಿಕಾರಿಪುರ ತಾಲ್ಲೂಕಿನಿಂದ ಬೆಂಗಳೂರಿಗೆ ಬಸ್ ಇದ್ದದ್ದು ಕಂಡಕ್ಟರ್-ಡ್ರೈವರ್ ಕಿತಾಪತಿಯಿಂದ ನಿಂತುಹೋಗಿದೆ, ಅನೇಕ ಬಾರಿ ಈ ಸದನದಲ್ಲಿ ಚರ್ಚೆ ಮಾಡಿದರೆ ಕಂಡಕ್ಟರ್ ಡ್ರೈವರ್ ಯಶಸ್ವಿಯಾದ. ಶಿಕಾರಿಪುರದಿಂದ ಬಸ್ಸನ್ನು ಬೆಳಿಗ್ಗೆ ೫-೩೦ಕ್ಕೆ ಬಿಡುತ್ತಿದ್ದರು. ಅಷ್ಟು ಹೊತ್ತಿಗೆ ಯಾರು ಬರುತ್ತಾರೆ. ಆರು ಗಂಟೆಗೆ ಬಸ್ಸನ್ನು ಬಿಡಿ ಎಂದು ನಾನು ಒತ್ತಾಯ ತಂದೆ. ಕೊನೆಗೆ ಆ ಬಸ್ ಇಲ್ಲದ ಹಾಗೆ ಮಾಡಿಬಿಟ್ಟರು. ಈ ರೀತಿ ಅನೇಕ ಲೋಪದೋಷಗಳಿವೆ.

ನಾನು ಒಂದು ವಿಚಾರದಲ್ಲಿ ತಮಗೆ ಕೃತಜ್ಞತೆ ಅರ್ಪಿಸುತ್ತೇನೆ. ನಾನು ಶಾಸಕನಾಗಿದ್ದಾಗ ೨-೩ ಸಾರಿ ಸಾರಿಗೆ ಸಚಿವರು ಸಭೆಕರೆದು ಸೂಟ್‌ಕೇಸ್ ಕೊಡುತ್ತಿದ್ದರು. ತಿಂಡಿ ಕೊಡುತ್ತಿದ್ದರು. ನಮ್ಮ ಕಷ್ಟ-ಸುಖ ಕೇಳುತ್ತಿದ್ದರು. ನೀವು ಏನೂ ಮಾಡಲಿಲ್ಲ. ನೀವು ಕರೆಯಲಿಲ್ಲ ಸೂಟ್‌ಕೇಸೂ ಬೇಡ, ಬ್ರೀಫ್‌ಕೇಸೂ ಬೇಡ ಕೊನೇ ಪಕ್ಷ ಅಲ್ಲಿ ಆಗುತ್ತಿರುವಂಥ ಲುಕ್ಸಾನನ್ನು ನಿಲ್ಲಿಸಿ ನಮ

ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕಾಲಕ್ಕೆ ಸರಿಯಾಗಿ ಬಸ್ಸುಗಳು ಓಡಾಡುವಂತಹ ವ್ಯವಸ್ಥೆ ಮಾಡಿ ಟಾಪ್‌ಮೇಲೆ ಬಡ ರೈತರು ಪ್ರಯಾಣ ಮಾಡುವುದನ್ನು ತಪ್ಪಿಸಿ ತಾವು ಯುವಕರಿದ್ದೀರಿ, ಸಾರಿಗೆ ಇಲಾಖೆಯಲ್ಲಿ ಆಗುವಂಥ ಲುಕ್ಸಾನು ತಪ್ಪಿಸಿ, ಒಳ್ಳೆಯ ಕಾರ್ಯಕ್ರಮ ರೂಪಿಸಬೇಕೆಂದು ವಿನಂತಿ ಮಾಡಿ. ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮೀಣ).—ಸನ್ಮಾನ್ಯ ಸಭಾಧ್ಯಕ್ಷಣಿಯವರೆ ನಾನು ಕೇವಲ ಆಹಾರ ಮತ್ತು ಸಹಕಾರ ಇಲಾಖೆ ಬಗ್ಗೆ ಮಾತನಾಡಬೇಕೆಂದು ಮನಸ್ಸು ಮಾಡಿದ್ದೆ ಆದರೆ ನಿನ್ನೆ ಮಾಜಿ ಸಾರಿಗೆ ಸಚಿವರು ಈಗಿರುವಂಥ ಸಾರಿಗೆ ಸಚಿವರಿಗೆ ಖಾಸಗೀಕರಣ ಮತ್ತು ರಾಷ್ಟ್ರೀಕರಣಕ್ಕೆ ಸಂಬಂಧಪಟ್ಟಂತೆ ಒಂದು ವಿಷಯ ಹೇಳಿದರು. ಅದು ಬಹಳ ಮುಖ್ಯವಾದಂಥ ವಿಷಯ. ಆದ್ದರಿಂದ ಕೊನೆಗೆ ಇದರ ಬಗ್ಗೆ ಮಾತನಾಡುತ್ತೇನೆ. ಆಹಾರ ಮತ್ತು ಸಹಕಾರ ಇಲಾಖೆ ಬಗ್ಗೆ ಮಾತ್ರ ನಾನು ಮಾತನಾಡಬೇಕೆಂದು ಮನಸ್ಸು ಮಾಡಿದಕ್ಕೆ ಕಾರಣ ಇಷ್ಟೆ. ರೈತರಿಗೆ ಇರತಕ್ಕ ಮುಖ್ಯ ಶತ್ರು ಇಲಾಖೆಗಳಲ್ಲಿ ಇವರಡೇ ಶತ್ರು ಇಲಾಖೆಗಳು, ಮೊದಲನೇ ಶತ್ರು ಇಲಾಖೆ. ಆಹಾರ ಇಲಾಖೆ. ರೈತ ಈ ದೇಶದಲ್ಲಿ ಈ ದುಃಸ್ಥಿತಿಗೆ ಬಂದು ಮುಟ್ಟುವುದಕ್ಕೆ ಕಾರಣ ನಮ್ಮ ದೇಶದ ಆಹಾರ ಇಲಾಖೆ. ಆಹಾರ ಇಲಾಖೆಯ ಹಲವಾರು ದುಷ್ಟ ನೀತಿಗಳಲ್ಲಿ ಅತ್ಯಂತ ಮುಖ್ಯವಾದಂಥ ಒಂದು ದುಷ್ಟ ನೀತಿ ಇದೆ ಆ ದುಷ್ಟನೀತಿ ರೈತನ ಸಾಲಕ್ಕೆ ಕಾರಣ ರೈತನ ಬಡತನಕ್ಕೆ ಕಾರಣ. ಅದು ಆಹಾರ ಇಲಾಖೆ ರೂಪಿಸಿಕೊಂಡಿರತಕ್ಕ ಲೆವಿ ನೀತಿ. ಆ ಲೇವಿ ನೀತಿಯ ಮೂಲಕ ರೈತನ ಮೇಲೆ ಕೃತಕವಾದ ಸಾಲಗಳನ್ನು ನಮ್ಮ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಹೇರುತ್ತಿವೆ. ಅದರ ಪಕ್ಕದಲ್ಲಿರುವಂಥ ಸಹಕಾರ ಇಲಾಖೆ ನಮ್ಮನ್ನು ಸಾಲಗಾರರೆಂದು ಕರೆಯುತ್ತಿದೆ, ಸಾಲ ಕೊಡಿ ಎಂದು ಕೇಳುತ್ತಿದೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ವರದಿ ಕೊಟ್ಟಿದ್ದಾರೆ. ಆ ವರದಿಯಲ್ಲಿ ಅವರು ಕಳೆದ ವರ್ಷ ರೈಸ್ ಮಿಲ್‌ಗಳ ಮೂಲಕ ೧,೨೬,೫೩೨ ಮೆಟ್ರಿಕ್ ಟನ್ ಅಕ್ಕಿಯನ್ನು ಸಂಗ್ರಹಿಸಿದ್ದೇವೆಂದು ಹೇಳಿದ್ದಾರೆ. ಇದನ್ನು ಮಿಲ್‌ಪಾಯಿಂಟ್ ಲೆವಿ ಎಂದು ಕರೆಯುತ್ತಾರೆ. ೧,೨೬ ೫೩೨ ಮೆಟ್ರಿಕ್ ಟನ್ ಅಕ್ಕಿಯನ್ನು ರೈಸ್ ಮಿಲ್‌ನವರೇನೂ ಕೊಟ್ಟಿಲ್ಲ ನಾವು ಕೊಟ್ಟಿರೋದು. ಸಭಾಧ್ಯಕ್ಷಣಿಯವರೆ, ಯಾವ ದರದಲ್ಲಿ, ರೈಸ್ ಮಿಲ್‌ನಿಂದ ಖರೀದಿ ಮಾಡಿರುವುದು ಅಂದರೆ ಅತ್ಯುತ್ತಮ ಅಕ್ಕಿ ಒಂದು ಕೆ.ಜಿ.ಗೆ ೩ ರೂ. ೧೯ ಪೈಸೆ ತಾವು ದಾವಣಗೆರೆಯಲ್ಲಿದ್ದೀರಿ ಎಂದು ನನಗೆ ಗೊತ್ತಿದೆ. ಅತ್ಯುತ್ತಮವಾದ ಅಕ್ಕಿಯನ್ನು ತಾವು ಯಾವ ಧಾರಣೆಯಲ್ಲಿ ಖರೀದಿಮಾಡುತ್ತೀರಿ ಎಂದು ಸ್ವಲ್ಪ ನೆನಪು ಮಾಡಿಕೊಂಡರೆ, ಈ ದೇಶದ ರೈತರನ್ನು ಆಹಾರ ಇಲಾಖೆ ಯಾವ ಪ್ರಮಾಣದಲ್ಲಿ ದರೋಡೆ ಮಾಡುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ. ತಾವೇ ಲೆಕ್ಕ ಹಾಕಿ ನೋಡಬೇಕು. ೧,೨೬,೫೩೨ ಮೆಟ್ರಿಕ್ ಟನ್ ಅತ್ಯುತ್ತಮ ಅಕ್ಕಿ ಇವತ್ತು ಮಾರ್ಕೆಟ್‌ನಲ್ಲಿ ಒಂದು ಕೆ.ಜಿ.ಗೆ ೭ ರಿಂದ ೮ ರೂಪಾಯಿ ಇರುವಾಗ ಆಹಾರ ಇಲಾಖೆಯವರು ನಮ್ಮಿಂದ ತೆಗೆದುಕೊಳ್ಳುತ್ತಿರುವುದು ಇಲ್ಲ ಕಸಿದುಕೊಳ್ಳುತ್ತಿರುವುದು ೩ ರೂ ೧೯ ಪೈಸೆಗೆ ವ್ಯತ್ಯಾಸ ಎಷ್ಟು ಬಂತು ಅಂದರೆ ೪ ರಿಂದ ೪.೫೦ ರೂಪಾಯಿ ವ್ಯತ್ಯಾಸಬಂತು ತಾವು ನಾಲ್ಕು ರೂಪಾಯಿನಿಂದ ಗುಣಾಕಾರ ಮಾಡಿದರೂ ಕೇವಲ ಇವರ ಅಕ್ಕಿ ಲೆವಿ ನೀತಿಯಲ್ಲಿಯೇ ಕರ್ನಾಟಕದ ರೈತ ಪ್ರತಿ ವರ್ಷ ೫೦ ಕೋಟಿ ರೂಪಾಯಿ ನಷ್ಟ ಅನುಭವಿಸುತ್ತಿದ್ದಾನೆ. ಅವನಿಂದ ೫೦ ಕೋಟಿ ರೂಪಾಯಿ ಲೂಟ್ ಮಾಡುತ್ತಿದ್ದೀರಿ ಏತಕ್ಕೆ ಲೂಟ್ ಮಾಡುತ್ತಿದ್ದೀರಿ ಎನ್ನುವ ಪದ ಉಪಯೋಗಿಸಿದೆ ಅಂದರೆ ನಮ್ಮ ಕಂದಾಯ ಮಂತ್ರಿಗಳು, ಈಗ ಇಲ್ಲ ಎದ್ದು ಹೋಗಿದ್ದಾರೆ. ಅವರು ಸಾಲ ಸೂಟ್ ಮಾಡುವುದು ಒಳ್ಳೆಯದೋ ಇಲ್ಲವೋ ಆಮೇಲೆ ಮಾತನಾಡೋಣ ಅಂದರು. ಅವರು ಇದ್ದಿದ್ದರೆ ಚೆನ್ನಾಗಿತ್ತು ನಾವು ಸಾಲ ಸೂಟ್ ಮಾಡಿ ಎಂದು ಕೇಳುವವರಲ್ಲ. ಈ ಲೂಟ್ ನಿಲ್ಲಿಸಿ, ಎನ್ನುವವರು ನಾವು ಆಹಾರ ಇಲಾಖೆ ನಮ್ಮಿಂದ ಏನು ಲೂಟಿ ಮಾಡುತ್ತಿದೆ ಅದನ್ನು ನಿಲ್ಲಿಸಿ. ನಾವು ಸಾಲ ಸೂಟ್ ಮಾಡಿ ಎಂದು ಕೇಳುವವರಲ್ಲ. ಆಮೇಲೆ ನಾವು ಏತಕ್ಕೋಸ್ಕರ ಸಂಘ ಮಾಡಿರುವುದು, ಚಳುವಳಿ ಮಾಡಿರುವುದು ಎಂದು ಹೇಳುತ್ತೇನೆ. ಈ ಆಹಾರ ಇಲಾಖೆಯಿಂದ ನಮಗೆ ಬರಬೇಕಾಗುತ್ತದೆಯಲ್ಲ ಬಾಕಿ, ಆ ಬಾಕಿ ವಸೂಲು ಮಾಡಲಿಕ್ಕೋಸ್ಕರ ಹುಟ್ಟಿರುವುದು ಈ ರೈತ ಸಂಘ, ಸಾಲ ರದ್ದು ಮಾಡಿ ಎಂದು ಕೇಳುವುದಕ್ಕೆ ಅಲ್ಲ.

ಶ್ರೀ ಟಿ. ಎಂ ಮಂಜುನಾಥ್,—ಅಧ್ಯಕ್ಷರೆ, ಮಾನ್ಯ ಸದಸ್ಯರು ಏನೋ ರೈತರನ್ನು ಲೂಟ್ ಮಾಡಿ ಸರ್ಕಾರದ ಮಂತ್ರಿಗಳು ಹಂಚಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದು ಲೆವಿ ಇರತಕ್ಕಂಥ ಪದ್ಧತಿ ರೈತರಿಗೆ ಅನೇಕ ವಿಧವಾದ ಸಹಕಾರವನ್ನು ಕೊಟ್ಟು ಮಾಡುವಂಥ ನೀತಿ ಅದನ್ನು ತೆಗೆದುಕೊಂಡುಬಿಟ್ಟು ಬಡವರಿಗೆ ಹಂಚುತ್ತಿದ್ದೇವೆ. ನಾವು ಯಾರು ತಂದು ತಿನ್ನುತ್ತಿಲ್ಲ. ಮಾನ್ಯ ನಂಜುಂಡಸ್ವಾಮಿಯವರ, ಮತ್ತೆ ರೈತಾಪಿ ಜನಗಳಿಗೆ ರೈತರ ಕುಟುಂಬದವರಿಗೆ ಹಂಚುತ್ತೇವೆ. ಅದನ್ನು ತಮಗೆ ನೆನಪು ಮಾಡಿಕೊಡುತ್ತಿದ್ದೇನೆ. ಇಲ್ಲಿ ಯಾರೂ ಲೂಟ್ ಮಾಡುತ್ತಿಲ್ಲ.

ಶ್ರೀ ಎಂ. ಡಿ. ನಂಜುಂಡಸ್ವಾಮಿ.—ತಾವು ಏನೋ ಆಡಳಿತಪಕ್ಷದಲ್ಲಿದ್ದೇವೆಂದು, ರೈತನ ಮಗ ಎನ್ನುವುದು ಮರೆತು ಮಾತನಾಡುತ್ತಿದ್ದೀರಿ. ಮಾನ್ಯ ಮಂಜುನಾಥ್ ಅವರು ಸುಮ್ಮನೆ ಇರಬೇಕು, ಇನ್ನು ನಾನು ಯಾರಿಗೂ ಯೀಲ್ಡ್ ಆಗುವುದಿಲ್ಲ. ಲೇವಿ ನೀತಿ ಕೇವಲ ಅಕ್ಕಿಯ ಮೇಲೆ ಮಾತ್ರ ಅಲ್ಲ ೧೯೬೬ನೇ ಇಸವಿಯಿಂದ ಈ ಆಹಾರ ಇಲಾಖೆ ನಾವು ಬೆಳೆದ ಜೋಳ ಮತ್ತು ರಾಗಿಯನ್ನು ಇಂತಹ ಕನಿಷ್ಟ ಬೆಲೆಯಲ್ಲಿ ತೆಗೆದುಕೊಂಡು ಹೋಗಿದೆ. ೧೯೬೬ರಿಂದ ಈ ೧೯೮೦ನೇ ಇಸವಿಯವರೆಗೆ, ನೀವು ಲೆವಿ ದರದಲ್ಲಿ ನಮ್ಮಿಂದ ಎಷ್ಟು ಲೂಟ್ ಮಾಡಿದಿರಿ ಎನ್ನುವುದನ್ನು ಸ್ವಲ್ಪ ದಯವಿಟ್ಟು ಲೆಕ್ಕ ಹಾಕಿ, ನಾವು ಲೆಕ್ಕ ಹಾಕಿದ್ದೇವೆ. ೧೯೭೯–೮೦ರಲ್ಲಿ ನಮ್ಮಿಂದ ೫೦ ಕೋಟಿ ರೂಪಾಯಿ ಅಕ್ಕಿ ಲೂಟ್ ಮಾಡಿದ್ದೀರಿ. ಅದೇ ನಿಮ್ಮ ಕೃಷಿ ಇಲಾಖೆ ವರದಿ ಹೇಳುತ್ತದೆ. ಕಳೆದ ವರ್ಷ ನಾವು ಕರ್ನಾಟಕದಲ್ಲಿ ೧೫೦ ಲಕ್ಷ ಟನ್ ಕಬ್ಬು ಬೆಳೆದೆವು ಅದರಲ್ಲಿ ಶೇಕಡ ೬೫ ಭಾಗ ಲೆವಿ ಕಬ್ಬು ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಕ್ವಿಂಟಾಲಿಗೆ ೮೨೦ ರೂಪಾಯಿ ಆದರೆ ಸಕ್ಕರೆ ಬೆಲೆ ೪೭೦ ರೂಪಾಯಿ ಮುಕ್ತ ಮಾರುಕಟ್ಟೆಯಲ್ಲಿ ಒಂದು ಕೆ. ಜಿ. ಸಕ್ಕರೆ ೮ ರೂಪಾಯಿ ೨೦ ಪೈಸೆ ಆದರೆ, ಲೆವಿ ಸಕ್ಕರೆ ಒಂದು ಕೆ.ಜಿ.ಗೆ ೪ ರೂಪಾಯಿ ೭೦ ಪೈಸೆ. ಒಂದು ಕೆ.ಜಿ.ಗೆ ನಾಲ್ಕೂವರೆ ರೂಪಾಯಿ ವ್ಯತ್ಯಾಸ ಆಯಿತು. ಲೆಕ್ಕ ಹಾಕಿದರೆ ಶೇಕಡ ೪೫ ಭಾಗ ಲೆವಿ ಕಬ್ಬು ಅಂದರೆ ಸುಮಾರು ೬೦ ಲಕ್ಷ ಟನ್ ಕಬ್ಬನ್ನು ನಾವು ಲೆವಿ ದರದಲ್ಲಿ ಕೊಟ್ಟಿದ್ದೇವೆ. ೬೦ ಲಕ್ಷ ಟನ್ ಕಬ್ಬು ಅಥವಾ ೬೦ ಲಕ್ಷ ಕ್ವಿಂಟಾಲ್ ಸಕ್ಕರೆಗೆ ನೀವು ಕೆ.ಜಿ.ಗೆ ನಾಲ್ಕೂವರೆ ರೂಪಾಯಿಂದ ಗುಣಿಸಿರಿ ಎಷ್ಟು ಆಗುತ್ತದೆ ? ಅಂದರೆ ೪೦೦ ಕೋಟಿ ರೂಪಾಯಿ ಆಗುತ್ತದೆ. ಬರೀ ಲೆವಿ ಕಬ್ಬು ಮತ್ತು ಲೆವಿ ಅಕ್ಕಿಯಲ್ಲಿ ೪೫೦ ಕೋಟಿ ರೂಪಾಯಿಗಳನ್ನು ನಮ್ಮಿಂದ ನೀವು ಲೂಟ್ ಮಾಡಿದ್ದೀರಿ. ಮತ್ತೆ ನಮ್ಮನ್ನು ಸಾಲ ಕೇಳುತ್ತೀರಿ. ತಾವು ಯಾರ ಅನ್ನದ ಋಣದಲ್ಲಿದ್ದೀರಿ ? ನಾವು ಕರ್ನಾಟಕದ ರೈತರು ಸಹಕಾರ ಸಂಘಗಳ ಋಣದಲ್ಲಿದ್ದೇವೊ ಅಥವಾ ನಮ್ಮ ಅನ್ನದ ಋಣದಲ್ಲಿ ನೀವು ಇದ್ದೀರೋ ಇದು ತೀರ್ಮಾನವಾಗಬೇಕು. ಈ ಲೆವಿ ನೀತಿಯನ್ನು ತಾವು ರದ್ದು ಮಾಡಬೇಕು. ರೈತನ ಮಕ್ಕಳು ನಾವು ೧೫೦ ಜನ ಬಂದಿದ್ದೇವೆ ಎಂದು ಮಾತನಾಡುತ್ತಿದ್ದೀರಿ. ನೀವು ಮಾಡಬೇಕಾಗಿರುವುದು ಮೊದಲನೆಯ ಕೆಲಸ ಈ ಲೂಟಿ ನಿಲ್ಲಿಸಬೇಕು.

ಶ್ರೀ ಅಜೀಜ್ ಸೇಠ್.—ಮೊದಲು ಒಂದು ಎಕರೆ ಎಕ್ಸೆಮ್ಷನ್ ಇತ್ತು ಎರಡು ಎಕರೆ ಮೂರು ಎಕರೆ ಐದು ಎಕರೆ ಮೇಲೆ ಇಷ್ಟು ಎಂದು ಇತ್ತು. ಈಗ ಆ ಪದ್ಧತಿಯನ್ನು ರದ್ದು ಮಾಡಿ ಮಿಲ್ ಲೆವೆಲ್‌ನಲ್ಲಿ ಲೆವಿ ತೆಗೆದುಕೊಳ್ಳುತ್ತಿದ್ದಾರೆ.

೫–೨೦ ಪಿ. ಎಂ.

ಮೂರನೇ ಒಂದು ಭಾಗ ಲೆವಿ ಕೊಡಬೇಕೆಂದು ಹೇಳುತ್ತಿದ್ದರು, ಈಗ ಅಷ್ಟೂ ಬರುತ್ತಿಲ್ಲ. ಆದರೆ ಏನೂ ಒಂದು ತೀರ್ಮಾನ ಮಾಡಿಕೊಂಡು ಇವತ್ತು ತೆಗೆದುಕೊಳ್ಳುತ್ತಿದ್ದಾರೆ. ಅಗ್ರಿಕಲ್ಚರಿಸ್ಟ್‌ದಿಂದ ನೇರವಾಗಿ ಲೆವಿ ಪ್ರಕಾರ ತೆಗೆದುಕೊಳ್ಳುತ್ತಾ ಇಲ್ಲ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಜೀಜ್ ಸೇಠ್‌ರವರೆ ರೈಸ್‌ಮಿಲ್‌ನಲ್ಲಿ ಅಕ್ಕಿ ಹುಟ್ಟುತ್ತೇನು ಮಿಲ್ ಪಾಯಿಂಟ್‌ನಿಂದ ತೆಗೆದುಕೊಂಡರೆ ರೈತನ ತಲೆ ಬೋಳಿಸುವುದು ತಾನೆ ಚೌರ ಆಗುವುದು ರೈತನಿಗೆ ತಾನೆ.

ಶ್ರೀ ಅಜೀಜ್ ಸೇಠ್.—ಅಗ್ರಿಕಲ್ಚರ್ ಪಾಯಿಂಟ್‌ನಿಂದ ಬೇಡ, ಮಿಲ್ ಪಾಯಿಂಟ್‌ನಿಂದ ಬೇಡ ಎಂದರೆ ಏನು ಮಾಡುವುದು ? but what about subsidised food. From where do we get the rice... you cannot have both...ಇಲ್ಲಿ ಕಡಿಮೆ ದರದಲ್ಲಿ ಬಡವರಿಗೆ ಹಸಿರು ಕಾರ್ಡ್‌ಕೊಡಿ ಎಂದು ಹೇಳುತ್ತೀರಿ. ಅಲ್ಲಿ ಅಗ್ರಿಕಲ್ಚರಿಸ್ಟ್‌ನಿಂದ ತೆಗೆದುಕೊಳ್ಳಬೇಡಿ ಎಂದು ಹೇಳುತ್ತೀರಿ ಮಿಲ್‌ನಿಂದ ಲೆವಿ ತೆಗೆದುಕೊಂಡರೆ ಎಲ್ಲಿಂದ ಉತ್ಪಾದನೆಗೆ ಆಯಿತು ಎಂದು ಕೇಳುತ್ತೀರ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತನಿಗೆ ಪುಗಸಟ್ಟೆ ನೀರು ಕೊಡಿ, ಪುಗಸಟ್ಟೆ ಗೊಬ್ಬರ ಕೊಡಿ ಬಡ್ಡಿ ಇಲ್ಲದ ಸಾಲ ಕೊಡಿ.

PROF M. D. NANJUNDASWAMY.—I know all these Governments have several doubts I know you have several doubts......

SRI AZIZ SAIT.—You can tell me what other system should be introduced. In total if you say no rice at all no Price support at all no levy at all leave it to nature I am prepared for it.

ಶ್ರೀ ಎಂ. ಡಿ. ನಂಜುಂಡಸ್ವಾಮಿ.— ಮಾನ್ಯ ಆಹಾರ ಮಂತ್ರಿಗಳು ಬಡವರ ಬಗ್ಗೆ ಮಾತನಾಡುತ್ತಿದ್ದರು. ಹಸಿರು ಕಾರ್ಡಿನವರಿಗೆ ಹೇಗೆ ಅಕ್ಕಿಯನ್ನು ಕೊಡುತ್ತಾರೆಂದು ವಿಚಾರ ಮಾಡಬೇಕಾಗುತ್ತದೆ. ಹಸಿರು ಕಾರ್ಡಿನಲ್ಲಿ ಕೊಡುವ ಮುಗ್ಗಲು ಅಕ್ಕಿಯನ್ನು ಆತ ತಿನ್ನಬೇಕಾಗಿಲ್ಲ. ಇಲ್ಲಿ ಅತ್ಯುತ್ತಮವಾದ ಅಕ್ಕಿ ಎಂದು ಬರೆದಿದ್ದೀರಲ್ಲ ಅದನ್ನು ಬೆಳೆಯುವವರು ಬೇರೆ ಯಾರೂ ಅಲ್ಲ ಈಹಸಿರು ಕಾರ್ಡಿನವರೇ ಆದ್ದರಿಂದ ಇಂತಹ ಮುಗ್ಗಲು ಅಕ್ಕಿಯನ್ನು ಏಕೆ ಅವನು ತಿನ್ನಬೇಕು? ಅದನ್ನು ಅವನು ತಿನ್ನಬೇಕಾಗಿಲ್ಲ. ತಾವು ಕಾರ್ಮಿಕ, ಮಂತ್ರಿ ಕೂಡ ಆಗಿದ್ದೀರಿ, but you never thought for a moment that need based wages must be fixed for agricultural labourers also......ಏನು ಮಾಡಿದ್ದೀರಿ ಎಂದರೆ ಒಬ್ಬ ಅಗ್ರಿಕಲ್ಚರ್ ಲೇಬರರ್‌ಸ್‌ಗೆ ೧೨ ರೂಪಾಯಿ ಕೂಲಿ ನಿಗದಿ ಮಾಡಿದರೆ ರೈಲ್ವೆ ಡಬ್ಬಿಯಲ್ಲಿ ಕಸ ಹೊಡೆಯುವವನಿಗೆ ೩೫ ರೂಪಾಯಿ ನಿಗದಿ ಮಾಡಿದ್ದೀರಿ. ಇದಕ್ಕೆ ಯಾವ ವೈಜ್ಞಾನಿಕ ತಳಹದಿ ಇದೆ? I know you cannot answer these questions No. one can answer these questions. What is the Scientific basis for fixation of such wages...ಬಿಸಿಲು, ಮಳೆ, ಹಗಲು, ರಾತ್ರಿ ಎನ್ನದೆ ದುಡಿಯುವ ಕೃಷಿಕನಿಗೆ ೧೨ ರೂಪಾಯಿ ನಿಗದಿ ಮಾಡುವುದು ರೈಲ್ವೆ ಡಬ್ಬಿಯಲ್ಲಿ ಕಸ ಹೊಡೆಯುವವನಿಗೆ ೩೫ ರೂಪಾಯಿ ಕೂಲಿ ನಿಗದಿ ಮಾಡುವುದು. ಇದು ಯಾವ ವೇಜ್ ಪಾಲಿಸಿ. ಮತ್ತೆ ಅವನಿಗೇ ಹಸಿರು ಕಾರ್ಡ್ ಕೊಡುವುದು. What right do yon have to ask him to eat that rice why Should he eat the dirty rice. ಅವನು ನಿಮಗೆ ಸಣ್ಣ ಅಕ್ಕಿ ಬೆಳೆದವನು. ಅವನು ಸಣ್ಣ ಅಕ್ಕಿ ತಿನ್ನಬೇಕು. ಏನೂ ಕೆಲಸ ಮಾಡದೇ ಇರುವವರು ಮುಗ್ಗಲು ಅಕ್ಕಿ ತಿನ್ನಬೇಕು. ನನಗೆ ಹೆಚ್ಚು ಸಮಯ ಕೊಡಬೇಕಾಗುತ್ತದೆ. ಏಕೆಂದರೆ, ಆಹಾರ ಮಂತ್ರಿಗಳು ನನ್ನ ಸಮಯವನ್ನೆಲ್ಲ ಹಾಳು ಮಾಡುತ್ತಿದ್ದಾರೆ. ನಮ್ಮ ಜೀವನ ಹಾಳು ಮಾಡಿ ಆಯಿತು ಈಗ ನಮ್ಮ ಟೈಮೆಲ್ಲಾ ಹಾಳು ಮಾಡುತ್ತಿದ್ದಾರೆ. ಆಹಾರ ಬೇಡಿಕೆಯ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ರೈತನ ಮನೆ ಹಾಳು ಮಾಡುತ್ತಿರುವಂತಹ ಇಲಾಖೆಯ ಈ ಬೇಡಿಕೆಗೆ ನನ್ನ ಸಂಪೂರ್ಣವಾದ ವಿರೋಧವಿದೆ. ಲೆವಿ ಕಾನೂನನ್ನು ರದ್ದು ಮಾಡಿದರೆ ನಾನು ನಿಮ್ಮ ಬೇಡಿಕೆಗೆ ಒಪ್ಪಿಗೆ ಕೊಡುವುದಕ್ಕೆ ಮಾತ್ರ ತಯಾರಿದ್ದೇನೆ. ಇನ್ನು ಸಹಕಾರ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ ಮಾನ್ಯ ಕಂದಾಯ ಮಂತ್ರಿಗಳು ಸಾಲವನ್ನು ಸೂಟು ಮಾಡುವುದು ಸರಿಯಲ್ಲ ಅದರ ಬದಲು ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಹಳ್ಳಿ ಗಾಡಿನ ಜನರ ಜೀವನ ಉತ್ತಮ ಮಾಡಬೇಕು ಎಂದು ಹೇಳಿದರು; ಮಾಡಿ ಯಾರು ಬೇಡವೆಂದು ಹೇಳಿದರು. ಸಹಕಾರ ಇಲಾಖೆಯ ವರದಿಯಲ್ಲಿ ಅವರ ಪ್ರೋಸೆಸಿಂಗ್ ಆ್ಯಕ್ಟಿವಿಟೀಸ್ ಎಂದು ಏನು ಭಾಗ ಇದೆ ಇದನ್ನು ನೋಡಬೇಕು. ಇಡೀ ಕೋ-ಅಪರೇಟೀವ್ ಆ್ಯಕ್ಟಿವಿಟೀಸ್‌ನಲ್ಲಿ ಈ ಪ್ರೊಸೆಸಿಂಗ್ ಆ್ಯಕ್ಟಿವಿಟೀಸ್ ಎಷ್ಟು ಭಾಗ ಇದೆ ಎನ್ನುವುದನ್ನು ನಾವು ನೋಡಿದರೆ ಗೊತ್ತಾಗುತ್ತದೆ. ಒಂದಕ್ಕೊಂದು ಸಂಬಂಧವಿಲ್ಲದೆ ಇರತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿರುವ ಸರ್ಕಾರ ತಮ್ಮದು. ಸಹಕಾರಿ ಕ್ಷೇತ್ರದಲ್ಲಿ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್ ಅನ್ನು ತೆಗೆಯಬೇಡಿ ಎಂದು ಯಾರು ಅಂದರು ತೆಗೆಯಬೇಕು, ಆದರೆ ನಿಮ್ಮ ಕೈಗಾರಿಕಾ ನೀತಿಯಲ್ಲಿ ನಿಮ್ಮ ಹಣಕಾಸಿನ ಸಚಿವರು ಏನು ಹೇಳುತ್ತಾರೆ ಅಂದರೆ ಹೈಟೆಕ್ ಟೆಕ್ನಾಲಜಿ, ಹೈಟೆಕ್ ಇಂಡಸ್ಟ್ರೀಸ್ ಎಂದು. ಇವನ್ನು ಯಾವ ಕ್ಷೇತ್ರದಲ್ಲಿ ತೆಗೆಯುತ್ತೀರಿ. ಜೊತೆಗೆ ಇರುವ ಕಾರ್ಖಾನೆಗಳನ್ನು ಮಾರುವಂತಹ ಒಂದು ಯೋಜನೆ, ಪ್ರೈವೇಟ್ ಸೆಕ್ಷನ್, ಗೋರ್‌ಬಚೇವ ಪೆರಿಸ್ಟ್ರಾಯಿಕ ಗ್ಲಾಸ್ ನಾಸ್ಟ್, ಎಲ್ಲ ಒಟ್ಟಿಗೆ ಮಾತನಾಡುತ್ತಿದ್ದೇವೆ. ಇದರಲ್ಲಿ ಏನಾದರೂ ಅರ್ಥ ಇದೆಯೇ? ಸಹಕಾರಿ ಮಂತ್ರಿಗಳಿಗೆ ನಾನು ಸಲಹೆ ಮಾಡುವುದು ಏನೆಂದರೆ, ಆದಷ್ಟು ಬೇಗ ಕೈಗಾರಿಕಾ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ, ನಿಮ್ಮ ಕೈಗಾರಿಕಾ ನೀತಿಯನ್ನು ಸಂಪೂರ್ಣ ಬದಲಾಯಿಸಿ ಎಂದು. ಕರ್ನಾಟಕದ ಕೈಗಾರಿಕಾ ನೀತಿಯನ್ನು ರೂಪಿಸಿ ಇನ್ನು ಮುಂದೆ ಯಾವುದೇ ಕೈಗಾರಿಕೆ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕಾದರೆ ಅದು ಸಹಕಾರಿ ಕ್ಷೇತ್ರದಲ್ಲಿಯೇ ಆಗಬೇಕು ಎನ್ನತಕ್ಕ ನೀತಿಯನ್ನು ನೀವು ರೂಪಿಸಿಕೊಂಡರೆ ಹಳ್ಳಿಗಾಡಿನ ಜನ ಜೀವನವನ್ನು ಉತ್ತಮ ಮಾಡಬಹುದು. ಕೊನೆಯದಾಗಿ, ಒಂದು ಮುಖ್ಯವಾದ ವಿಷಯವನ್ನು ಹೇಳುತ್ತೇನೆ. ಮಾಜಿ ಸಾರಿಗೆ ಮಂತ್ರಿಗಳು ಒಂದು ವಿಚಾರವನ್ನು ಚರ್ಚಿಸಿದರು. ಖಾಸಗೀಕರಣದ ವಿರುದ್ಧ ಮಾತನಾಡುತ್ತಾ ರಾಷ್ಟ್ರೀಕರಣದ ಬಗ್ಗೆ ಮಾತನಾಡಿದರು. ಇದು ಏತಕ್ಕೆ ಬಹಳ ಮುಖ್ಯವೆಂದರೆ, ನಾನು ಖಾಸಗಿಕರಣದ ವಿರೋಧಿ. ಆದರೆ ನಾವು ರಾಷ್ಟ್ರೀಕರಣದ ಬಗ್ಗೆ ಒಂದು ಸ್ಪಷ್ಟವಾದ ಕಲ್ಪನೆಯನ್ನು ಇಟ್ಟುಕೊಳ್ಳಬೇಕು. ಏತಕ್ಕೆಂದರೆ ಈಗ ತಾವು ಮಾತನಾಡುತ್ತಿರುವಂಥ ರಾಷ್ಟ್ರೀಕರಣ ಏನಿದೆ ಅದು ರಾಷ್ಟ್ರೀಕರಣ ಅಲ್ಲ. ಒಂದು ಉದಾಹರಣೆಯನ್ನು ಕೊಡುತ್ತೇನೆ ಶ್ರೀ ದೇವರಾಜ್ ಅರಸುರವರ ಕಾಲದಲ್ಲಿ ಕಂಟ್ರಾಕ್ಟ್

ಕ್ಯಾರೇಜ್‌ಗಳನ್ನು ರಾಷ್ಟ್ರೀಕರಣ ಮಾಡಿದರು. ಆದರೆ ಅದು ರಾಷ್ಟ್ರೀಕರಣ ಆಗಲಿಲ್ಲ. ನ್ಯಾಷನಲೈಜೇಷನ್ ಅನ್ನುವುದಕ್ಕೆ ಒಂದು ಅರ್ಥ ಉಂಟು. With that process the nation should move. ರಾಷ್ಟ್ರೀಕರಣದ ಜೊತೆಗೆ ರಾಷ್ಟ್ರದ ಜನತೆ ಕೈಗೂಡಿಸಬೇಕು. ಆದರೆ ನಾವು ಮಾಡಿರತಕ್ಕ ಕೆಲಸವೇನೆಂದರೆ ಸರ್ಕಾರೀಕರಣ ರಾಷ್ಟ್ರೀಕರಣಕ್ಕೂ ಸರ್ಕಾರೀಕರಣಕ್ಕೂ ಇರತಕ್ಕ ವ್ಯತ್ಯಾಸವನ್ನು ನಾವು ಕಂಡುಕೊಳ್ಳಬೇಕು Rashtrikarana dose not go with the concept of state ownership. Nationalisation goes with the concept of social ownership. When once we say that it goes with the concept of social ownership social activity should be identified with it associated with it ನಾವು ಮಾಡುತ್ತಿರುವ ರಾಷ್ಟ್ರೀಕರಣ, ಕೇಂದ್ರೀಕರಣದ ನಡುವೆ. ಆದುದರಿಂದ ನಾನು ಸಾರಿಗೆ ಸಚಿವರಿಗೆ ಸಲಹೆ ಮಾಡುವುದು ಇಷ್ಟೆ. ಶ್ರೀಮತಿ ದಮಯಂತಿ ಬೋರೇಗೌಡರು, ಬ್ರಹ್ಮ ಬಂದರೂ ಸಾರಿಗೆ ಇಲಾಖೆಯನ್ನು ಸರಿಪಡಿಸಲು ಆಗುವುದಿಲ್ಲವೆಂದರು ಇನ್ನು ಕೆಲವರು ಮಾತನಾಡುತ್ತಾ ಅದನ್ನು ದೇವರೇ ಕಾಪಾಡಬೇಕು ಎಂದರು. ಅದೇನೂ ಇಲ್ಲ, ಇದನ್ನು ಸರಿಮಾಡಬಹುದು ಒಂದು ಬದಲಾವಣೆಗೆ ತಾವು ತಯಾರಾದರೆ ಮಾತ್ರ ಇದು ಸಾಧ್ಯ ನಿಮ್ಮ ರಾಷ್ಟ್ರೀಕರಣ ಕೇಂದ್ರೀಕರಣದ ಜೊತೆಗೆ ಇರುವುದರಿಂದ ಸಾರಿಗೆ ಇಲಾಖೆ ನಿಮ್ಮ ಕೈಮೀರಿ ಹೋಗಿದೆ. You are in capable of setting it right. ಯೋಚನೆ ಮಾಡಿ ವಿಕೇಂದ್ರೀಕರಣ ಏನಾದರೂ ಮಾಡಲು ಆಗುತ್ತದೆಯೇ ಎಂದು. ಕನಿಷ್ಟ ಪಕ್ಷ ತಮಿಳುನಾಡಿನಲ್ಲಿ ಸಾರಿಗೆ ಇಲಾಖೆಯಲ್ಲಿ ಎಷ್ಟು ವಿಕೇಂದ್ರೀಕರಣ ಮಾಡಿದ್ದಾರೆ. ಅಷ್ಟದರೂ ಮಾಡಿ in Tamil Nadu, it is decentralised under State ownership but I would like to go a step ahead ಅಷ್ಟು ಧೈರ್ಯ ಮಾಡುತ್ತೀರೊ ಇಲ್ಲವೋ Desentrilisation with social Ownership. ಇದನ್ನು ಮಾಡಿ, ವಿಕೇಂದ್ರೀಕರಣ ಇದರ ಜೊತೆಗೆ ಸಹಕಾರೀಕರಣ ಇವು ಎರಡು ಸೇರಿದಾಗ ರಾಷ್ಟ್ರೀಕರಣ ಆಗುತ್ತದೆ. ರಾಜ್ಯದ ಜನ ಕೂಡ ಇದರ ಜೊತೆಯಲ್ಲಿ ಭಾಗವಹಿಸುತ್ತಾರೆ. ಅವರು ಭಾಗವಹಿಸುವುದರ ಮೂಲಕ ನಿಮ್ಮ ಇಲಾಖೆಯು ಆರೋಗ್ಯಕರವಾಗಬಹುದು ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಶ್ರೀ ಸ್ವಾಮಿರಾವ್‌ರವರವರು ಪೀಠವನ್ನು ಅಲಂಕರಿಸಿದರು.)—

† ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ).— ಸನ್ಮಾನ್ಯ ಅಧ್ಯಕ್ಷರೆ ಇಂದು ನಾನು ಆಹಾರ ಸಾರಿಗೆ ಮತ್ತು ಸಹಕಾರ ಇಲಾಖೆಗಳ ಬೇಡಿಕೆಗಳನ್ನು ಪುಷ್ಟೀಕರಣಗೈಯುತ್ತಾ, ನನ್ನ ಒಂದೆರಡು ಅನಿಸಿಕೆಗಳನ್ನು ಈ ಸದನದ ಮುಂದಿಡಲು ಸಂತೋಷಪಡುತ್ತೇನೆ.

ಮುಖ್ಯವಾಗಿ. ಈ ಸಹಕಾರಿ ಪದ್ಧತಿಯಿಂದ ಬಡ ಜನರ ಜೀವನವನ್ನು ಮೇಲ್ಮಟ್ಟಕ್ಕೆ ತರಲು ಸಮತಾವಾದ ಸಮಾಜವಾದ ಅಸ್ತಿತ್ವ ನಮ್ಮ ದೇಶದಲ್ಲಿ ಬೇರೂರಬೇಕೆಂಬ ಆಸೆಯಿಂದ ಪೂಜ್ಯ ಪಿತ ಮಹಾತ್ಮಾ ಗಾಂಧೀಜಿಯವರು ಇದಕ್ಕೆ ಪ್ರೋತ್ಸಾಹವನ್ನು ಕೊಟ್ಟು ಇದನ್ನು ಏನು ಬೆಳೆಸಿದರೋ ಅದು ಇವತ್ತು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿರುವಂಥ ಸಂದರ್ಭವನ್ನು ನಾವು ಕಾಣುತ್ತಿದ್ದೇವೆ. ಬಡ ಜನರ ಉಪಯೋಗಕ್ಕೆಂದು ಸ್ಥಾಪಿಸಲ್ಪಟ್ಟಂಥ ಈ ಸಹಕಾರ ಸಂಘಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಇವೆ. ಮುಖ್ಯವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಉತ್ತಮ ಮಟ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ನಮಗೆ ಇಲ್ಲಿನ ಲೆಕ್ಕಪತ್ರಗಳು ತೋರಿಸುತ್ತಿದ್ದರೂ ಸಹ ಆ ಸಹಕಾರ ಸಂಘಗಳಲ್ಲಿ ಬೇರೂರತಕ್ಕ ಕೆಲವೊಂದು ಏನು ಅನಿಷ್ಟ ತೊಂದರೆಗಳಿವೆ ಅವುಗಳನ್ನು ಆಮೂಲಾಗ್ರವಾಗಿ ಬದಲಾಯಿಸುವ ಸಂದರ್ಭ ಬಂದರೆ ಮಾತ್ರ ಈ ಸಹಕಾರ ನಿಜವಾದ ಸಹಕಾರಿಯಾಗಿ ನಮ್ಮ ಸಮಾಜದ ಉದ್ಧಾರಕ್ಕೆ ನಾಂದಿಯಾಗಬಹುದು. ಉದಾಹರಣೆಗೆ ಹೇಳುವುದಾದರೆ ಈಗ ತಾನೆ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ನಮ್ಮ ಮುಲ್ಕಿ ಸಹಕಾರ ಬ್ಯಾಂಕ್‌ನಲ್ಲಿ ಸುಮಾರು ೨೪ ಲಕ್ಷ ರೂಪಾಯಿ ಬೆಲೆ ಬಾಳುವ ಅಡವಿಟ್ಟ ಚಿನ್ನದ ಕಳುವಿನ ಬಗ್ಗೆ ಪ್ರಸ್ತಾವನೆಯನ್ನು ಮಾಡಿದರು. ೧ ವರ್ಷ ೪ ತಿಂಗಳ ಹಿಂದೆ ಮುಲ್ಕಿ ಸಹಕಾರ ಬಾಂಕಿನಲ್ಲಿ ಚಿನ್ನದ ಕಳವು ಜರಗಿತ್ತು. ಪಾಪದ ಜನರು ತಮ್ಮ ಸಂಕಷ್ಟಗಳನ್ನು ನಿವಾರಿಸಿಕೊಳ್ಳಲು ತಮ್ಮ ಒಡವೆಗಳನ್ನು ಅಡವಿಟ್ಟು ಹಣವನ್ನು ತೆಗೆದುಕೊಂಡು ಹೋಗಿದಾರೆ. ಇಲ್ಲಿ ನಡೆದಿರತಕ್ಕ ಕಳ್ಳತನದಿಂದಾಗಿ ಇವತ್ತು ಆ ಬ್ಯಾಂಕಿಗೆ ಹಣವೂ ಇಲ್ಲ, ಒಡೆವೆಯೂ ಇಲ್ಲ ಎಂದು ಹೇಳುವಂಥ ಡೋಲಾಯಮಾನ ಪರಿಸ್ಥಿತಿ ಬಂದಿದೆ ಆಗಿನ ಸರ್ಕಾರ ಇದ್ದಾಗ ಇದನ್ನು ತನಿಖೆಗಾಗಿ ಸಿ. ಓ. ಡಿ. ಗೆ ಒಪ್ಪಿಸಬೇಕೆಂದು ನಾವು ಬಹಳ ಸಾರಿ ಒತ್ತಾಯ ಮಾಡಿದೆವು, ಆಗ ಜನತಾ ದಳದ ಸರ್ಕಾರ ಇತ್ತು. ಅಂದಿನ ಮಂತ್ರಿಗಳಲ್ಲಿ ನಾವು ಎಷ್ಟೋ ಮನವಿ ಮಾಡಿಕೊಂಡರೂ ಪ್ರಯೋಜನವಾಗಲಿಲ್ಲ. ಅವರು ನಮ್ಮ ಮನವಿಯನ್ನು ಕೇಳದೆ ಕೇವಲ ಪೋಲಿಸರ ಪತಿಯಿಂದ ತನಿಖೆಯನ್ನು ಮಾಡಿಸಿದರು. ಆದರೆ ಬಹಳ ನಿಧಾನವಾಗಿ ಸಾಗಿದಂಥ

ಈ ಕಳವಿನ ಪತ್ತೆ ಸುಮಾರು ೧ ವರ್ಷ ೧ ತಿಂಗಳಾದರೂ ಪತ್ತೆ ಆಗದೆ, ಅದರ ಗೊತ್ತು ಗುರಿ ಇಲ್ಲದೆ ಜನರು ಬಹಳ ಕಷ್ಟಪಡುವಂತಾಯಿತು. ಕಡೆಗೆ ಪೋಲಿಸ್ ಇಲಾಖೆಯವರು ಏನು ಹೇಳಿದರೆಂದರೆ, ಇದು ನಮ್ಮಿಂದ ಅಸಾಧ್ಯ. ನಿಮಗೆ ಬರಬಹುದಾದ ಹಣವನ್ನು ೯ ಲಕ್ಷ ಇನ್‌ಷ್ಯೂರೆನ್ಸ್ ಹಣ ಏನು ಇಟ್ಟಿದೆ ಅದರಿಂದ ಪಡೆದುಕೊಳ್ಳಬೇಕೆಂದು ಸೂಚನೆಯನ್ನು ಕೊಟ್ಟರು. ಇವತ್ತು ನಾವು ಇನ್‌ಷ್ಯೂರೆನ್ಸ್‌ನಿಂದ ಹಣವನ್ನು ಪಡೆಯುವಂಥ ಪರಿಸ್ಥಿತಿ ಬಂದಿದೆ. ಈ ಹಣವನ್ನು ನಾವು ಪಡೆದುಕೊಂಡರೂ ಕೂಡ ಯಾವ ಜನರು ೯.೧೬ ಲಕ್ಷ ರೂಪಾಯಿಗಳನ್ನು ಫಿಕ್ಸೆಡ್ ಡಿಪಾಜಿಟ್‌ನಲ್ಲಿ ಇಟ್ಟಿದ್ದಾರೆ. ಅವರಲ್ಲಿ ಸುಮಾರು ೪ ಲಕ್ಷರಷ್ಟು ಪಿಗ್ಮಿ ಇವೆ, ಸುಮಾರು ೩ ಲಕ್ಷದಷ್ಟು ಎಸ್ ಬಿ. ಅಕೌಂಟ್ ಉಂಟು. ಇವತ್ತು ಈ ಜನರ ಹಣವನ್ನು ನಮಗೆ ಕೊಡಲಿಕ್ಕೆ ಆಗದಂಥ ಪರಿಸ್ಥಿತಿ ಆ ಬ್ಯಾಂಕ್‌ಗೆ ಬಂದೊದಗಿದೆ. ಇದರಿಂದಾಗಿ ಏನು ಮಾಡಬೇಕೆಂದು ನಮಗೆ ತೋಚುತ್ತಿಲ್ಲ. ಒಂದುವೇಳೆ ಇನ್‌ಷ್ಯೂರೆನ್ಸ್ ಕಂಪೆನಿಯವರು ಹಣವನ್ನು ಕೊಟ್ಟರೂ ಕೂಡ ನಿಜವಾದ ಬೆಲೆಯ ಚಿನ್ನಕ್ಕೂ ಅವರು ಪಡೆದ ಸಾಲಕ್ಕೂ ಇರತಕ್ಕ ಅಂತರದ ಸುಮಾರು ೪ ಲಕ್ಷದ ೧೩ ಸಾವಿರ ರೂಪಾಯಿ ಮಾತ್ರ ಅವರಿಗೆ ಸಿಕ್ಕುತ್ತದೆ ಇನ್ನುಳಿದ ಸುಮಾರು ೧೩ ಲಕ್ಷ ರೂಪಾಯಿಯಷ್ಟು ಹಣವನ್ನು ಅಲ್ಲಿನ ಜನರು ಕಳೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ನಿವೇದನೆ ಮಾಡಿಕೊಳ್ಳುವುದೇನೆಂದರೆ, ನಿಜವಾಗಿ ಇನ್‌ಷ್ಯೂರೆನ್ಸ್ ಹಣದಿಂದ ಸಿಕ್ಕುವುದಾದರೆ ಸಿಕ್ಕಲಿ, ಇಲ್ಲದಿದ್ದರೆ ಸಿ.ಓ.ಡಿ. ತನಿಖೆಗೆ ಆಜ್ಞೆ ಮಾಡಿ, ಚಿನ್ನ ಪತ್ತೆಯಾದರೆ ನಮ್ಮ ಬಡ ಜನರ, ಪಾಪದ ಜನರ ಕಣ್ಣೀರನ್ನು ಒರೆಸುವಂಥ ಒಂದು ಪುಣ್ಯ ಕಾರ್ಯವನ್ನು ನೀವು ಮಾಡಿದಂತಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ,

ಮುಖ್ಯವಾಗಿ ಈ ಬ್ಯಾಂಕ್‌ನ ಈ ಒಂದು ಪ್ರಮೇಯದಿಂದ ಇಡೀ ನಮ್ಮ ಜಿಲ್ಲೆಯೇ ನಾಚಿಕೆ ಪಡುವಂಥ ಸಂದರ್ಭ ಬಂದಿದೆ. ಮುಖ್ಯವಾಗಿ ಈ ಬ್ಯಾಂಕ್‌ನ ಡೈರೆಕ್ಟರ್‌ಗಳಲ್ಲಿ ಇರತಕ್ಕ ಅನ್ಯೋನ್ಯತೆಯ ಕೊರತೆಯೇ ಈ ಕಳವಿಗೆ ಪ್ರೇರಕವಾಗಿದೆ ಎಂಬ ಭಾವನೆ ನಮ್ಮ ಜನರಲ್ಲಿ ಕಾಣುತ್ತಿದೆ. ಏಕೆಂದರೆ, ಕಳವಾದ ಕೂಡಲೇ ಬ್ಯಾಂಕ್‌ನಲ್ಲಿ ಡೈರೆಕ್ಟರ್‌ಗಳು ಮುಖಂಡರು ಏನು ತಮ್ಮ ಫಿಕ್ಸೆಡ್ ಡಿಫಾಜಿಟ್‌ನ್ನು ಇಟ್ಟುಕೊಂಡಿದ್ದರೋ ಅದನ್ನು ಮಾರನೆ ದಿವಸವೇ ವಾಪಸು ತೆಗೆದುಕೊಂಡರು. ಪಾಪದ ಜನರ ಚಿನ್ನ, ಒಡವೆ, ಹಣ ಎಲ್ಲವೂ ಕದ್ದು ಹೋಗಿದೆ, ಅವರು ಕೂಗಾಡುತ್ತಿದ್ದಾರೆ, ಇಂಥ ಸಂದರ್ಭದಲ್ಲಿ ನಮ್ಮ ಹಣವನ್ನು ನಾವು ವಾಪಸು ಪಡೆಯಬಾರದು ಎನ್ನತಕ್ಕ ಹೃದಯ ಸಿರಿವಂತಿಕೆಯ ಕೊರತೆ ಕಾಣುತ್ತಿರುವಾಗ ಈ ಆಡಳಿತ ಮಂಡಲಿಯವರು ಯಾರಿದ್ದಾರೆ ಇವರಿಂದ, ಇವರ ವರ್ತನೆಯಿಂದ ಇಡೀ ನಮ್ಮ ಊರಿಗೇ ನಾಚಿಕೆ ಬಂದಿದೆ ಎಂದು ಹೇಳಬಯಸುತ್ತೇನೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ಈ ಬಡ ಜನರಿಗೆ ಯೋಗ್ಯವಾದ ನ್ಯಾಯವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ನಮ್ಮ ಊರಿನಲ್ಲಿ ಹಾಲನ್ನು ಸರಬರಾಜು ಮಾಡುವ ಒಂದು ಸೊಸೈಟಿ ಇತ್ತು. ಅದು ನಮ್ಮ ಕರ್ನಾಟಕದಲ್ಲಿ ಎರಡನೇ ಸ್ಥಾನವನ್ನು ಪಡೆದಂತಹ ಸಹಕಾರ ಸಂಘವಾಗಿತ್ತು, ಸುಮಾರು ೨೬ ಗ್ರಾಮಗಳಲ್ಲಿ ೨೪ ಶಾಖೆಗಳನ್ನು ಹೊಂದಿದ್ದು ಸುಮಾರು ೪೦ ಮಂದಿ ಕೆಲಸಗಾರರನ್ನು ಹೊಂದಿದ್ದು ಕರ್ನಾಟಕ ಪ್ರಾಂತ್ಯದಲ್ಲಿ ಎರಡನೇ ಅತ್ಯುತ್ತಮ ಹಾಲು ಸರಬರಾಜು ಮಾಡುವ ಸೊಸೈಟಿ ಆಗಿತ್ತು. ನಮ್ಮ ಕೆ.ಎಂ.ಎಫ್.ನವರು ಬಂದು ನಿಮ್ಮ ಸೊಸೈಟಿಯನ್ನು ನಮಗೆ ಬಿಟ್ಟುಕೊಡಬೇಕೆಂದರು ನಾನು ಹೇಳಿದೆ. ಪ್ರಾಯಶಃ ಸರ್ಕಾರದಿಂದ ನಮ್ಮ ಜನತೆಗೆ ಸಹಾಯ ಸಿಕ್ಕುವುದಾದರೆ ನಮ್ಮ ಕೆಲಸಗಾರರಿಗೆ ತೊಂದರೆಯಾಗದಿದ್ದರೆ ಇವತ್ತೇ ನಮ್ಮ ಸೊಸೈಟಿಯ ಹತ್ತು ಲಕ್ಷ ರೂಪಾಯಿ ಬೆಲೆ ಬಾಳುವ ಸ್ವತ್ತುಗಳನ್ನು ಕೊಡಲು ಸಿದ್ಧರಿದ್ದೇವೆಂದು ಹೇಳುವಾಗ ನಿಮ್ಮ ಕೆಲಸಗಾರರು ಯಾರು ೩೭ ಜನರಿದ್ದಾರೆ ಅವರನ್ನು ಬಿಟ್ಟು ಸೊಸೈಟಿಯನ್ನು ನಮಗೆ ಕೊಡಿ ಎಂದರು. ನಾನು ಹೇಳಿದೆ, ನಮ್ಮನ್ನು ನಂಬಿದ್ದಂಥ ಆ ಕೆಲಸಗಾರರನ್ನು ಬಿಟ್ಟು ಎಷ್ಟು ತೊಂದರೆಯಾದರೂ ನಮ್ಮ ಸೊಸೈಟಿಯನ್ನು ನಿಮಗೆ ಕೊಡುವುದಿಲ್ಲವೆಂದಾಗ ೨೪ ಗಂಟೆಯೊಳಗೆ ನಮ್ಮಿಂದ ದಿನಕ್ಕೆ ೭೦೦ ಲೀಟರ್ ಹಾಲನ್ನು ಪಡೆಯುತ್ತಿದ್ದುದನ್ನು ಒಂದೇ ದಿನದಲ್ಲಿ ನಿಲ್ಲಿಸಿ ನಮ್ಮ ಸೊಸೈಟಿಯನ್ನು ಮುಳುಗಿಸುವಂಥ ಒಂದು ದೊಡ್ಡ ಕಠೋರವಾದ ಆಜ್ಞೆಯನ್ನು ಮಾಡಿದರು. ಏನೊ ದೇವರದಯ ಒಳ್ಳೆಯದಿತ್ತು, ನಮ್ಮ ಸೊಸೈಟಿ ಉಳಿಯಿತು. ಇಂದು ಸಹ ದಿನಕ್ಕೆ ೨ ಸಾವಿರ ಲೀಟರ್ ಹಾಲು ಸರಬರಾಜು ಮಾಡುತ್ತಾ ಉತ್ತಮ ಸೊಸೈಟಿಯಾಗಿ ಮುಂಚೆಗಿಂತ ಹೆಚ್ಚು ಲಾಭವನ್ನು ಪಡೆಯುತ್ತಿದೆ. ಯಾವುದೇ ಒಂದು ಸೊಸೈಟಿ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಕಂಡುಬಂದಾಗ ಸಹಕಾರ ಸಂಘದ ನೀತಿಗೆ ವಿರುದ್ಧವಾಗಿ ಅದೇ ಕ್ಷೇತ್ರದಲ್ಲಿ ಅದೇ ತರಹದ ಸೊಸೈಟಿಯನ್ನು ಪ್ರಾರಂಭ ಮಾಡುವಂತಹ ಸಂದರ್ಭ ಬಂದಿದೆ ಎಂದು ಹೇಳುವಾಗ ಆ ಸೊಸೈಟಿಯನ್ನು ಮುಳುಗಿಸುವ ದುರುದ್ದೇಶ ಈ ಸಹಕಾರ ರಂಗದಲ್ಲಿ ಕಾಣುತ್ತಿರುವುದು ಅತ್ಯಂತ ದುರದೃಷ್ಟದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಾರಿಗೆ ಸಚಿವರ ಗಮನಕ್ಕೆ ಕೇವಲ ಒಂದೆರಡು ವಿಷಯಗಳನ್ನು ಮಾತ್ರ ತರಬಯಸುತ್ತೇನೆ. ನಮ್ಮ ಜಿಲ್ಲೆ ಸಾರಿಗೆ ವಿಚಾರದಲ್ಲಿ ಬಹಳಷ್ಟು ಪ್ರಗತಿ ಪಡೆದಂತಹ ಬಹಳಷ್ಟು ಅನುಕೂಲತೆಯನ್ನು ಹೊಂದಿದಂತಹ ಜಿಲ್ಲೆಯಾಗಿದೆ. ನಮ್ಮ ಜಿಲ್ಲೆಯಲ್ಲಿ ಅರ್ಧ ಭಾಗದಷ್ಟು ರಾಷ್ಟ್ರೀಕರಣವಾಗಿದ್ದು ಉಳಿದರ್ಧ ಭಾಗದಲ್ಲಿ ಖಾಸಗೀಕರಣ ಇದೆ. ನಮ್ಮ ಜಿಲ್ಲೆಯಲ್ಲಿ ಮಂಗಳೂರಿನಿಂದ ಉಡುಪಿಗೆ ಹೋಗಬೇಕಾದರೆ ಖಾಸಗಿ ಬಸ್ಸಿನ ಟಿಕೆಟ್ ದರ ೫ ರೂಪಾಯಿ ಇದೆ. ಅದೇ ಸರ್ಕಾರಿ ಬಸ್ಸಿನಲ್ಲಿ ಮಂಗಳೂರಿನಿಂದ ಉಡುಪಿಗೆ ಹೋಗಬೇಕಾದರೆ ನಾವು ೧೦ ರೂಪಾಯಿಗಳನ್ನು ಈಗ ಕೊಡುವ ಪ್ರಮೇಯ ಬಂದಿದೆ. ಇದರ ಅರ್ಥವನ್ನು ತಾವು ಆಲೋಚಿಸಬಹುದು. ನಮ್ಮ ಸರ್ಕಾರದ ರಾಷ್ಟ್ರೀಕರಣದ ಧ್ಯೇಯದಿಂದಾಗಿ ಅದರ ಯೋಗ್ಯತೆ ಎಷ್ಟಿದೆ ಎಂಬುದನ್ನು ತಿಳಿಯಬಹುದು. ಏಕೆಂದರೆ, ೫ ರೂಪಾಯಿ ಟಿಕೆಟ್ ದರ ಇಟ್ಟ ಖಾಸಗಿ ಬಸ್ಸಿನವರು ನಮಗೆ ಇನ್ನೂ ಬಸ್ಸುಗಳು ಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಈ ಬಸ್ಸುಗಳ ಆಡಳಿತವನ್ನು ಬಹಳಷ್ಟು ಚಾಕಚಕ್ಯತೆಯಿಂದ ಶುದ್ಧೀಕರಿಸಬೇಕು, ಆ ಶಕ್ತಿ ನಿಮ್ಮಲ್ಲಿ ಉಂಟೆಂದು ನಾನು ನಂಬಿದ್ದೇನೆ. ಇವತ್ತಿನ ದಿವಸ ನಮ್ಮ ಮುಲ್ಕಿ ಆದಿಭಾಗದವರು ಬಹಳ ತೊಂದರೆಯಲ್ಲಿದ್ದಾರೆ. ನಮ್ಮಂಥವರು ಬೆಂಗಳೂರಿಗೆ ಬರಬೇಕಾದರೆ ಖಾಸಗಿ ಬಸ್ಸಿನಲ್ಲಿ ಮಂಗಳೂರಿಗೆ ಬಂದು ನಂತರ ರಾಷ್ಟ್ರೀಕೃತ ಬಸ್ಸಿನಲ್ಲಿ ಬೆಂಗಳೂರಿಗೆ ಬರಬೇಕಾಗಿದೆ. ಮುಲ್ಕಿ ಒಳ್ಳೆಯ ಊರು ಮತ್ತು ಅಲ್ಲಿ ಪವಿತ್ರವಾದ ಹಲವಾರು ದೇವಸ್ಥಾನಗಳು ಇವೆ; ಥರ್ಮಲ್ ಪ್ಲಾಂಟ್ ಇದೆ. ಕೊಂಕಣ ರೈಲ್ವೆಗೆ ಹೋಗುವ ರೈಲಿಗೆ ಮುಲ್ಕಿಯಲ್ಲಿ ನಿಲ್ದಾಣವಾಗುವ ಸಂದರ್ಭ ಇದೆ. ಹಲವಾರು ಶಾಲಾಕಾಲೇಜುಗಳನ್ನು ಹೊಂದಿರುವಂತಹ ಮುಲ್ಕಿಯಿಂದ ಅನೇಕ ಅಧಿಕಾರಿಗಳು ಬೆಂಗಳೂರಿಗೆ ಬರಬೇಕಾದರೆ ಮಂಗಳೂರಿನ ಮುಖವನ್ನು ನೋಡಬೇಕಾಗುತ್ತದೆ. ಉಡುಪಿಯಿಂದ ನಮ್ಮ ಮಾರ್ಗದಲ್ಲಿ ಬಸ್ ಹೋಗುತ್ತದೆ. ಆ ಬಸ್ಸನ್ನು ನಮ್ಮ ಜನರು ನೋಡುವಂಥ ಪರಿಸ್ಥಿತಿ ಬಂದಿದೆ. ಆದುದರಿಂದ ಒಂದು ಸೂಪರ್ ಡೀಲಕ್ಸ್ ಬಸ್ಸು ೯ ಗಂಟೆಗೆ ಮುಲ್ಕಿಯಿಂದ ಬೆಂಗಳೂರಿಗೆ ಹೊರಡುವ ಭಾಗ್ಯವನ್ನು ನಮ್ಮ ಮುಲ್ಕಿ ಜನತೆಗೆ ಮಾನ್ಯ ಜಾರ್ಜ್ ಅವರು ಕಲ್ಪಿಸಿಕೊಡಬೇಕೆಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಅದರ ಜೊತೆಗೆ ಇನ್ನೊಂದು ಬಸ್ಸನ್ನು ಮೂಡಬಿದರೆ, ಶಿರತಾಡಿ, ನಾರಾವಿ, ಧರ್ಮಸ್ಥಳಗೆ ಚಿಕ್ಕಮಗಳೂರು ದಾರಿಯಲ್ಲಿ ರಾತ್ರಿ ವೇಳೆ ಬೆಂಗಳೂರಿಗೆ ಬರುವಂತೆ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಒಂದು ಬಸ್ಸು ಬಹಳ ಹಿಂದಿನ ಕಾಲದಿಂದ ಚಿಕ್ಕಮಗಳೂರಿನಿಂದ ಧರ್ಮಸ್ಥಳದಿಯಾಗಿ ಮೂಡಬಿದ್ರಿ, ಮುಲ್ಕಿಗೆ ಬರುತ್ತಿದೆ. ಅದರ ಸ್ಥಿತಿ ಬಹಳ ಚಿಂತಾಜನಕವಾಗಿದೆ ಆದ್ದರಿಂದ ಅಲ್ಲಿ, ಬೇಗನೆ ಹೊಸ ಬಸ್ಸು ಹಾಕಬೇಕು. ಏಕೆಂದರೆ ನಮ್ಮ ಊರಿನಲ್ಲಿ ಮಳೆ ಜಾಸ್ತಿ. ಮಳೆ ಬರುವಾಗ ಬಸ್ಸಿನಲ್ಲಿ ಛತ್ರಿ ಹಿಡಿದುಕೊಂಡು ಜನ ಕುಳಿತುಕೊಳ್ಳುವ ಮತ್ತು ಆಚೀಚೆಗೆ ಹೋಗುವ ದೃಶ್ಯವನ್ನು ಕಾಣುತ್ತಿದ್ದೇವೆ. ಆದ್ದರಿಂದ ಅಲ್ಲಿಗೆ ಬರುವ ಬಸ್ಸನ್ನು ಬದಲಾಯಿಸಿ ಸರಿಯಾದ ಬಸ್ಸು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಆಹಾರದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಪೇಟೆಯ ಜನರಿಗೆ ಮತ್ತು ಹಳ್ಳಿಯ ಜನರಿಗೆ ಆಹಾರ ಕೊಡುವುದರಲ್ಲಿ ಸರ್ಕಾರದವರು ತಾರತಮ್ಯ ಮಾಡುತ್ತಿದ್ದಾರೆ, ಯಾವ ಬುದ್ಧಿವಂತ ಜನರು ಪೇಟೆಯಲ್ಲಿದ್ದೇವೆ, ಕಾನೂನು ಮಾಡುವ ಜನರು ನಾವಿದ್ದೇವೆ, ನಾವು ಪಾಪದ ಜನರ ಅಳಲನ್ನು ಕೇಳದೆ ಅವರ ದುಃಖಕ್ಕೆ ಮರುಳಾಗದೆ, ನಾವು ಪೇಟೆ ಜನರ ಸುಖಕ್ಕಾಗಿ ಇಲ್ಲಿ ಹೆಚ್ಚು ಸಕ್ಕರೆ, ಹೆಚ್ಚು ಅಕ್ಕಿ ಮತ್ತು ಹೆಚ್ಚು ಚಿಮಣಿ ಎಣ್ಣೆ ಕೊಡುತ್ತಿದ್ದೇವೆ. ಹಳ್ಳಿಗಳಿಗೂ ಒಳ್ಳೆಯ ಅಕ್ಕಿ, ಸಕ್ಕರೆ, ಚಿಮಣಿ ಎಣ್ಣೆ ಕೊಡಬೇಕು. ಪ್ರಾಯಶಃ ಹಳ್ಳಿಯಲ್ಲಿ ಹೆಚ್ಚು ಸಕ್ಕರೆ ಕೊಟ್ಟರೆ ಖಂಡಿತ ಅವರಿಗೆ ಡಯಾಬಿಟೀಸ್ ಬರುವುದಿಲ್ಲ. ಅಥವಾ ಅವರಿಗೆ ಹೆಚ್ಚು ಚಿಮಣಿ ಎಣ್ಣೆ ಕೊಟ್ಟರೆ ಅಲ್ಲಿಯ ಹೆಂಗಸರು ಸೀರೆಗೆ ಚಿಮಣಿ ಎಣ್ಣೆ ಹೊಯ್ದುಕೊಂಡು ಬೆಂಕಿ ಹಚ್ಚಿಕೊಂಡು ಖಂಡಿತ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಒಳ್ಳೆಯ ಅಕ್ಕಿಯ ಅನ್ನವನ್ನು ಊಟ ಮಾಡಿದರೆ ಖಂಡಿತ ಹಳ್ಳಿಯ ಜನರಿಗೆ ಅಜೀರ್ಣ ಆಗುವುದಿಲ್ಲ. ಇಂತಹ ತಾರತಮ್ಯ ಹೋಗಬೇಕು. ಏಕೆಂದರೆ, ಈ ಸರ್ಕಾರಿ ಉದ್ಯೋಗದವರೂ ಸಹ ಹಳ್ಳಿಯಲ್ಲಿ ಕೆಲಸ ಮಾಡುವಾಗ ಪಾಪ ಅವರಿಗೆ ಸಂಬಳ ಕಡಿಮೆ. ನಾವು ಹಳ್ಳಿಗೆ ಹೋಗಬೇಕು ಹಳ್ಳಿಯ ಉದ್ಧಾರ ಆಗಬೇಕು ಎಂದು ಹೇಳುವವರು ಆದರೆ ನಾವು ಹಳ್ಳಿಯ ಜನರ ಕಷ್ಟವನ್ನು ಕಾಣಲಿಲ್ಲ. ಆದ್ದರಿಂದ ಆಹಾರ ಖಾತೆಯವರು ಹಳ್ಳಿಯ ಜನರ ಕಡೆ ಕಣ್ಣನ್ನು ಹರಿಸಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ; ವಂದನೆಗಳು.

ಉಪಾಧ್ಯಕ್ಷರು.— ಈಗ ಶ್ರೀಯುತ ವೆಂಕಟೇಶ್ ಅವರು. ೧೫ ನಿಮಿಷದಲ್ಲಿ ತಾವು ಮುಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಚರ್ಚೆ ಎಷ್ಟು ಹೊತ್ತಿಗೆ ಮುಗಿಸುತ್ತೀರಿ ?

ಉಪಾಧ್ಯಕ್ಷರು.—ಇನ್ನೂ ಆರು ಘಂಟೆ ಆಗಿಲ್ಲವಲ್ಲ. ಎಷ್ಟು ಬೇಗ ಮುಗಿಯುತ್ತದೆ ಎಂಬುದು ಮಾತನಾಡುವವರ ಮೇಲೆ ಹೋಗುತ್ತದೆ. ಮಾನ್ಯ ನಂಜುಂಡಸ್ವಾಮಿಯವರಿಗೆ ೧೫ ನಿಮಿಷ ಅವಧಿ ಕೊಟ್ಟಿದ್ದರೂ ಅವರು ಎರಡು ನಿಮಿಷ ಮುಂಚೆಯೇ ಮುಗಿಸಿದರು.

ಶ್ರೀ ವಾಟಾಳ್ ನಾಗರಾಜ್.—ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಎಷ್ಟು ಹೊತ್ತಿಗೆ ಸಭೆ ಮುಗಿಸುತ್ತೀರಿ ಎಂದು. ನನಗೆ ಅವಕಾಶ ಕೊಡುವುದು ಬೇಡ. ಎಷ್ಟು ಹೊತ್ತಿಗೆ ಸಭೆ ಮುಗಿಸುತ್ತೀರಿ ಹೇಳಿ.

ಉಪಾಧ್ಯಕ್ಷರು.—೬ ಘಂಟೆಗೆ.

ಶ್ರೀ ವಾಟಾಳ್ ನಾಗರಾಜ್.—ಆರು ಗಂಟೆಗೆ ಚರ್ಚೆ ಮುಗಿಯುತ್ತದೆ, ಸಚಿವರು ಆಮೇಲೆ ಉತ್ತರ ಕೊಡುತ್ತಾರೆ ಅಲ್ಲವೆ? ನಿನ್ನೆಯಿಂದ ನಾನು ಕುಳಿತಿದ್ದೇನೆ. ನನ್ನನ್ನು ಪಕ್ಷೇತರ ಎಂದು ನೀವು ಕರೆಯುತ್ತೀರಿ. ಆದರೆ ನಾನು ಪಕ್ಷೇತರ ಅಲ್ಲ. ತಾಂತ್ರಿಕವಾಗಿ ನಾನು ಪಕ್ಷೇತರ ಎಂದು ಆಗಿದೆ. ನಾನು ಒಂದು ಸಿದ್ಧಾಂತ ಇಟ್ಟುಕೊಂಡು, ಒಂದು ತತ್ವವನ್ನು ಇಟ್ಟುಕೊಂಡು ಸಭೆಗೆ ಬಂದಿರುವವನು. ಜನತಾದಳಕ್ಕೆ ಎಷ್ಟು ಹಕ್ಕಿದೆಯೋ, ಬೇರೆ ಪಕ್ಷಗಳಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ನನಗೂ ಇದೆ. ೭ ಜನ ಪಕ್ಷೇತರರಲ್ಲಿ ಆರು ಜನರು ಕಾಂಗ್ರೆಸ್ ಪಕ್ಷಕ್ಕೆ ಹೋಗಿಬಿಟ್ಟರು. ನಾನೊಬ್ಬನೇ ಇಲ್ಲಿ ಕುಳಿತಿರುವವನು. ಈಗ ನಾನೊಬ್ಬನೇ ಪಕ್ಷೇತರ. ತಾವು ನನ್ನ ಬಗ್ಗೆ ಮಲತಾಯಿ ಧೋರಣೆ ತೋರುತ್ತಿದ್ದೀರಿ, ಇದು ಸರಿಯಲ್ಲ. ಇದು ಅತ್ಯಂತ ಶೋಚನೀಯವಾಗಿದೆ; ನನಗೆ ಬಹಳ ನೋವಾಗುತ್ತಿದೆ. ನಾನು ನಿನ್ನೆ ಬೆಳಗ್ಗೆಯಿಂದ ಕುಳಿತಿದ್ದೇನೆ. ನನಗೆ ನಾಲ್ಕು ಮಾತನಾಡುವುದಕ್ಕೆ ಈ ಸಭೆಯಲ್ಲಿ ಯೋಗ್ಯತೆ ಇಲ್ಲ ಎಂದರೆ ನನಗೆ ಎಷ್ಟು ನೋವಾಗುತ್ತದೆ? ಈ ನೀತಿ ಸರಿಯಲ್ಲ. ಈ ಸಭೆಯಲ್ಲಿ ನಾನು ೧೯೭೭ರಿಂದ ಇದ್ದೇನೆ. ಆಗಿನಿಂದ ಸಭೆಗೆ ಬರುತ್ತಿದ್ದೆ.

ಉಪಾಧ್ಯಕ್ಷರು.—ನೀವೂ ಮಾತನಾಡಿ. ನಾವು ಬೇಡ ಎಂದು ಹೇಳುವುದಿಲ್ಲ. ಈಗ ವೆಂಕಟೇಶ್ ಅವರು ಮಾತನಾಡಬೇಕು. ಇಲ್ಲದಿದ್ದರೆ ನಿಮ್ಮ ಸಮಯ ಹೋಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.—ನಾನು ಸಹಕಾರ ಇಲಾಖೆ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಪ್ರತಿ ಮಂಡಲದಲ್ಲೂ ಒಂದೊಂದು ಸಹಕಾರ ಸಂಘ ಆಗಬೇಕು.

ಶ್ರೀ ವಾಟಾಳ್ ನಾಗರಾಜ್.—ಉಪಾಧ್ಯಕ್ಷರೆ, ನಮ್ಮದು ತೀರ್ಮಾನ ಆಗಲಿ, ಇಲ್ಲ ಎಂದು ಹೇಳಿಬಿಡಿ, ಹೊರಗಡೆ ಹೋಗಿಬಿಡುತ್ತೇನೆ.

ಉಪಾಧ್ಯಕ್ಷರು.—ಆರು ಘಂಟೆ ಆಗಲಿ.

ಶ್ರೀ ವಾಟಾಳ್ ನಾಗರಾಜ್.—ನಾನು ತಮ್ಮನ್ನು ವೈಯಕ್ತಿಕವಾಗಿ ಆರೋಪಣೆ ಮಾಡುತ್ತಿಲ್ಲ. ಸದಸ್ಯರು ಒಂದೊಂದು ಘಂಟೆ ಮಾತನಾಡಲಿ ಅದಕ್ಕೆ ನನ್ನ ವಿರೋಧವಿಲ. ನನ್ನ ಪರಿಸ್ಥಿತಿ ಏನು? ನಾನು ೧೯೭೭ರಲ್ಲಿ ಮುಂದೆ ಕುಳಿತುಕೊಳ್ಳುತ್ತಿದ್ದೆ. ಇವತ್ತು ತೆಗೆದು ಹಿಂದಕ್ಕೆ ಹಾಕಿದ್ದೀರಿ. ಹೋಗಲಿ ಎಂದು ಕುಳಿತುಕೊಂಡರೆ ಮಾತನಾಡುವುದಕ್ಕೇ ಅವಕಾಶ ಕೊಡದಿದ್ದರೆ ನನಗೆ ಬಹಳ ನೋವಾಗುತ್ತಿದೆ. ಕಾಂಗ್ರೆಸ್ ಸಚೇತಕರು ಈ ವಿಚಾರದಲ್ಲಿ ರಾಜಕೀಯ ಮಾಡಬಾರದು; ನೋವಾಗುತ್ತವೆ.

(ಗೊಂದಲ)

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೆ, ಈ ಸದನ ಪ್ರಾರಂಭವಾದಾಗಿನಿಂದ ನಾನು ನೋಡುತ್ತಲೇ ಇದ್ದೇನೆ. ವಿರೋಧಪಕ್ಷದ ಮುಖ್ಯ ಸಚೇತಕನಾಗಿಯೂ ಈ ಸದನದಲ್ಲಿ ನಾನು ಕೆಲಸ ಮಾಡಿದ್ದೇನೆ. ಆ ಕಡೆಯಿಂದ ಮಾತನಾಡತಕ್ಕ ಸದಸ್ಯರ ಪಟ್ಟಿಯನ್ನು ಮಾನ್ಯ ವಿರೋಧಪಕ್ಷದ ನಾಯಕರಾಗಲಿ ಅಥವಾ ವಿರೋಧ ಪಕ್ಷದ ಸಚೇತಕರಾಗಲೀ ತಮ್ಮ ಕಡೆಗೆ ಕಳುಹಿಸಿಕೊಡಬೇಕು. ನಮ್ಮ ಪಕ್ಷದಲ್ಲಿ ಎಷ್ಟೇ ಜನರಿದ್ದರೂ ಕೂಡ ಸಹನೆಯಿಂದ ೧೦ ನಿಮಿಷ, ೧೫ ನಿಮಿಷ, ಕೊನೆಗೆ ೫ ನಿಮಿಷ ಕೊಟ್ಟ ಅವಕಾಶದಲ್ಲೇ ಮುಗಿಸುತ್ತಾ ಬಂದಿದ್ದೇವೆ. ೫-೬ ದಿವಸಗಳಿಂದ ಏನಾಗುತ್ತಿದೆಂದರೆ, ಕೆಲವೊಂದು ವಿಚಾರಗಳು ಚರ್ಚೆಗೆ ಬಂದವು. ಅದರಲ್ಲಿ ಕೆಲವು ಸಮಯ ಹೋಗಿಬಿಟ್ಟಿದೆ. ವಿರೋಧ ಪಕ್ಷದ ನಾಯಕರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಯಾರು ಇನ್ಸಿಯೇಟ್ ಮಾಡುತ್ತಾರೋ, ಅವರು ಇನ್ಸಿಯೇಟ್ ಮಾಡುವ ಕಾಲದಲ್ಲಿ ಒಂದು ಗಂಟೆ ಸಮಯದಲ್ಲಿ ಮುಗಿಸಬೇಕು, ಉಳಿದ ಸಮಯವನ್ನು ಉಳಿದ ಸದಸ್ಯರಿಗೆ ಹಂಚಿಕೆ ಮಾಡಬೇಕು ಅದೇ ರೀತಿ ನಮ್ಮ ಪಕ್ಷದವರಿಗೆ ಎಷ್ಟು ಸಮಯವನ್ನು ಕೊಡುತ್ತೀರೋ ಅಷ್ಟರಲ್ಲೇ ನಾವು ಮುಗಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ನಾನು ಬರೀ ''ಜೀರೋ'' ಸದಸ್ಯ ಜಿರೋ ಅವರ್‌ನಲ್ಲಿ ಮಾತನಾಡುವುದು ಹೋಗುವುದು. ಏನಿದು ? ಸಬ್ಜೆಕ್ಟ್ ಬಗ್ಗೆ ಮಾತನಾಡಬಾರದ ? ಸರ್ಕಾರಿ ಮುಖ್ಯ ಸಚೇತಕರ ಮೇಲೆ ಹೆಚ್ಚು ಜವಾಬ್ದಾರಿ ಇದೆ.

ಶ್ರೀ ಎಂ. ಎಸ್. ಪಾಟೀಲ್.—ಸರ್ಕಾರಿ ಮುಖ್ಯ ಸಚೇತಕರ ಮೇಲೆ ಹೆಚ್ಚು ಜವಾಬ್ದಾರಿ ಇದೆ. ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಅಷ್ಟೇ ಜವಾಬ್ದಾರಿ ವಿರೋಧ ಪಕ್ಷದವರ ಮೇಲೂ ಇದೆ. ಆದ್ದರಿಂದ ತಾವು ಅವರಿಗೆ ಹೇಳಿ. ಇದು ಅಧ್ಯಕ್ಷರನ್ನು ಕೇಳತಕ್ಕ ವಿಷಯ ಅಲ್ಲ. ತಾವು ವಿರೋಧ ಪಕ್ಷದ ಕಡೆಗೆ ಕುಳಿತಿದ್ದೀರಿ. ತಾವು ಅವರಿಗೆ ಹೇಳಿ. ಅವರು ಸಮಯವನ್ನು ನಿಗದಿ ಮಾಡಿದ ಮೇಲೆ......

ಶ್ರೀ ವಾಟಾಳ್ ನಾಗರಾಜ್.—ಬೆಳಗ್ಗೆ ಜೀರೋ ಅವರ್‌ನಲ್ಲಿ ನಾಲ್ಕು ಮಾತನಾಡುವುದು ಆಮೇಲೆ ಹೊರಟು ಹೋಗುವುದು. ಈ ರೀತಿಯಾಗಿದೆ. ಪ್ರತಿಯೊಂದು ಬೇಡಿಕೆಗಳ ಮೇಲೂ ನಾನು ಮಾತನಾಡಲೇಬೇಕು. ಅದಕ್ಕಾಗಿ ಅವಕಾಶ ಕೊಡಲೇಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಯಾವಾಗ ಅವಕಾಶ ಸಿಕ್ಕುತ್ತದೆಂದು ತಾವು ಹೇಳಬೇಕಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸನ್ಮಾನ್ಯ ಉಪಾಧ್ಯಕ್ಷರೆ, ಈ ಸದನದ ಕಾರ್ಯಕಲಾಪಗಳನ್ನು ನಡೆಸುವ ವಿಚಾರದಲ್ಲಿ ಜನತಾ ದಳವನ್ನು ವಿರೋಧ ಪಕ್ಷವೆಂದು ಗುರುತಿಸಿದ್ದರೂ ಸಹ ಈ ಕಡೆ ಕುಳಿತಿರತಕ್ಕ ನಾವೆಲ್ಲರೂ ವಿರೋಧಪಕ್ಷದವರಿದ್ದೇವೆ. ನಮ್ಮನ್ನು ಒಂದೇ ಪಕ್ಷ ಎಂದು ಗುರುತಿಸಿದ್ದಾರೆಂಬ ಭಾವನೆ ನಮ್ಮಲ್ಲಿ ಇಲ್ಲ. ಇಲ್ಲಿ ನಮ್ಮ ಕಡೆಯಿಂದ ಹೇಳುತ್ತೇನೆ, ಸಮಯದ ಇತಿಮಿತಿಗಳನ್ನು ಅರ್ಥಮಾಡಿಕೊಂಡು ವಿಶೇಷವಾಗಿ ಬೇಡಿಕೆಗಳ ಮೇಲೆ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ತಮ್ಮಗಳ ಜೊತೆ ಅಥವಾ ಅಧ್ಯಕ್ಷರ ಜೊತೆ ಸಮಾಲೋಚನೆ ಮಾಡಿ ಕೊಡತಕ್ಕ ಸಮಯದಲ್ಲೇ ಮಾನ್ಯ ಸದಸ್ಯರುಗಳಿಗೂ ಸಹ ಸಮಯವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತಿದ್ದೇನೆ. ಎರಡನೆಯದಾಗಿ, ನಮಗೆ ತೊಂದರೆ ಬಂದಿರುವುದು ಏನೆಂದರೆ. ಶ್ರೀಮಾನ್ ವಾಟಾಳ್ ನಾಗರಾಜ್ ರವರು ಹಿರಿಯ ಸದಸ್ಯರಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಬೇರೆ ಬೇಡಿಕೆಗಳ ಮೇಲೂ ಮಾತನಾಡಲಿಕ್ಕೆ ಅವಕಾಶ ಕೊಡಿ. ವಾಟಾಳ್ ನಾಗರಾಜ್‌ರವರ ಬಗ್ಗೆಯಾಗಲಿ, ರೈತ ಸಂಘದವರ ಬಗ್ಗೆಯಾಗಲಿ, ಬಿ. ಜೆ. ಪಿ. ಯವರ ಬಗ್ಗೆಯಾಗಲಿ, ಜನತಾ ಪಾರ್ಟಿಯವರ ಬಗ್ಗೆಯಾಗಲಿ ಯಾವುದೇ ತೊಂದರೆ ಇಲ್ಲ. ಆದರೆ ತೊಂದರೆ ಬಂದಿರುವುದು ಪಕ್ಷೇತರರ ವಿಚಾರದಲ್ಲಿ. ಅವರು ಈ ಕಡೆ ಇದ್ದಾರೋ, ಆ ಕಡೆ ಇದ್ದಾರೋ ಅದೇ ಇನ್ನೂ ಅರ್ಥವಾಗುತ್ತಾ ಇಲ್ಲ. ಅದೊಂದೆ ನಮಗೆ ತಲೆನೋವು.

ಶ್ರೀ ವಾಟಾಳ್ ನಾಗರಾಜ್.—ಇದ್ದಂತಹ ೬ ಜನ ಪಕ್ಷೇತರರು ಕಾಂಗ್ರೆಸ್‌ಗೆ ಹೊರಟು ಹೋಗಿದ್ದಾರೆ. ಪಕ್ಷೇತರ ಸದಸ್ಯನಾಗಿ ನಾನೊಬ್ಬನೇ ಇರುವುದು.

ಉಪಾಧ್ಯಕ್ಷರು.—ಈ ಕಡೆ ವಿರೋಧಪಕ್ಷದವರು ಎಷ್ಟು ಕಾಲವನ್ನು ತೆಗೆದುಕೊಂಡಿದ್ದೀರಿ ಎನ್ನುವುದರ ಬಗ್ಗೆ ವಿವರಗಳು ನನ್ನಲ್ಲಿವೆ. ಶ್ರೀಮಾನ್ ಏಕಾಂತಯ್ಯನವರು ೧೨೫ ನಿಮಿಷ ತೆಗೆದುಕೊಂಡು ಮಾತನಾಡಿದ್ದಾರೆ. ಶ್ರೀ ಪಿ. ಜಿ. ಆರ್. ಸಿಂಧ್ಯ ರವರು ೬೨ ನಿಮಿಷ ತೆಗೆದುಕೊಂಡು ಮಾತನಾಡಿದ್ದಾರೆ. ಆಮೇಲೆ ಬೇರೆ ಪಾರ್ಟಿಯವರಿಗೂ ನಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಆದ್ದರಿಂದ ಶ್ರೀಮಾನ್ ಎಂ. ಎಸ್. ಪಾಟೀಲ್ ರವರು ಹೇಳಿದ ಹಾಗೆ ಇನ್ನು ಮೇಲೆ ಎಷ್ಟು ಸಮಯ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಿಮ್ಮ ಪಕ್ಷದಲ್ಲೇ ತೀರ್ಮಾನವಾದರೆ ಅದು ಎಲ್ಲರಿಗೂ ಸಹಕಾರಿಯಾಗುತ್ತದೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಸನ್ಮಾನ್ಯ ಉಪಾಧ್ಯಕ್ಷರೆ, ಪ್ರತಿ ಮಂಡಲದಲ್ಲೂ ಸಹ ಒಂದೊಂದು ಸಹಕಾರ ಸಂಘಗಳು ಆಗಬೇಕು.

ಶ್ರೀ ವಾಟಾಳ್ ನಾಗರಾಜ್.—ಅವರು ಆಗಲೇ ಸಹಕಾರ ಸಂಘಕ್ಕೆ ಹೊರಟು ಹೋದರು......

ಉಪಾಧ್ಯಕ್ಷರು.—ಅವರು ಏನಾದರೂ ಮಾತನಾಡಲಿ, ನಿಮಗೇನು ? ಮೂರು ಬೇಡಿಕೆಗಳಿವೆ ಅವರು ಯಾವುದರ ಬಗ್ಗೆಯಾದರೂ ಮಾತನಾಡಲಿ. ನೀವು ಎಲ್ಲವನ್ನೂ ಎದ್ದು ನಿಂತು ಈ ರೀತಿ ಮಾತನಾಡುವುದು ಸರಿಯಲ್ಲ. ಚೆನ್ನಾಗಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಚೆನ್ನಾಗಿರುವುದಿಲ್ಲವೆಂದರೆ ಬಿಡಿ, ನಾನು ಹೊರಟು ಹೋಗುತ್ತೇನೆ.

ಉಪಾಧ್ಯಕ್ಷರು.—ನಾನು ಖಂಡಿತ ನಿಮ್ಮನ್ನು ಹೋಗಿ ಎಂದು ಹೇಳುವುದಿಲ್ಲ. ತಾವು ಹಾಗೆ ಮಾತನಾಡಬಾರದು ಅಂತ ಹೇಳಿದೆ ಅಷ್ಟೆ.

ಶ್ರೀ ಎಂ. ಪಿ. ವೆಂಕಟೇಶ್.—ಪ್ರತಿ ಮಂಡಲದಲ್ಲೂ ಸಹಕಾರಿ ಸಂಘಗಳು ಆಗಬೇಕು. ಅದಕ್ಕೆ ತಾವು ಅನುಮತಿಯನ್ನು ಕೊಡಬೇಕು. ಮತ್ತೆ ಆ ಮಂಡಲದಲ್ಲಿ ಆ ಸಹಕಾರ ಸಂಘದಲ್ಲೇ ಸಾಲ ವಿತರಣೆಯಾಗಬೇಕು ಮತ್ತು ಗೊಬ್ಬರಗಳು ವಿತರಣೆಯಾಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ನಿರ್ದೇಶಕರುಗಳೆಂದು ಇರುತ್ತಾರೆ. ಸಾಲ ಮಂಜೂರಾತಿ ವಿಚಾರದಲ್ಲಿ ಆ ನಿರ್ದೇಶಕರುಗಳು ಹೇಳಿದವರಿಗೇ ಸಾಲ ಕೊಟ್ಟು ಬಿಡುತ್ತಾರೆ. ಇದರಿಂದ ವಸೂಲಾತಿ ಆಗುವುದಿಲ್ಲ. ಇದರಿಂದಾಗಿ ಬಡವರಿಗೆ ಸಾಮಾನ್ಯ ಜನರಿಗೆ ಸಾಲ ಸಿಕ್ಕುವುದಿಲ್ಲ. ಆದ್ದರಿಂದ ಯಾವ ಬ್ಯಾಂಕಿನ ನಿರ್ದೇಶಕರು ಇರುತ್ತಾರೆ, ಅವರು ಯಾವ ಸದಸ್ಯರಿಗೆ ಸಾಲವನ್ನು ಕೊಡಿಸಬೇಕೆಂದು ಶಿಫಾರಸ್ಸು ಮಾಡುತ್ತಾರೋ, ಆ ಸಾಲದ ವಸೂಲಾತಿಯ ಜವಾಬ್ದಾರಿಯನ್ನೂ ಕೂಡ ಅವರಿಗೇ ವಹಿಸಬೇಕು. ಆ ರೀತಿಯಲ್ಲಿ ಕಾನೂನಿಗೆ ತಿದ್ದುಪಡಿ ತರಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ. ಮತ್ತೆ ಜಿಲ್ಲಾ ಪರಿಷತ್ತಿನ ಸದಸ್ಯರೂ ಹಾಗೂ ಮಂಡಲ್‌ನ ಪ್ರಧಾನರೂ ಕೂಡ ಆ ಬ್ಯಾಂಕಿನಲ್ಲಿರುತ್ತಾರೆ. ಅವರು ಮಾಡಿದಂತಹ ಶಿಫಾರಸ್‌ಗೂ ಕೂಡ ಮಾನ್ಯತೆ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

೫–೫೦ ಪಿ. ಎಂ.

ಇನ್ನು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಗಳು ಇವೆ ಈ ಸೊಸೈಟಿಗಳು ಸಾರ್ವಜನಿಕರಿಗೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ನೋಂದಾವಣೆಯಾಗಿದೆ. ಆದರೆ ಸಾರ್ವಜನಿಕರಿಗೆ ಇವುಗಳಿಂದ ಅನುಕೂಲ ಆಗಿಲ್ಲ. ಇವತ್ತು ಇವು ಒಂದು ರೀತಿ ವ್ಯಾಪಾರಿ ಕಂಪೆನಿಗಳಾಗಿವೆ. ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಯಾವ ರೇಟ್‌ಗೆ ಸೈಟ್ ಕೊಡುತ್ತವೋ ಅದಕ್ಕೆ ೫ ಸಾವಿರ ರೂಪಾಯಿಯಷ್ಟು ಕಡಿಮೆ ಬೆಲೆಗೆ ಈ ಸೊಸೈಟಿಗಳು ಸೈಟ್ ಕೊಡುತ್ತವೆ. ಆಮೇಲೆ ಲೇಔಟ್ ಮಾಡುವುದಕ್ಕೆ ಖರ್ಚಾಗುವ ಹಣ ಬಹಳ ಜಾಸ್ತಿಯಾಗುತ್ತದೆ. ಆದರೆ ಇವತ್ತು ಸೊಸೈಟಿಗಳು ಲೇಔಟ್ ತಾವೇ ಮಾಡಿ ಬಿ. ಡಿ. ಎ. ಹಾಗೂ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಗಿಂತಾ ಸುಮಾರು ೨೫ ಪರ್ಸೆಂಟ್ ಕಡಿಮೆ ಮೌಲ್ಯದಲ್ಲಿ ಸೈಟ್‌ಗಳನ್ನು ಕೊಡಬಹುದಾಗಿದೆ. ಇವತ್ತು ಸರ್ಕಾರದಿಂದ ಜಮೀನು ಮಂಜೂರು ಆದ ಮೇಲೆ ಅಲ್ಲಿ ಲೇಔಟ್ ಮಾಡುವ ಕೆಲಸವನ್ನು ಕರ್ನಾಟಕ ಕನ್‌ಸ್ಟ್ರಕ್ಷನ್ಸ್ ಕಾರ್ಪೊರೇಷನ್‌ಗೆ ವಹಿಸಿದರೆ ಲೇಔಟ್ ಕಾಸ್ಟ್ ಕೂಡ ಕಡಿಮೆಯಾಗುವುದಲ್ಲದೆ ಸೊಸೈಟಿಗಳವರೂ ಹಣ ಹೊಡೆಯುವುದಕ್ಕೆ ಅವಕಾಶವಾಗುವುದಿಲ್ಲವೆಂದು ಹೇಳುತ್ತೇನೆ. ಇದರಿಂದ ಸೈಟುಗಳ ಬೆಲೆ ಕೂಡಾ ಕಡಿಮೆಯಾಗುತ್ತದೆ. ಮತ್ತೆ ಪ್ರತಿ ತಾಲ್ಲೂಕು ಮಟ್ಟದಲ್ಲಿ ಕೋ–ಆಪರೇಟಿವ್ ಬ್ಯಾಂಕ್‌ಗಳು ಆಗಬೇಕು. ಇವತ್ತು ಜಿಲ್ಲೆಯಲ್ಲಿ ಒಂದೊಂದು ಬ್ಯಾಂಕ್ ಇರುವುದು ಏನೇನೂ ಸಾಲದು. ಇವು ಪ್ರತಿ ತಾಲ್ಲೂಕು ಮಟ್ಟದಲ್ಲಿ ಆಗಬೇಕು. ಈ ರೀತಿಯಾದರೆ ಜನರಿಗೂ ಅನುಕೂಲ. ಇವನ್ನು ಯಾರು ಹೋಗಡೆಯವರು ಬ್ಯಾಂಕ್ ತೆರೆಯಲು ಮುಂದೆ ಬರುತ್ತಾರೆ ಅವರಿಗೆ ಸರ್ಕಾರ ಸಹಕಾರ ಕೊಟ್ಟು ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಇವತ್ತು ಟಿ. ಎ. ಪಿ. ಸಿ. ಎಂ. ಎಸ್. ಏನು ಇವೆ ಅವುಗಳ ಮೂಲಕ ನ್ಯಾಯಬೆಲೆ ಅಂಗಡಿಗಳಿಗೆ ಅಕ್ಕಿ ಹಾಗೂ ಇತರ ಸಾಮಗ್ರಿಗಳು ಸರಬರಾಜು ಆಗಬೇಕಾಗುತ್ತದೆ. ಈ ಸರಕು ನ್ಯಾಯವಾಗಿ ವಿತರಣೆ ಆಗುತ್ತಿದೆಯೋ ಎನ್ನುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸ್ಟಾಕ್ ವೆರಿಫಿಕೇಷನ್ ಮಾಡುವುದಕ್ಕೇ ಹೋಗುತ್ತಿಲ್ಲ. ಇವತ್ತು ನಮ್ಮ ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಮೈಸೂರಿನಿಂದ ಆಹಾರ ಧಾನ್ಯ ಸರಬರಾಜು ಆಗಬೇಕಾಗಿದೆ, ಆದರೆ ಅದನ್ನು ಮೈಸೂರಿನಲ್ಲೇ ಮಾರುತ್ತಾರೆ. ಅದು ಅಲ್ಲಿ ಬಿಟ್ಟು ಇಲ್ಲಿ ಸೇರಿದಹಾಗೆ ಎಲ್ಲಾ ತೋರಿಸಿ, ಅಲ್ಲೇ ಮಾರಿಕೊಳ್ಳುತ್ತಾರೆ, ಕೇರಳಕ್ಕೆ ಅಕ್ಕಿ ಹೋಗುತ್ತಿತ್ತು. ನಾನು ಆ ಬಗ್ಗೆ ಅಲ್ಲಿ ಗಲಾಟೆ ಮಾಡಿ ಎಷ್ಟೋ ಸಾರಿ ದೂರನ್ನು ಕೂಡ ಕೊಟ್ಟಿದ್ದೇನೆ. ಆದರೆ ಇದರ ಬಗ್ಗೆ ಸಹಕಾರ ಇಲಾಖೆಯವರು ಇನ್ಸ್‌ಪೆಕ್ಷನ್ ಮಾಡುವುದೇ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ಸ್ಟಾಕ್ ನೋಡಿ ದಾಸ್ತಾನು ಎಷ್ಟು ಇದೆ ಎಂದು ಲೆಡ್ಜರಿನಲ್ಲಿ ಬರೆಯಬೇಕು ಅದನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಹೇಳುತ್ತೇನೆ. ಇನ್ನು ಡೆಪ್ಯೂಟಿ ರಿಜಿಸ್ಟ್ರಾರ್ಸ್ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ರೆವಿನ್ಯೂ ಅಪಲೇಟ್ ಟ್ರಿಬ್ಯುನಲ್ಸ್ ರೀತಿಯಲ್ಲಿ ಒಂದೊಂದು ಜಿಲ್ಲೆಗೆ ಒಂದೊಂದು ಅಪಲೇಟ್ ಟ್ರಿಬ್ಯುನಲ್ ಮಾಡಿ ಒಬ್ಬರು ಡೆಪ್ಯೂಟಿ ರಿಜಿಸ್ಟ್ರಾರ್‌ನ್ನು ಅಲ್ಲಿಗೆ ಪ್ರತ್ಯೇಕವಾಗಿ ಹಾಕಿ, ಅಲ್ಲಿಗೆ ಒಬ್ಬರು ಸಬ್‌ಇನ್ಸ್‌ಪೆಕ್ಟರನ್ನು ನೇಮಕ ಮಾಡಿದರೆ ಕೇಸ್‌ಗಳು ಸುಲಲಿತವಾಗಿ ತೀರ್ಮಾನ ಆಗುತ್ತವೆ.

ತೀರ್ಮಾನಗಳೂ ಸಹಾ ಬೇಗ ಆಗುತ್ತವೆಂದು ನಾನು ಸಲಹೆ ಕೊಡುತ್ತೇನೆ. ಮತ್ತೆ ಬೇರೆ ರಾಜ್ಯಗಳಲ್ಲಿ ರೈತರಿಗೆ ಸಾಲ ಕೊಡುವ ಅಪೆಕ್ಸ್ ಬ್ಯಾಂಕ್. ಪಿಎಲ್‌ಡಿ ಬ್ಯಾಂಕ್‌ಗಳು ಸಪರೇಟ್ ಇಲ್ಲ. ಒಂದೇ ಇದೆ. ಈ ರಾಜ್ಯದಲ್ಲಿ ಅಪೆಕ್ಸ್, ಎಂಡಿಸಿಸಿ, ಪಿಎಲ್‌ಡಿ ಬ್ಯಾಂಕ್‌ಗಳು ಏನು ಇವೆ ಆತಹವನ್ನೆಲ್ಲಾ ಒಂದೇ ಬ್ಯಾಂಕ್ ಮಾಡಿ, ಸಿಂಗಲ್ ವಿಂಡೊ ಸಿಸ್ಟಮ್ ಮಾಡಿ ರೈತರಿಗೆ ಸಾಲ ವಿತರಣೆ ಮಾಡಿ. ಇದರಿಂದ ಬಹಳ ರೈತರು ಒಂದೇ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಇಂತಹ ಸಿಸ್ಟಮ್ ಆಂಧ್ರದಲ್ಲಿ ಇದೆ ಹಾಗೂ ಬೇರೆ ರಾಜ್ಯಗಳಲ್ಲಿ ಇದೆ. ಇದರಿಂದ ರೈತರಿಗೆ ಸುಲಭವಾಗುವುದಲ್ಲದೇ ಬಡ್ಡಿ ಕೂಡ ಕಡಿಮೆ ಬೀಳುತ್ತದೆಂದು ನಾನು ಸಲಹೆ ಕೊಡುತ್ತೇನೆ. ಇನ್ನು ಸಹಕಾರಿ ಇಲಾಖೆಯಲ್ಲಿ ಅಧಿಕಾರಿಗಳನ್ನು ಕಂಡರೆ ಯಾರಿಗೂ ಹೆದರಿಕೆಯೇ ಇಲ್ಲ. ಏಕೆಂದರೆ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರ ವಾಹನ ಒದಗಿಸಿದೆ ತಹಶೀಲ್ದಾರರಿಗೆ ಜೀಪ್, ಸಬ್‌ಇನ್ಸ್‌ಪೆಕ್ಟರಿಗೆ ಮೋಟಾರ್‌ಬೈಕ್ ಬಿಡಿಓಗೆ ಜೀಪ್ ಇದೆ. ಸಬ್–ಡಿವಿಜನ್ ಅಧಿಕಾರಿಯಾದ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ ಇವತ್ತು ಜೀಪ್ ಇಲ್ಲ. ಇವತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಒಂದು ಆಫೀಸಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಬೇಕಾದರೆ ಆ ಕಛೇರಿಗೆ ಹೋಗಿ ನಾನು ಇನ್ಸ್‌ಪೆಕ್ಷನ್‌ಗೆ ಬಂದಿದ್ದೇನೆಂದು ಹೇಳಿಕೊಳ್ಳಬೇಕು. ಒಂದೊಂದು ಸಾರಿ ಅವರು ಹೋದಾಗ ನೀನು ಯಾರು, ಎಂದು ಅವರನ್ನೇ ಕೇಳುವಂತಹ ಪ್ರಸಂಗಗಳು ಆಗಿವೆ. ಹೀಗೆ ಹೋದಾಗ ಅವರಿಗೆ ಅವಮಾನ ಆಗುವ ಪ್ರಸಂಗಗಳೇ ಹೆಚ್ಚು. ಇವತ್ತು ಜೀಪ್ ಇಲ್ಲದೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಹೇಗೆ ಇನ್ಸ್‌ಪೆಕ್ಷನ್ ಮಾಡುವುದಕ್ಕಾಗುತ್ತದೆ ಈ ಬಗ್ಗೆ ಹಣಕಾಸಿನ ಸಚಿವರೂ ಮನಸ್ಸು ಮಾಡಬೇಕು. ಯಾವ ಸರ್ಕಾರದಲ್ಲೂ ಅವರಿಗೆ ಜೀಪ್ ಕೊಟ್ಟಿಲ್ಲ. ಜನ ಇವತ್ತು ಹೆಚ್ಚಿನ ಬಹುಮತದಿಂದ ಅಧಿಕಾರ ನಡೆಸಲು ಕಳುಹಿಸಿದ್ದಾರೆ. ತಮ್ಮ ಕೀರ್ತಿಯನ್ನು ಇನ್ನೂ ಹೆಚ್ಚು ಮಾಡಿಕೊಳ್ಳಲು ಎಲ್ಲ ಸಬ್‌ಡಿವಿಜನ್‌ಗಳಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ ಜೀಪ್ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಸಹಕಾರ ಇಲಾಖೆಯಲ್ಲಿ ಕಳೆದ ೧೦–೨೦ ವರ್ಷಗಳಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಪ್ರಮೋಷನ್ಸ್ ಕೊಟ್ಟಿಲ್ಲ ಈ ಬಗ್ಗೆ ಬಹಳ ಅನ್ಯಾಯವಾಗಿದ್ದು ಇದನ್ನು ಸರಿಪಡಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಲ್ಯಾಂಡ್ ಸೊಸೈಟಿಗಳಿವೆ. ಅವುಗಳನ್ನು ಗಿರಿಜನರ ಅಭಿವೃದ್ಧಿಗೋಸ್ಕರ ಮಾಡಿದ್ದಾರೆ ಆ ಸೊಸೈಟಿಗಳಿಗೆ ಕೇಂದ್ರಸರ್ಕಾರದವರು ಹಣ ಕೊಡುತ್ತಾರೆ, ರಾಜ್ಯಸರ್ಕಾರದವರು ಸಹ ಹಣ ಕೊಡುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಈಗ ಗಿರಿಜನರು ಬಹಳ ಬುದ್ಧಿವಂತರಾಗಿದ್ದಾರೆ. ಅಲ್ಲಿರತಕ್ಕ ಹಣವನ್ನು ಅಧಿಕಾರಿಗಳು ದುರುಪಯೋಗ ಮಾಡುವುದಕ್ಕೆ ಅವರು ಅವಕಾಶ ಕೊಡುವುದಿಲ್ಲ. ಆದ್ದರಿಂದ ಹಣ ಸಿಕ್ಕುವುದಿಲ್ಲವೆಂದು ಅಧಿಕಾರಿಗಳು ಗಿರಿಜನರ ಅಭಿವೃದ್ಧಿಗಾಗಿ ಇರುವ ಯೋಜನೆಯನ್ನು ಜಾರಿಗೆ ತರುವುದಕ್ಕೆ ಹೋಗುವುದಿಲ್ಲ ಹೀಗಾಗಿ ಲಕ್ಷಾಂತರ ರೂಪಾಯಿ ಲ್ಯಾಪ್ಸ್ ಆಗುತ್ತಿದೆ ಉದಾಹರಣೆಗೆ ಹೇಳುವುದಾದರೆ ಹೆಗ್ಗಡದೇವನ ಕೋಟೆಯಲ್ಲಿ ಗಿರಿಜನರ ಅಭಿವೃದ್ಧಿಗಾಗಿ ಇಟ್ಟಿರತಕ್ಕ ಬೇಕಾದಷ್ಟು ಹಣ ಲ್ಯಾಪ್ಸ್ ಆಗಿದೆ ಅದನ್ನು ಕೂಡಲೆ ಸರಿಪಡಿಸಬೇಕೆಂದು ಹೇಳುತ್ತೇನೆ. ಸಹಕಾರ ಇಲಾಖೆಯಲ್ಲಿ ಈಗ ಒಳ್ಳೆಯ ಮಂತ್ರಿಗಳಿದ್ದಾರೆ ಅದೇ ರೀತಿ ಒಳ್ಳೆಯ ಅಧಿಕಾರಿಗಳೂ ಸಹ ಇದ್ದಾರೆ. ಕಾರ್ಯದರ್ಶಿಯವರು ಸಹ ಒಳ್ಳೆಯವರು ಇದ್ದಾರೆ ಸಹಕಾರ ಇಲಾಖೆಯ ರಿಜಿಸ್ಟ್ರಾರ್‌ರವರು ಸಹ ಒಳ್ಳೆಯ ಅಧಿಕಾರಿಗಳಿದ್ದಾರೆ. ತಾವು ಒಳ್ಳೆಯ ಕೆಲಸವನ್ನು ಮಾಡಿ ಕೀರ್ತಿ ಪಡೆದುಕೊಳ್ಳಿ ಎಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಾರಿಗೆ ಇಲಾಖೆಯ ಬಗ್ಗೆ ಹೇಳುವುದಾದರೆ, ಹಲವಾರು ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೂ ಬಸ್ಸುಗಳೇ ಇರುವುದಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ರೀತಿ ಪ್ರವೇಟ್‌ನವರಿಗೆ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಅದೇರೀತಿ ಪ್ರತಿ ಜಿಲ್ಲೆಯಲ್ಲೂ ಪ್ರವೇಟ್‌ನವರಿಗೆ ಬಸ್ಸುಗಳನ್ನು ಓಡಿಸುವುದಕ್ಕೆ ಅವಕಾಶ ಮಾಡಿಕೊಡಿ ಖಾಸಗಿಯವರು ಬಸ್ಸುಗಳನ್ನು ಓಡಿಸಿದರೆ ಸಾರ್ವಜನಿಕರಿಗೆ ರೈತರಿಗೆ ಅನುಕೂಲವಾಗುತ್ತದೆ. ಆ ರೀತಿ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ಹಲವಾರು ಸಾರಿ ಈ ವಿಚಾರವನ್ನು ತಂದಿದ್ದೇನೆ. ಬೆಂಗಳೂರು–ಮೈಸೂರು, ಮೈಸೂರು–ಬೆಂಗಳೂರಿಗೆ ನಾನ್‌ಸ್ಟಾಪ್ ಬಸ್ಸುಗಳನ್ನು ಓಡಿಸುತ್ತಾರೆ. ಆ ಬಸ್ಸುಗಳನ್ನು ಮಧ್ಯದಲ್ಲಿ ಅವರಿಗೆ ಎಲ್ಲಿ ಬೇಕೋ ಅಲ್ಲಿ ನಿಲ್ಲಿಸುತ್ತಾರೆ ಒಂದು ಕಡೆ ನಿಗದಿಯಾಗಿ ಎಲ್ಲೂ ನಿಲ್ಲಿಸುವುದಿಲ್ಲ. ಅಲ್ಲಿ ಪದಾರ್ಥಗಳಿಗೆ ಒಂದಕ್ಕೆ ನಾಲ್ಕರಷ್ಟು ಬೆಲೆ ಇರುತ್ತದೆ. ಒಂದು ಸಾರಿ ಮದ್ದೂರಿನಲ್ಲಿ ನಿಲ್ಲಿಸುತ್ತಾರೆ ಒಂದು ಸಾರಿ ಚನ್ನಪಟ್ಟಣದಲ್ಲಿ ನಿಲ್ಲಿಸುತ್ತಾರೆ, ಮತ್ತೊಂದು ಸಾರಿ ಮಂಡ್ಯದಲ್ಲಿ ನಿಲ್ಲಿಸುತ್ತಾರೆ. ಇದಕ್ಕೆ ಒಂದು ನಿಯಮ ಇಲ್ಲ. ಆದಕ್ಕೋಸ್ಕರ ಸಾರಿಗೆ ಸಂಸ್ಥೆಯವರು ೧೦ ಎಕರೆ ಜಮೀನನ್ನು ತೆಗೆದುಕೊಂಡು ಬಸ್ಸುಗಳು ಒಂದು ಕಡೆ ನಿಲ್ಲುವ ಹಾಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಮತ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರತಕ್ಕ ಹೋಟೆಲ್‌ಗಳು ಒಂದೂ ಸಹ

ಸರಿಯಿಲ್ಲ ಬಹುಶಃ ನೀವು ಸಾರಿಗೆ ಸಚಿವರಾದ ಮೇಲೆ ಎಷ್ಟು ಸಾರಿ ಹೋಟೆಲ್‌ಗಳನ್ನು ಇನ್ಸ್‌ಪೆಕ್ಷನ್ ಮಾಡಿದ್ದೀರೊ ಗೊತ್ತಾಗಿಲ್ಲ. ಆ ಹೋಟೆಲ್‌ಗಳಲ್ಲಿ ತಿಂದವರಿಗೆ ಕಾಯಿಲೆ ಬರುತ್ತದೆ ಎಂದು ಈಗಾಗಲೆ ಹೇಳಿದೆ ಆ ಹೋಟೆಲ್‌ಗಳಲ್ಲಿ ರುಚಿ ಶುಚಿ ಏನೂ ಇಲ್ಲ. ದಯಮಾಡಿ ಅವುಗಳನ್ನು ಶುಚಿಪಡಿಸಿ ಸರಿ ಮಾಡ ಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಇಲಾಖೆಯ ಬಗ್ಗೆ ಹೇಳುವುದಾದರೆ ಸಂಬಂಧಪಟ್ಟ ಮಂತ್ರಿಗಳು ಈಗ ಸಭೆಯಲ್ಲಿಲ್ಲ. ನ್ಯಾಯಬೆಲೆ ಅಂಗಡಿಗಳಿಗೆ ಏನು ಅಕ್ಕಿಯನ್ನು ಕೊಡುತ್ತಾರೆ ಅದೆಲ್ಲ ಹೊಸ ಅಕ್ಕಿ ರೈತರಿಂದ ಬತ್ತವನ್ನು ಕೊಂಡುಕೊಂಡು ಫುಡ್ ಕಾರ್ಪೊರೇಷನ್‌ರವರು ಅಕ್ಕಿಯನ್ನು ಸ್ಟಾಕ್ ಮಾಡುತ್ತಾರೆ. ಹೊಸ ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಗಳಿಗೆ ವಿತರಣೆ ಮಾಡಿ ಹಳೆಯ ಅಕ್ಕಿಯನ್ನು ಅವರೇ ಇಟ್ಟುಕೊಳ್ಳುತ್ತಾರೆ ಈ ತರಹ ಬದಲಾಯಿಸುತ್ತಾರೆ ಸೀಸನ್‌ನಲ್ಲಿ ಸಾವಿರಾರು ಕ್ವಿಂಟಾಲ್ ಹೊಸ ಅಕ್ಕಿಯನ್ನು ಕೊಂಡುಕೊಂಡು ಅದನ್ನು ಬದಲಾವಣೆ ಮಾಡಿ ಹಳೆಯ ಅಕ್ಕಿಯನ್ನು ಅವರು ಇಟ್ಟುಕೊಂಡು ಹೊಸ ಅಕ್ಕಿಯನು ಜನರಿಗೆ ಹಂಚುತ್ತಾರೆ. ಆದ್ದರಿಂದ ಹಳೆಯ ಅಕ್ಕಿ ಸಮರ್ಪಕವಾದ ರೀತಿಯಲ್ಲಿ ವಿತರಣೆಯಾಗಬೇಕು. ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸಚಿವರ ಹೇಳಿಕೆ

ಕೂಲಿ ಕೆಲಸಕ್ಕಾಗಿ ಹೋಗಿದ್ದ ಕರ್ನಾಟಕದ ಯುವಕ ಮಹಾರಾಷ್ಟ್ರದಲ್ಲಿ ಸತ್ತಿರುವ ಬಗ್ಗೆ

† ಶ್ರೀ ಎಂ. ವೀರಪ್ಪ ಮೊಯಿಲಿ: (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಉಪಾಧ್ಯಕ್ಷಿಣೀಯವರೆ, ಬೆಳಿಗ್ಗೆ ತಾನೇ ಮಾನ್ಯ ವಿರೋಧಪಕ್ಷದ ಉಪನಾಯಕರು ಮಹಾರಾಷ್ಟ್ರದಲ್ಲಿ ನಡೆದಂತಹ ಒಂದು ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದರು. ಅವರು ಇಲ್ಲಿ ಇದ್ದಿದ್ದರೆ ಒಳ್ಳೆಯದಿತ್ತು ಅದರ ಬಗ್ಗೆ ನಾವು ಮಹಾರಾಷ್ಟ್ರದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಇಂಟೆಲಿಜೆನ್ಸ್ ಬ್ರಾಂಚ್, ಮತ್ತು ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿದ್ದೇವೆ. ಮಾತನಾಡಿದ ಮೇಲೆ ನಾನು ಈಗ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕೆಳಕಂಡ ಹೇಳಿಕೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

Namdev Ambadas Bhagde, aged 16 years, son of Ambadas, hailing from Gulbarga, was residing in Tul japur in Umanabad district, Maharashtra. On 21 June 1990 at 2100 hours, he was picked by the Police staff of Tul japur Police Station for his alleged inolvement in theft cases. Later in the early hours of next day, he was left in his house in unconscious state by the Police. Subsequently he died. His father complained to the Police. There was demonstration in front of the Police Station. The demonstrators pelted stones and teargas was used to quell the rioters. On preliminary enquiry & on receipt of the Post-Mortem examination which revealed external injuries, a case of murder has been registered against Sub-Inspector Kakade and 6 other Constables. They have been arrested and are in judicial custody. They are placed under suspension. Further investigation is in progress.

I have ascertained from the Addl. Chief Secretary and Home Commissioner, Maharashtra Government and learnt that this matter came up before the Maharashtra Legislative Assembly as an Adjournment Motion which was later on converted into a Two Hour discussion wherein the Chief Minister condemned the deplorable incident and has promised that the culprits are brought to book. The matter has been referred to C.I.D. for enquiry.